# ದಕ್ಷಿಣ ಕರ್ನಾಟಕದ ಒಡಪುಗಳು



ಪಿ.ಎನ್. ಶಿವರಾಮು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು

# ದಕ್ಷಿಣ ಕರ್ನಾಟಕದ ಒಡಪುಗಳು

ಸಂಪಾದಕ
ವಿ. ಎನ್. ಶಿವರಾಮು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ನೃಪತುಂಗ ರಸ್ತೆ : : ಬೆಂಗಳೂರು-೨.

DAKSHINA KARNATAKADA ODAPUGALU - A Collection of 'Odapu' (Naming Riddle) form of Kannada Folklore in South Karnataka area. Collected and Edited by V. N. Shivaramu
Published by Karnataka Janapada and Yakshagana Academy, Nrupatunga Road, Bangalore-560 002. xxxxii + 132 Pages
Price : Rs. 20 First Edition : 1993

ಹಕ್ಕುಗಳು : ವಿಜಯ ಶಿವರಾಮು

ಮೊದಲ ಮುದ್ರಣ : ೧೯೯೩

ಬೆಲೆ : ರೂ. ೨೦-೦೦

ಪ್ರಧಾನ ಸಂಪಾದಕರು :
ಡಾ. ಜೀ. ಶಂ. ಪರಮಶಿವಯ್ಯ
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾಗ ಅಕಾಡೆಮಿ

ಮುಖಪುಟ ವಿನ್ಯಾಸ : ಹೆಚ್. ಎಸ್. ಪಾಠಕ್

ಪ್ರಕಾಶಕರು :
ಶ್ರೀ ಎಂ. ಎಸ್. ಸಿದ್ದೇಗೌಡ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

ಮುದ್ರಕರು :
ರೋಹಿಣಿ ಪ್ರಿಂಟರ್ಸ್
ನಂ. ೨, ಕೆ. ವಿ. ಲೇನ್, ಅರಳೇಪೇಟೆ, ಬೆಂಗಳೂರು-೫೬೦ ೦೫೩

**ಅರ್ಪಣೆ**

ಅಪ್ಪ ಸ್ವೂ॥ ಮಾ॥ ಸಿ. ನಂಜೇಗೌಡ
ಹಾಗೂ
ಅವ್ವ ನಾಗಮ್ಮ
ಅವರಿಗೆ
ಪ್ರೀತಿಯಿಂದ

## ಪ ರಿ ವಿ ಡಿ


| | | ಪುಟ |
|---|---|---|
| ಅಧ್ಯಕ್ಷರ ಮಾತು | .... | vii |
| ಅರಿಕೆ | .... | xi |
| ಪ್ರಸ್ತಾವನೆ | .... | xiv |
| ಹೆಂಗಸರು ಹೇಳುವ ಒಡಪುಗಳು | .... | ೧ |
| ಗಂಡಸರು ಹೇಳುವ ಒಡಪುಗಳು | .... | ೯೩ |
| **ಅನುಬಂಧಗಳು–೧** | | |
| ಹೆಸರು ಹೇಳಿಸುವ ಮತ್ತು ಹೇಳುವ ಹಾಡುಗಳು | .... | ೧೦೩ |
| ಒಡಪುಗಳ ಪ್ರಾದೇಶಿಕ ವರ್ಗೀಕರಣ | .... | ೧೦೯ |
| ವಿಶಿಷ್ಟ ಪದ, ವಿಷಯ, ವಸ್ತು, ಹೆಸರುಗಳ ಸೂಚಿ | .... | ೧೧೨ |
| ಅರ್ಥ, ವಿವರಣೆ, ಟಿಪ್ಪಣಿಗಳು | .... | ೧೨೦ |
| ಒಡಪುಗಳನ್ನು ಹೇಳಿದವರು | .... | ೧೨೫ |
| **ಅನುಬಂಧಗಳು–೨** | | |
| ಕುಂಬಳಕಾಯಿ ಆಟ | .... | ೧೨೭ |
| ತಿಂಗಳು ಮಾವನ ಮದುವೆ | .... | ೧೨೮ |
| ಗಡ್ಡ ಮೀಸೆ ಬಂದಿದ್ದೊ | .... | ೧೩೦ |
| ಅದೊಂದ್ಕೋಸ್ಕರ ಸುಮ್ನಿದ್ದೀನಿ | .... | ೧೩೦ |

# ಅಧ್ಯಕ್ಷರ ಮಾತು

ಜಾನಪದ, ಸಮಗ್ರ ಜೀವನದ ಎಲ್ಲ ಸಂದರ್ಭಗಳಿಗೂ ಅನ್ವಯವಾಗುವಂತೆ ವ್ಯಾಪಕವಾದ ಹಿನ್ನೆಲೆಯಲ್ಲಿ ಬೆಳೆದುಬಂದಿದೆ. ಮಾನವನ ವ್ಯವಹಾರಗಳು, ಸಂಪ್ರದಾಯಗಳು ಜಾನಪದದಲ್ಲಿ ಹಾಸು ಹೊಕ್ಕಾಗಿ ಬೆರೆತು ಜನಪದ ಸಂಸ್ಕೃತಿಗೆ ತೋರ್ಬೆರಳಾಗಿ ನಿಂತಿದೆ. ಜನಸಾಮಾನ್ಯರ ಪಾಲಿಗೆ ಜಾನಪದವೇ ಒಂದು ಜ್ಞಾನದ ನಿಧಿ. ಜೀವನಾನುಭವದ ಒಂದು ರಸಗಟ್ಟಿಯಾಗಿ ಅದು ಜನಪದರ ಬದುಕಿಗೆ ದಾರಿದೀಪವಾಗಿದೆ. ಜನಪದರು ಅನಕ್ಷರಸ್ಥರಾದರೂ ಜಾನಪದ ಅವರ ಪಾಲಿಗೆ ಜೀವನಾನುಭವವನ್ನು ಒದಗಿಸುವ ಜ್ಞಾನಸುಧೆ ಎನಿಸಿದೆ. ಈ ದೃಷ್ಟಿಯಿಂದ ಜನಪದರು ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೂರಾರು ಗ್ರಂಥಗಳಲ್ಲಿ ದೊರೆಯುವ ಜ್ಞಾನದ ಸೆಲೆಗಳನ್ನು ಅವರಿಗೆ ಬದುಕಿನ ಅನುಭವವೇ ದೊರಕಿಸುತ್ತದೆ. ಈ ದೃಷ್ಟಿಯಿಂದ ಮಾನವನ ಜ್ಞಾನ ಶಾಖೆಗಳಲ್ಲಿ ಜಾನಪದಕ್ಕೆ ವಿಶೇಷ ಸ್ಥಾನವಿದೆ.

ಮಾನವನ ಸರ್ವ ವ್ಯವಹಾರಗಳಿಗೂ ಜಾನಪದ ಅಡಿಗಲ್ಲಾಗಿ ನಿಂತಿದೆಯಾದುದರಿಂದ ಅದು ಅನೇಕ ಶಾಖೆಗಳಲ್ಲಿ ಹೊರಹೊಮ್ಮಿದೆ. ಪ್ರಪಂಚದ ಯಾವುದೇ ಸಂಸ್ಕೃತಿಯನ್ನು ತೆಗೆದುಕೊಂಡರೂ ಜಾನಪದದ ಪ್ರಮುಖ ಪ್ರಕಾರಗಳು ಒಂದೇ ಆಗಿ ಕಂಡುಬರುವುದು ಒಂದು ಸೋಜಿಗದ ಸಂಗತಿ. ಜನಪದ ಕಥೆ, ಗೀತೆ, ಒಗಟು, ಗಾದೆ, ಕಾವ್ಯ, ನಂಬಿಕೆ, ಸಂಪ್ರದಾಯ, ವೈದ್ಯ, ಕ್ರೀಡೆ, ಆಚರಣೆಗಳು ಮುಂತಾದ ಶಾಖೆಗಳು ಎಲ್ಲ ಸಂಸ್ಕೃತಿಯಲ್ಲೂ ಹುಟ್ಟಿಕೊಂಡಿವೆ. ಪ್ರಪಂಚದ ಎಲ್ಲ ಕಡೆಗಳಲ್ಲೂ ನಡೆದಿರುವ ಜಾನಪದ ಸಂಶೋಧನೆಯ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಬಹುದಾದರೂ ಕರ್ನಾಟಕದಲ್ಲಿ ಕಂಡುಬರುವ 'ಒಡಪು' ಪ್ರಪಂಚದ ಯಾವ ಸಂಗ್ರಹದಲ್ಲೂ ಕಂಡುಬರುವುದಿಲ್ಲ. ಬಾಗ್ಸ್ ಅವರ ಸಮಗ್ರ ವರ್ಗೀಕರಣವನ್ನು ಅವಲೋಕಿಸಿದರೆ ಒಡಪು ಪ್ರಕಾರಕ್ಕೆ ಅಲ್ಲಿ ಸ್ಥಾನವೇ ದೊರಕಿಲ್ಲ. ಎಷ್ಟೋ ಅಜ್ಞಾತ ಪ್ರಕಾರಗಳು ಪ್ರಪಂಚದ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಇನ್ನೂ ಇರಬಹುದು ಎಂಬ ನಂಬಿಕೆಯಿಂದ ಅವರು ತಮ್ಮ ವರ್ಗೀಕರಣದಲ್ಲಿ ಅನೇಕ ಪ್ರಕಾರಗಳಿಗೆ ಅವಕಾಶವನ್ನು ತೆರವಾಗಿ ಉಳಿಸಿದ್ದಾರೆ. ಕರ್ನಾಟಕದ ಒಡಪು ಈಗ ಆ ವರ್ಗೀಕರಣದ ಕಕ್ಷೆಗೆ ಸೇರಿಕೊಳ್ಳಬೇಕಾಗಿದೆ.

ಒಡಪು ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿದೆ ಎಂದು ಹೇಳಲಾಗುವುದಿಲ್ಲ. ಇದು ದ್ರಾವಿಡ ಸಂಸ್ಕೃತಿಯ ಕೊಡುಗೆ ಇದ್ದರೂ ಇರಬಹುದು. ಇತರ ದ್ರಾವಿಡ ಭಾಷೆಗಳ ಜಾನಪದ ಶಾಖೆಗಳನ್ನು ಸಮಗ್ರವಾಗಿ ಗುರುತಿಸಿದಾಗ ಇದರ ಬಗ್ಗೆ ಖಚಿತ ತೀರ್ಮಾನಕ್ಕೆ ಬರಲು ಸಾಧ್ಯ. ಉತ್ತರ ಭಾರತದ ಬೇರೆ ಬೇರೆ ರಾಜ್ಯಗಳಲ್ಲೂ ಈ ಬಗ್ಗೆ ಅಧ್ಯಯನ ನಡೆಯಬೇಕು. ಭಾರತದಲ್ಲಿ ಕರ್ನಾಟಕವನ್ನು ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಜಾನಪದ ಅಧ್ಯಯನ

ಸಾಹಿತ್ಯ ಪ್ರಕಾರಗಳನ್ನು ಬಿಟ್ಟು ಆಚೆಗೆ ಕೈ ಚಾಚಿಯೇ ಇಲ್ಲ. ಹೀಗಾಗಿ ಭಾರತೀಯ ಜಾನಪದ ಪ್ರಕಾರಗಳ ಬಗ್ಗೆ ಅದರ ಸಮಾನಾಂಶಗಳ ಬಗ್ಗೆ ತೌಲನಿಕವಾಗಿ ಮಾತನಾಡಲು ಈಗ ಸಾಧ್ಯವಾಗುವುದಿಲ್ಲ.

ಕನ್ನಡದಲ್ಲಿ ಒಗಟು, ಒಡಪು,ಒಡಬು ಎಂಬ ಶಬ್ದಗಳ ಕಡೆಗೆ ಮೂರು ಪ್ರತ್ಯೇಕ ಜಾನಪದ ಪ್ರಕಾರಗಳೇ ಸೇರಿರುವುದನ್ನು ಕಾಣಬಹುದು. ಒಗಟು (Riddle) ಸುಪ್ರಸಿದ್ಧ ಜಾನಪದ ಪ್ರಕಾರಗಳಲ್ಲಿ ಒಂದು. ಇದು ಸಾಮಾನ್ಯವಾಗಿ ಎಲ್ಲ ಸಂಸ್ಕೃತಿಗಳಲ್ಲೂ ಕಂಡುಬರುತ್ತದೆ. ಕನ್ನಡದಲ್ಲಿ ಶಿಷ್ಟಮೂಲದ ಜಾನಪದ ಮೂಲದ ಒಗಟುಗಳಿವೆ. ಒಡಪು ಮತ್ತು ಒಡಬು ಕನ್ನಡ ಜಾನಪದದ ವಿಶಿಷ್ಟ ಪ್ರಕಾರಗಳು. ಒಡಪು ಮದುವೆಯ ಸಂದರ್ಭದಲ್ಲಿ ಹೆಣ್ಣು, ಗಂಡಿನ ಹೆಸರನ್ನೂ;ಗಂಡು,ಹೆಣ್ಣಿನ ಹೆಸರನ್ನೂ ಹೇಳುವುದಕ್ಕಾಗಿಯೇ ಹುಟ್ಟಿಕೊಂಡ ವಿಶಿಷ್ಟ ರಚನೆ. ಇವು ತುಂಬಾ ಅರ್ಥಗರ್ಭಿತವಾಗಿದ್ದು ಕಲ್ಪನಾರಮ್ಯತೆ ಹಾಗೂ ಕಲಾತ್ಮಕತೆಯ ಮೆರುಗಿನಿಂದ ಕೂಡಿರುತ್ತವೆ. 'ಒಡಬು' ಲಿಂಗದಬೀರರು, ವೀರಗಾಸೆಯವರು, ಪುರವಂತರು ಹೇಳುವ ವೀರಭದ್ರನ ಮಹಿಮೆಯನ್ನೊಳಗೊಂಡ ಒಂದು ಕಥನಾತ್ಮಕ ರಚನೆ. ವೀರಭದ್ರನೇ ಅಲ್ಲದೆ ಇನ್ನೂ ಅನೇಕ ದೈವಗಳಿಗೆ ಸಂಬಂಧಿಸಿದಂತೆ ಒಡಬುಗಳು ಕಂಡುಬರುತ್ತವೆ. ದಕ್ಷಿಣ ಕರ್ನಾಟಕದಲ್ಲಿ 'ಕಡ್ಗ' ಎಂದೂ ಉತ್ತರ ಕರ್ನಾಟಕದಲ್ಲಿ 'ಒಡೆಬು' ಎಂದೂ ಈ ಪ್ರಕಾರವನ್ನು ಗುರುತಿಸಲಾಗುತ್ತದೆ.

ಕನ್ನಡದಲ್ಲಿ ಒಡಪುಗಳ ಬಗ್ಗೆ ವಿದ್ವಾಂಸರು ಸಾಕಷ್ಟು ದೃಷ್ಟಿಹರಿಸಿದ್ದಾರೆ. ಕರ್ನಾಟಕದಾದ್ಯಂತ ಇತ್ತೀಚಿನ ದಿನಗಳಲ್ಲಿ ಆರಂಭವಾದ ಜಾನಪದ ಅಧ್ಯಯನ ಚಳುವಳಿ ಹೊಸ ಹೊಸ ಪ್ರಕಾರಗಳನ್ನು ಬೆಳಕಿಗೆ ತಂದಂತೆ ಒಡಪು ಪ್ರಕಾರವನ್ನು ಗುರುತಿಸಿದೆ. ಉತ್ತರ ಕರ್ನಾಟಕದ ಕಡೆಯಿಂದ ಈಗಾಗಲೇ ಸಾಕಷ್ಟು ಒಡಪು ಸಂಕಲನಗಳು ಬೆಳಕು ಕಂಡಿವೆ. ದಕ್ಷಿಣ ಕರ್ನಾಟಕದಲ್ಲಿ ಈ ಬಗ್ಗೆ ಜಾನಪದ ವಿದ್ವಾಂಸರು ದೃಷ್ಟಿ ಹರಿಸದೇ ಇದ್ದ ಕಾರಣ ಈ ಭಾಗದಲ್ಲಿ ಒಡಪು ಹೇಳುವ ಸಂಪ್ರದಾಯವೇ ಇಲ್ಲ ಎಂಬ ಭಾವನೆ ಮೂಡಲು ಕಾರಣವಾಯಿತು. ಆದರೆ ಶ್ರೀ ವಿ. ಎನ್. ಶಿವರಾಮು ಅವರು ಈ ಭಾವನೆಯನ್ನು ಈಗ ಸುಳ್ಳಾಗಿಸಿದ್ದಾರೆ. ದಕ್ಷಿಣ ಕರ್ನಾಟಕದ ಅನೇಕ ಭಾಗಗಳಲ್ಲಿ ಅವರು ಸಂಚರಿಸಿ ತಮ್ಮ ಬಹು ವರ್ಷಗಳ ಪರಿಶ್ರಮದ ಫಲವಾಗಿ ೭೦೦ಕ್ಕೂ ಹೆಚ್ಚು ಒಡಪುಗಳನ್ನು ಸಂಗ್ರಹಿಸಿ 'ದಕ್ಷಿಣ ಕರ್ನಾಟಕದ ಒಡಪುಗಳು' ಸಂಕಲನವನ್ನು ಸಿದ್ಧಗೊಳಿಸಿದ್ದಾರೆ. ಅಜ್ಞಾತ ಜಾನಪದ ಶಾಖೆಯೊಂದು ದಕ್ಷಿಣ ಕರ್ನಾಟಕದ ವಿವಿದೆಡೆಗಳಲ್ಲಿ ಗುರುತಿಸಲ್ಪಟ್ಟಿರುವುದು ಜಾನಪದ ಸಂಶೋಧಕರ ದೃಷ್ಟಿಯಿಂದ ಮಹತ್ವದ ವಿಷಯವಾಗಿದೆ. ಈ ಕಾರಣಕ್ಕಾಗಿ ಉತ್ಸಾಹಿ ಜಾನಪದ ವಿದ್ವಾಂಸರಾದ ಶ್ರೀ ಶಿವರಾಮು ಅವರನ್ನು ನಾನು ಮನಸಾರೆ ಅಭಿನಂದಿಸುತ್ತೇನೆ.

ಶ್ರೀ ವಿ. ಎನ್. ಶಿವರಾಮು ಅವರು ಮಾನಸಗಂಗೋತ್ರಿಯ ಕನ್ನಡ ಅಧ್ಯ



ಯನ ಸಂಸ್ಥೆಯಲ್ಲಿ ನನ್ನ ವಿದ್ಯಾರ್ಥಿಯಾಗಿದ್ದವರು. ಮೊದಲನೇ ವರ್ಗ ಹಾಗೂ ಸ್ಥಾನದಲ್ಲಿ ಜಾನಪದ ಎಂ. ಎ. ಪದವಿ ಪಡೆದವರು. ಜಾನಪದದಲ್ಲಿ ವಿಶೇಷವಾದ ಒಲವನ್ನು ಮೊದಲಿನಿಂದಲೂ ಬೆಳೆಸಿಕೊಂಡು ಬಂದವರು. ಮೈಸೂರು ವಿಶ್ವವಿದ್ಯಾನಿಲಯದ ಜನಪದ ಕಲಾಕೂಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. ಮೂಡಲಪಾಯ ಯಕ್ಷಗಾನದಲ್ಲಿ ಇವರಿಗೆ ವಿಶೇಷವಾದ ಸ್ಥಾನವನ್ನು ನೀಡಲಾಗಿತ್ತು. ಈ ಮೂಲಕ ಇವರು ಪ್ರತಿಭಾಶಾಲಿ ಕಲಾವಿದರೂ ಎನಿಸಿದ್ದಾರೆ. ಜಾನಪದವನ್ನು ಆಳವಾಗಿ ಅಭ್ಯಾಸ ಮಾಡಿರುವ ಶ್ರೀಯುತರು ಆ ಕುರಿತಂತೆ ನಿರರ್ಗಳವಾಗಿ ಮಾತನಾಡಬಲ್ಲರು. ಹತ್ತಾರು ಜಾನಪದ ವಿಚಾರ ಸಂಕಿರಣಗಳಲ್ಲಿ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿರುವ ಇವರು ಅವನ್ನು ಪುಸ್ತಕ ರೂಪದಲ್ಲೂ ಹೊರ ತಂದಿದ್ದಾರೆ. ಕರ್ನಾಟಕ ಜಾನಪದ ಪರಿಷತ್ತಿನ ಬೆಳವಣಿಗೆಯಲ್ಲಿ ಇವರ ದುಡಿಮೆಗೆ ವಿಶೇಷವಾದ ಸ್ಥಾನವಿದೆ. ಶ್ರೀ ಶಿವರಾಮು ಅವರು ದಕ್ಷ ಕ್ಷೇತ್ರ ಕಾರ್ಯಕರ್ತರು. ಜಾನಪದವನ್ನು ತಮ್ಮ ಬದುಕಿನ ಉಸಿರಾಗಿ ಮಾಡಿಕೊಂಡವರು. ಅನೇಕ ಜಾನಪದ ವಿದ್ವಾಂಸರು ಬಹು ಸುಲಭವಾಗಿ ಲಭ್ಯವಾಗುವ ಕಥೆ, ಗೀತೆ, ಕಥನಗೀತೆ, ಕಾವ್ಯ ಇತ್ಯಾದಿಗಳನ್ನು ಸಂಗ್ರಹಿಸಿಕೊಂಡರೆ ಇವರು ವಿರಳವಾಗಿ ಲಭ್ಯವಾಗುವ ಒಡಪು ಪ್ರಕಾರದ ಬೆನ್ನು ಹತ್ತಿ ನೂರಾರು ಸಂಖ್ಯೆಯಲ್ಲಿ ಅವುಗಳನ್ನು ಸಂಗ್ರಹಿಸಿ ತಂದು ದಕ್ಷಿಣ ಕರ್ನಾಟಕದಲ್ಲಿ ಕಂಡು ಬಂದಿದ್ದ ಒಂದು ಕೊರತೆಯನ್ನು ತುಂಬಿದ್ದಾರೆ. ಇಂಥ ಸಂಗ್ರಹ ಕಾರ್ಯಕ್ಕೆ ಸಾಹಸ ಮನೋಭಾವ, ನಿಷ್ಠೆ, ಸಮರ್ಪಣ ಭಾವಗಳು ಮುಖ್ಯ. ಶ್ರೀ ಶಿವರಾಮು ಈ ನಿಟ್ಟಿನಲ್ಲಿ ಎಲ್ಲರ ಮೆಚ್ಚಿಗೆಗೂ ಪಾತ್ರರಾಗುವಂಥ ಕೆಲಸವನ್ನು ಮಾಡಿ ಒಳ್ಳೆಯ ದಾಖಲೆಯನ್ನು ಸ್ಥಾಪಿಸಿದ್ದಾರೆ. ಕೇವಲ ಒಡಪುಗಳನ್ನಲ್ಲದೆ, ಕೆಲವು ಒಡಪು ಹಾಡುಗಳನ್ನೂ ಅವರು ಗುರುತಿಸಿರುವುದು ಮೆಚ್ಚತಕ್ಕ ವಿಷಯ. ಅಕಾಡೆಮಿಯ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇತ್ತೀಚೆಗೆ ಜಾನಪದ ಕೃತಿಗಳ ಪ್ರಕಟಣೆಗೆ ಆದ್ಯತೆಯನ್ನು ನೀಡಿದೆ. ಅದರಲ್ಲೂ ವಿಶಿಷ್ಟ ಪ್ರಕಾರಗಳಿಗೆ ಸಂಬಂಧಿಸಿದ ಕೃತಿಗಳನ್ನು ಹೊರತರುವ ಉದ್ದೇಶವನ್ನು ಹೊಂದಿದೆ. ಶಿವರಾಮು ಅವರ 'ದಕ್ಷಿಣ ಕರ್ನಾಟಕದ ಒಡಪುಗಳು' ಕೃತಿ ಈ ಉದ್ದೇಶವನ್ನು ಸಾರ್ಥಕಗೊಳಿಸಿದೆ.

ಬೆಂಗಳೂರು
೧೯–೮–೧೯೭೩

**ಜೀ. ಶಂ. ಪರಮಶಿವಯ್ಯ**

# ಅರಿಕೆ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ಎಂ. ಎ. ವಿದ್ಯಾರ್ಥಿಗಳು ಮೊದಲನೆ ವರ್ಷ ೫೦ ಅಂಕಗಳಿಗೆ ಯಾವುದಾದರೂ ಜಾನಪದ ಪ್ರಕಾರವನ್ನು ಕುರಿತು ಕ್ಷೇತ್ರಕಾರ್ಯ ಮಾಡಿ ಒಪ್ಪವಾಗಿ ಬರೆದುಕೊಡಬೇಕು. ೧೯೭೯–೮೦ನೇ ಸಾಲಿನ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ಜಾನಪದ ವಿಭಾಗದ ಮುಖ್ಯಸ್ಥರಾದ ಪ್ರಾಧ್ಯಾಪಕ ಡಾ. ಜೀಶಂಪ ಅವರು ವಿದ್ಯಾರ್ಥಿಗಳ ಆಸಕ್ತಿಯ ವಿಷಯಗಳನ್ನು ಕೇಳಿ ತಿಳಿದು ಮಾಹಿತಿ ಸಂಗ್ರಹಿಸುವಾಗ ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ವಿವರಿಸುತ್ತಿದ್ದಾಗ, ನಾನು ನಮ್ಮ ಸುತ್ತಿನ ಗಾದೆ, ಒಗಟುಗಳನ್ನು ಸಂಗ್ರಹಿಸುತ್ತೇನೆ ಸಾರ್ ಅಂದೆ. ಜನಪದ ಭಾಷಿಕ ಬಗೆಗಳಾದ ಗಾದೆ, ಒಗಟುಗಳ ಬಗ್ಗೆ ಮಾತನಾಡುತ್ತ ಉತ್ತರ ಕರ್ನಾಟಕ ಭಾಗದಲ್ಲಿ 'ಒಡಪು' ಎಂಬ ಹೆಸರಿನಲ್ಲಿ ಪ್ರಚಲಿತವಿರುವ ವಿಶಿಷ್ಟ ಪ್ರಕಾರದ ಬಗ್ಗೆ ಪ್ರೊಫೆಸರ್ ನನ್ನ ಗಮನ ಸೆಳೆದರು. ತಕ್ಷಣ ನಾನೆಂದೆ: ಸಾರ್, ನಮ್ಮ ಕಡೆಗೂ ಇಂಥವನ್ನು ಮದುವೆ ಸಂದರ್ಭದಲ್ಲಿ ಹೆಸರು ಹೇಳಿಸುವಾಗ ಹೇಳುತ್ತಾರೆ, ಆದರೆ ಅವನ್ನು ಒಡಪು ಅನ್ನುವುದಿಲ್ಲ ಎಂದೆ. ಕುತೂಹಲ, ಆಶ್ಚರ್ಯಗಳಿಂದ, ಹಾಗಾದರೆ 'ನಮ್ಮ ಸುತ್ತಿನ ಗಾದೆ–ಒಗಟು–ಒಡಪುಗಳು' ಎಂಬ ಹೆಸರಿನಲ್ಲಿ ಸಂಗ್ರಹಕಾರ್ಯ ಮಾಡಿ ಅಂದರು.

ಪ್ರೊಫೆಸರ್ ಜೊತೆ ಮತ್ತೊಮ್ಮೆ ವಿವರವಾಗಿ ಮಾತಾಡಿದ ನಾನು ಮಧ್ಯಮಾವಧಿ ರಜೆಯಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಹಡವನಹಳ್ಳಿಯ ಸೋದರತ್ತೆ ಮನೆಗೆ ಬಂದೆ. ನನ್ನ ಒಡಪು ಶಬ್ದ ಈ ಕಡೆಗೆ ಗೊತ್ತೇ ಇಲ್ಲ. ಮದುವೆಗಳಲ್ಲಿ ಹೆಸರು ಹೇಳಿಸುವ ಸಂದರ್ಭವನ್ನು ವಿವರಿಸಿ ಇಂಥ ನುಡಿಗಳ ಬಗ್ಗೆ ಅವರನ್ನು ವಿಚಾರಿಸಲಾಗಿ ನೆನಸಿಕೊಂಡು ಮೂರುನಾಲ್ಕು ಒಡಪುಗಳನ್ನು ಹೇಳಿದರು. ನಂತರ ಅದೇ ಊರಿನ ಇನ್ನೂ ಕೆಲವರಲ್ಲದೆ ಪಕ್ಕದ ಕುಂಬೇನಹಳ್ಳಿ (ಹಾಸನ ಜಿಲ್ಲೆ ಶ್ರವಣಬೆಳಗೊಳ ಹೋಬಳಿ), ನಾಗಮಂಗಲ ತಾಲ್ಲೂಕು ಬಿಂಡಿಗನವಿಲೆ ಹೋಬಳಿಯ ನಮ್ಮೂರು ವಡ್ಡರಹಳ್ಳಿ, ಬೀಚನಹಳ್ಳಿಗಳಲ್ಲಿ ಕೆಲವರು ಗಾದೆ, ಒಗಟುಗಳ ಜೊತೆಗೆ ಒಡಪುಗಳನ್ನೂ ಹೇಳಿದರು.

ಮುಂದೆ ಎಂ.ಎ. ಪದವಿ ಮುಗಿಸಿದ ವರ್ಷವೇ (೧೯೮೧) ಕನ್ನಡ ಸಾಹಿತ್ಯ ಪರಿಷತ್ತಿನ 'ಕರ್ನಾಟಕ ಜನಪದ ವೈದ್ಯಕೋಶ' ಯೋಜನೆಯಲ್ಲಿ ಮಂಡ್ಯ ಜಿಲ್ಲೆಯ ಕ್ಷೇತ್ರ ಸಂಶೋಧಕನಾಗಿ ನೇಮಕಗೊಂಡುದರಿಂದ ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಸಮಯದಲ್ಲೆಲ್ಲ ಒಡಪುಗಳ ಬಗ್ಗೆ ವಿಶೇಷಗಮನ ಹರಿಸುತ್ತಾ ಬಂದೆ. ಈ ನನ್ನ ಪರಿವೀಕ್ಷಣೆಯಲ್ಲಿ ಹಲವರು ನಾನು ಈಗಾಗಲೇ ಸಂಗ್ರಹಿಸಿದ್ದ ಒಡಪುಗಳನ್ನೇ ಹೇಳಿ

ದರು. ಮತ್ತೆ ಕೆಲವರು ಇಂಥವನ್ನು ಹಿಂದೆ ಹೇಳುತ್ತಿದ್ದರು ಈಗ ಯಾರೂ ಹೇಳು ವುದಿಲ್ಲ ಅಂದರು. ಈ ಮಾಹಿತಿಗಳಿಂದ ಜಿಲ್ಲೆಯಲ್ಲೆಲ್ಲ ಈ ಪ್ರಕಾರ ಇದ್ದದ್ದರ ಬಗ್ಗೆ ತಿಳಿಯಿತು. ೧೯೮೨ರಿಂದ ೧೯೯೧ರ ವರೆಗೆ ಕರ್ನಾಟಕ ಜಾನಪದ ಟ್ರಸ್ಟಿನಲ್ಲಿ ಕಾರ್ಯ ದರ್ಶಿಯಾಗಿ 'ಜಾನಪದ ಜಗತ್ತು' ಸಂಪಾದಕನಾಗಿ ಕೆಲಸ ಮಾಡಿದ ನನಗೆ ಶ್ರೀ ಎಚ್. ಎಲ್. ನಾಗೇಗೌಡರು ಹಲವು ಕಡೆ ಕ್ಷೇತ್ರಕಾರ್ಯ ಮತ್ತಿತರ ಕೆಲಸಗಳಿಗಾಗಿ ಹೋಗಿ ಬರುವ ಅವಕಾಶ ಒದಗಿಸಿಕೊಟ್ಟರು. ಹೋದಲ್ಲೆಲ್ಲ ಒಡಪುಗಳ ಬಗ್ಗೆ ವಿಚಾರಿಸುತ್ತಾ ಬಂದೆ. ಧ್ವನಿಮುದ್ರಣ ಮತ್ತಿತರ ಕಾರಣಗಳಿಗಾಗಿ ಟ್ರಸ್ಟಿಗೆ ಬಂದವರನ್ನು ಕೇಳಿದೆ. ಹೀಗೆ ಸಿಕ್ಕಷ್ಟನ್ನು ಬರೆದುಕೊಳ್ಳುತ್ತಾ ಬಂದೆ.

ಈ ನಡುವೆ ೧೯೮೮ರಲ್ಲಿ ಚಿತ್ರದುರ್ಗ ಜಿಲ್ಲೆ ಚಿಕ್ಕಜಾಜೂರು ಸರ್ಕಾರಿ ಕಿರಿಯ ಕಾಲೇಜು ಹಾಗೂ ೧೯೮೫ರಲ್ಲಿ ಶಿವಮೊಗ್ಗ ಜಿಲ್ಲೆ ಹೊಸನಗರ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕನಾಗಿ ನನ್ನ ನೇಮಕವಾದುದರಿಂದ ಆ ಸುತ್ತಿನಲ್ಲಿ ಸಾಕಷ್ಟು ಸಂಗ್ರಹ ಕಾರ್ಯ ಮಾಡಿದೆ.

ಹೀಗೆ ಸುಮಾರು ೧೦ ವರ್ಷಗಳ ಕಾಲ ಸಂಗ್ರಹಿಸಿದ ಒಡಪುಗಳ ಆಧಾರದ ಮೇಲೆ ಎರಡು ಮೂರು ಲೇಖನಗಳನ್ನು ಬರೆದ ನಾನು ಇವನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಟಿಸುವ ಉದ್ದೇಶವನ್ನು ಗೆಳೆಯರೊಡನೆ ಹೇಳಿದಾಗ ಶ್ರೀ ಕೋಣೆನಾಗರಾಜ್ (ತಿಪಟೂರಿನಲ್ಲಿ ಬ್ಯಾಂಕೊಂದರ ಉದ್ಯೋಗಿ), ಶ್ರೀ ಜೇನಹಳ್ಳಿ ಸಿದ್ದಲಿಂಗಪ್ಪ ಹಾಗೂ ಶ್ರೀ ಮೈಲಹಳ್ಳಿ ರೇವಣ್ಣ ಅವರು ತಮ್ಮ ಕಡೆಗಿದ್ದ ಅಷ್ಟಿಷ್ಟು ಒಡಪುಗಳನ್ನು ನನ್ನ ಕಡೆಗೆ ಕೊಟ್ಟರು. ಟ್ರಸ್ಟಿನ ಶ್ರೀ ಕುರುವ ಬಸವರಾಜ್ ಅವರಂತೂ ಊರಿಗೆ ಹೋದಾಗಲೆಲ್ಲ ನನಗಾಗಿ ಒಡಪುಗಳ ಸಂಗ್ರಹ ಮಾಡಿದರು. ಹೀಗೆ ೧೯೯೧ರ ವೇಳೆಗೆ ನನ್ನಲ್ಲಿ ಸುಮಾರು ೧೩೦೦ಕ್ಕೂ ಹೆಚ್ಚು ಒಡಪುಗಳ ಸಂಗ್ರಹವಾಯಿತು. ಇವುಗಳ ಸಂಪಾದನೆಯ ಕೆಲಸಕ್ಕೆ ಕುಳಿತಾಗ ಅಂತಿಮವಾಗಿ ನನ್ನಲ್ಲಿ ಉಳಿದ ಒಡಪುಗಳು ಸುಮಾರು ೭೫೦ರಷ್ಟು. ಇವುಗಳಲ್ಲೂ ಭಿನ್ನ ಪಾಠಕ್ಕಾಗಿ ಉಳಿಸಿಕೊಂಡವನ್ನು ಅಡಿ ಟಿಪ್ಪಣಿ ರೂಪದಲ್ಲಿ ಕೊಟ್ಟಿರುವುದರಿಂದ ಕೊನೆಗೆ ಅಚ್ಚಿನ ಮನೆ ಸೇರಿದವು ೭೨೦ ಮಾತ್ರ.ಚಿತ್ರದುರ್ಗ, ಶಿವಮೊಗ್ಗ ಭಾಗದಲ್ಲಿ ಸಂಗ್ರಹಿಸಿದ್ದ ಮಿತ್ರರು ಕೊಟ್ಟ ಒಡಪುಗ ಳಲ್ಲಿ ಬಹಳಷ್ಟು ನನ್ನಲ್ಲಿ ಆಗಲೇ ಇದ್ದವುಗಳಾಗಿದ್ದವು. ಆದರೂ ಶಬ್ದ ಸ್ಪಷ್ಟತೆಗಾಗಿ ಈ ಮಿತ್ರರು ಒದಗಿಸಿದ ಒಡಪುಗಳ ಉಪಯೋಗ ಬಹಳವೇ ಆಯಿತು.

ಕಳೆದ ಮೂರು ದಶಕಗಳಿಂದ ಜಾನಪದ ಸಂಗ್ರಹಕಾರರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಾ ಬಂದಿದೆ. ಹಿರಿಯ ಜಾನಪದ ವಿದ್ವಾಂಸರಲ್ಲಂತೂ ಇನ್ನೂ ಪ್ರಕಟ ವಾಗದೇ ಉಳಿದಿರುವ ಅಪಾರ ಜಾನಪದ ಸರಕಿದೆ. ಇದನ್ನರಿತ ಜಾನಪದ ಅಕಾಡೆಮಿ ಈ ಹಿಂದೆ ಪುಸ್ತಕ ಪ್ರಕಟಣೆಗಾಗಿ ಮುದ್ರಣ ವೆಚ್ಚದ ಅರ್ಧದಷ್ಟು ಧನ ಸಹಾಯ



ಒದಗಿಸಿ ಕೆಲವರನ್ನು ಪ್ರೋತ್ಸಾಹಿಸಿದೆ. ಅಕಾಡೆಮಿ ಈ ವರ್ಷ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಆಯ್ದ ಕೆಲವು ಪುಸ್ತಕಗಳನ್ನು ತಾನೇ ಪ್ರಕಟಿಸುವ ಯೋಜನೆ ಯೊಂದನ್ನು ಹಮ್ಮಿಕೊಂಡು ಹಸ್ತ ಪ್ರತಿಗಳನ್ನು ಕಳಿಸಿಕೊಡುವಂತೆ ಕೇಳಿತು. ಸಹಜ ವಾಗಿಯೇ ನೂರರ ಹತ್ತಿರ ಹಸ್ತ ಪ್ರತಿಗಳು ಅಕಾಡೆಮಿಗೆ ಬಂದಿರಬಹುದು. ಹೀಗಿದ್ದೂ ನನ್ನ 'ದಕ್ಷಿಣ ಕರ್ನಾಟಕ ಒಡಪುಗಳು' ಹಸ್ತಪ್ರತಿಯನ್ನು ವಿಶಿಷ್ಟವೆಂದು ಪರಿಗಣಿಸಿ ಅಕಾಡೆಮಿಯ ಪುಸ್ತಕ ಪ್ರಕಟಣಾ ಸಮಿತಿ ಪ್ರಕಟಣೆಗೆ ಆಯ್ಕೆ ಮಾಡಿದೆ. ಅಕಾಡೆಮಿಯ ಅಧ್ಯಕ್ಷರೂ ನನ್ನ ವಿದ್ಯಾಗುರುಗಳೂ ಆದ ಡಾ. ಜೀಶಂಪ, ಸದಸ್ಯರೂ ನನ್ನ ಹಿತೈಷಿಗಳೂ ಆದ ಹಿರಿಯ ಸಂಶೋಧಕ ಶ್ರೀ ಹ. ಕ. ರಾಜೇಗೌಡ, ಡಾ. ಡಿ. ಕೆ. ರಾಜೇಂದ್ರ, ಡಾ. ಸೋಮಶೇಖರ ಇಮ್ರಾಪುರ ಮೊದಲಾದವರು ಈ ನನ್ನ ಪುಸ್ತಕ ಪ್ರಕಟಣೆಗೆ ವಿಶೇಷ ಒಲವು ತೋರಿದ್ದಾರೆ.

ಸಂಗ್ರಹ ಕಾರ್ಯದಲ್ಲಿ ಮಿತ್ರರೂ, ವಿದ್ಯಾರ್ಥಿಗಳೂ ಸಹಕರಿಸಿದ್ದಾರೆ. ಒಡಪು ಹೇಳಿದ ಎಲ್ಲರೂ ತಮ್ಮ ಕೆಲಸ ಬೊಗಸೆಗಳನ್ನು ಬಿಟ್ಟು, ಹೆಚ್ಚಿನ ರೀತಿಯಲ್ಲಿ ಸಹಕರಿ ಸಿದ್ದಾರೆ. ಇವರನ್ನೆಲ್ಲ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ. ಇನ್ನು ಕಳೆದ ಆರು ವರ್ಷಗಳಿಂದ ನನ್ನ ಬರವಣಿಗೆಯಲ್ಲಿ ನನ್ನ ಕೈಲಾದ ಸಹಾಯ ಮಾಡುತ್ತಾ ಬಂದಿರುವ ನನ್ನ ಬಾಳ ಸಂಗಾತಿ ಶ್ರೀಮತಿ ವಿಜಯ ಅವಳನ್ನು ಇಲ್ಲಿ ನೆನೆಯದಿರಲಾದೀತೆ ?

ವಿ. ಎನ್. ಶಿವರಾಮು

# ಪ್ರಸ್ತಾವನೆ

ಜನಪದ ಸಾಹಿತ್ಯ ಮತ್ತು ಭಾಷೆಯ ದೃಷ್ಟಿಯಿಂದ ಗಮನಾರ್ಹವೆನಿಸಿರುವ ಗಾದೆ, ಒಗಟುಗಳಂತೆ 'ಒಡಪು' ಕೂಡ ಒಂದು ಪ್ರಮುಖ ಪ್ರಕಾರ. ಗಾದೆ, ಒಗಟು, ಒಡಪುಗಳನ್ನು ಗದ್ಯ ಪ್ರಕಾರ ಎಂದು ಗುರುತಿಸಿದ್ದರೂ ಪದ್ಯದ ಲಯ, ಪ್ರಾಸ ಅನುಪ್ರಾಸಗಳ ವಿಶಿಷ್ಟ ಸಂಯೋಜನೆಯನ್ನು ಹೊಂದಿರುವುದರಿಂದ ಇವು ಗದ್ಯ ಪ್ರಕಾರಗಳಿಗಿಂತ ಭಿನ್ನವೆನಿಸುತ್ತವೆ. ವಚನ ಸಾಹಿತ್ಯ ಪ್ರಕಾರಕ್ಕೆ ಒಂದು ವಿಶಿಷ್ಟ ಸ್ಥಾನವಿರುವಂತೆ ಈ ಜಾನಪದ ಸಾಹಿತ್ಯ ಪ್ರಕಾರಗಳೂ ವಿಶಿಷ್ಟವೆನಿಸುತ್ತವೆ. ಹೇಗೆ ವಚನಗಳು ಗದ್ಯದಷ್ಟು ಸರಳವೂ ಪದ್ಯದಷ್ಟು ಕಠಿಣವೂ ಅಲ್ಲವೋ ಹಾಗೆಯೇ ಒಗಟು ಒಡಪುಗಳು ಕೂಡ.

ಮದುವೆ ಮುಂಜಿಗಳಂತ ಶುಭ ಕಾರ್ಯಗಳಲ್ಲಿ ಗಂಡ ಅಥವಾ ಹೆಂಡತಿ ತಮ್ಮ ಹೆಂಡತಿ ಅಥವಾ ಗಂಡನ ಹೆಸರು ಹೇಳಬೇಕಾದಾಗ ತನ್ನ ಪರಿಸರ ಇತ್ಯಾದಿಗಳೊಡನೆ ಸಂಬಂಧಿಸಿದ ವ್ಯಕ್ತಿಯ ಬಗ್ಗೆ ವಿಶೇಷಣಗಳನ್ನು ಸೇರಿಸಿ ವರ್ಣನಾತ್ಮಕವಾಗಿ ತಮ್ಮ ಅನುಭವಗಳನ್ನು ಹೇಳಿ ಕೊನೆಯಲ್ಲಿ ಹೆಸರು ಹೇಳುವ 'ಒಡಪು' ವೀರಭದ್ರನ ಅಥವಾ ಪುರವಂತರ'ವಡಬು'ಬೇರೆ ಬೇರೆ ಎಂದು ಈಗಾಗಲೇ ನಿರ್ಧಾರವಾಗಿದೆ. ಒಡಪು ಅಂದ ರೇನು? ಒಡಪು ಪದ ವ್ಯುತ್ಪತ್ತಿ, ಗಾದೆ–ಒಗಟು ಒಡುಪು ವಡಬುಗಳ ಸಂಬಂಧ,* ಹೋಲಿಕೆ, ವ್ಯತ್ಯಾಸ ಇತ್ಯಾದಿಗಳ ಬಗೆಗಂತೂ ಸಾಕಷ್ಟು ಚರ್ಚೆಗಳು ನಡೆದಿವೆ.

ಒಡಪುಗಳಿಗೆ ಸಂಬಂಧಿಸಿದಂತೆ ನನ್ನ ಗಮನಕ್ಕೆ ಬಂದಿರುವ ಇತ್ತೀಚಿನ ಸಂಕಲನ ಡಾ॥ ದಸ್ತಗೀರ ಅಲ್ಲೀಭಾಯಿ ಅವರ 'ಉತ್ತರ ಕರ್ನಾಟಕದ ಜನಪದ ಒಡಪುಗಳು (೧೯೯೨)'. ಇದುವರೆಗೆ ಸುಮಾರು ಹತ್ತು ಹನ್ನೆರಡು ಉತ್ತರ ಕರ್ನಾಟಕ ಭಾಗದ ಒಡಪು ಸಂಕಲನಗಳು ಪ್ರಕಟವಾಗಿವೆ. ಬಹಳಷ್ಟು ಸಂಕಲನಗಳಲ್ಲಿ ಒಡಪು ಸಂಕಲನ ಗಳ ಪಟ್ಟಿ ಇದ್ದರೂ ಎಲ್ಲರೂ ಎಲ್ಲ ಪುಸ್ತಕಗಳನ್ನೂ ಗಮನಿಸಿದಂತೆ ಕಾಣುವುದಿಲ್ಲ. ಕೆಲವಂತು ಕೆಲವುಸಂಕಲನಗಳ ಹೆಸರೇ ಎತ್ತದಿರುವುದು ಆಶ್ಚರ್ಯದ ಸಂಗತಿ.**

---

* ನೋಡಿ, ಜಾನಪದ ಅಕಾಡೆಮಿ ಪ್ರಕಟನ 'ಕರ್ನಾಟಕ ಜನಪದ' ಗ್ರಂಥದಲ್ಲಿರುವ ಸೋಮಶೇಖರ ಇಮ್ರಾಪುರ ಅವರ ಲೇಖನ, ಪುಟ-೨೨೦

** ೧೯೭೪ರಲ್ಲಿ ಪ್ರಕಟಗೊಂಡ ಡಾ॥ ಹಾ.ಮಾ. ನಾಯಕರ 'ಕನ್ನಡ ಜಾನಪದ ಗ್ರಂಥ ಸೂಚಿ'ಯಲ್ಲಿ ಹೆಸರಿಸಲಾಗಿರುವ ಸಂಗ್ರಹಗಳನ್ನು ಬಿಟ್ಟರೆ ಈಚೆಗೆ ಒಡಪುಗಳ ಸಂಕಲನಗಳೇ ಬಂದಿಲ್ಲ ವೆಂದು ಹಲವರು ತಿಳಿದಂತಿದೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ 'ಒಡಪು'ಗಳನ್ನು ಮೊದಲಬಾರಿಗೆ ಸಂಗ್ರಹಿಸಿ ತಮ್ಮ 'ಗರತಿಯರ ಮನೆಯಿಂದ (೧೯೫೫)' ಕೃತಿ ಮೂಲಕ ಪರಿಚಯಿಸಿದ ಕೀರ್ತಿ ಶ್ರೀ ಈಶ್ವರಚಂದ್ರ ಚಿಂತಾಮಣಿ ಅವರಿಗೆ ಸಲ್ಲುತ್ತದೆ ಎಂದು ಈವರೆಗಿನ ಎಲ್ಲ ಸಂಗ್ರಹಕಾರರು, ಲೇಖಕರು ಹೇಳಿದ್ದಾರೆ. ಆನಂತರ ಅಂದರೆ ೧೯೫೫ರ ನಂತರ ಬಂದ 'ಹೊಸ ಮಾದರಿಯ ಒಗಟುಗಳು' (ಹೆಸರು 'ಒಗಟು' ಎಂದಿದ್ದರೂ ಒಡಪುಗಳನ್ನೊಳಗೊಂಡ ಪುಸ್ತಕ) ಸೀನಾ ದೇಶಪಾಂಡೆ[1] (೧೯೪೫).... ಎಂದು ಬರೆದಿರುವ ಡಾ॥ ದಸ್ತಗೀರ, ಅಲ್ಲೀಭಾಯಿ[2] ಅವರಿಗೆ ಅದೇಗೆ ೧೯೫೫, ೧೯೪೫ ಕ್ಕಿಂತ ಮೊದಲು ಎನಿಸೋ ತಿಳಿಯದು.

ನನಗೆ ದೊರೆತಿರುವ ಪ್ರಕಟಿತ ಮಾಹಿತಿಗಳ ಪ್ರಕಾರ ಒಡಪುಗಳನ್ನು ಮೊದಲ ಬಾರಿಗೆ 'ಹೊಸ ಮಾದರಿಯ ಒಗಟುಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದವರು ಸೀತಾಬಾಯಿ ನಾರಾಯಣರಾವ್ ದೇಶಪಾಂಡೆ ಅವರು. ೧೯೪೫ರಲ್ಲಿ ಪ್ರಕಟವಾಗಿರುವ ಈ ಸಂಕಲನವನ್ನು ಪರಿಶೀಲಿಸಿರುವ ಡಾ॥ ಹಾ. ಮಾ. ನಾಯಕರು ದಂಪತಿಗಳು ಹೇಳುವ ಒಡಪುಗಳು ಎಂದು ಗುರುತಿಸಿದ್ದಾರೆ.[3] ಡಾ॥ ಎಸ್. ಜಿ. ಇಮ್ರಾಪುರ ಕೂಡ ಇದು ಒಡಪುಗಳ ಸಂಗ್ರಹ ಎಂದು ಒಪ್ಪಿಕೊಂಡಿದ್ದಾರೆ.[4] ಆನಂತರ ೧೦ ವರ್ಷಗಳ ನಂತರ ಅಂದರೆ, ೧೯೫೫ರಲ್ಲಿ ಪ್ರಕಟವಾದುದು ಈಶ್ವರಚಂದ್ರ ಚಿಂತಾಮಣಿ ಅವರ 'ಗರತಿಯರ ಮನೆಯಿಂದ' ಪುಸ್ತಕ. ಇದರಲ್ಲಿ ಕೆಲವು ಒಡಪುಗಳು ಸಂಕಲನ ಗೊಂಡಿರುವುದಾಗಿ ಒಡಪುಗಳ ಬಗ್ಗೆ ಬರೆದಿರುವವರೆಲ್ಲರೂ ಹೇಳಿದ್ದಾರೆ. ೧೯೫೯ ರಲ್ಲಿ ಹೊರಬಂದ ದಂಪತಿಗಳು ಹೇಳುವ ಒಡಪುಗಳ ಸಂಗ್ರಹವನ್ನು 'ದಂಪತಿಗಳ ಒಗಟುಗಳು' ಎಂಬ ಹೆಸರಿನಲ್ಲಿ ಬಿ. ಜೆ. ಜಾನಕಿಯವರು ಸಂಪಾದಿಸಿಕೊಟ್ಟಿದ್ದಾರೆ. ಆನಂತರ ಪ್ರಕಟಗೊಂಡದ್ದು ಜ್ಯೋತಿ ಹೊಸೂರ ಅವರ 'ಹೆಸರ ಹೇಳ್ತೀನಿ ಒಡಪು ಕಟ್ಟ' ಸಂಕಲನ (೧೯೭೧). ಮುಂದೆ ೧೨ ಒಡಪುಗಳಿರುವ ಕೆ. ವಿರೂಪಾಕ್ಷಗೌಡರ 'ಜಾನಪದ ಸಾಹಿತ್ಯ' (೧೯೭೨), 'ಒಲವಿನ ಒಡಪುಗಳು'-ಶ್ರೀರಾಮ ಬಿದರಿ (೧೯೭೩), 'ಉತ್ತರ ಕರ್ನಾಟಕದ ಒಡಪುಗಳು'—ಎಂ. ಎಸ್. ಲಠ್ಠೆ (೧೯೭೪), 'ಬಳ್ಳಾರಿ ಜಿಲ್ಲೆಯ ಒಡಪುಗಳು'—ಸಾಹಿತ್ಯಾನಂದ (೧೯೭೬), 'ಜನಪದ ಒಡಪುಗಳು'—ಶಾಂತಕುಮಾರಿ ಪಾಟೀಲ (೧೯೭೯), 'ಕನ್ನಡ ಒಡಪುಗಳು—ಲೀಲಾವತಿ ತೋರಣಗಟ್ಟಿ (೧೯೭೯)' 'ಜನಪದ ಒಡಪುಗಳು'—ಶಂಕರಾನಂದ ಉತ್ಲಾಸ

1 ಸರಿಯಾದ ಹೆಸರು ಸೀತಾಬಾಯಿ ನಾರಾಯಣರಾವ್ ದೇಶಪಾಂಡೆ

2 ಉತ್ತರ ಕರ್ನಾಟಕದ ಜನಪದ ಒಡಪುಗಳು, ಪುಟ-೧೦.

3 ಕನ್ನಡ ಜಾನಪದ ಗ್ರಂಥ ಸೂಚಿ, ಪುಟ-೯೭

4 ಜನಪದ ಒಗಟುಗಳು, ಪುಟ-೧೯೬



(೧೯೮೧), 'ಸಿರಿಗನ್ನಡ ಒಡಪುಗಳು'—ಎಂ. ಎನ್. ವಾಲಿ (೧೯೮೫) ಹಾಗೂ 'ಉತ್ತರ ಕರ್ನಾಟಕದ ಜನಪದ ಒಡಪುಗಳು'—ಡಾ॥ ದಸ್ತಗೀರ ಅಲ್ಲೀಭಾಯಿ (೧೯೯೨).

'ವಿನೋದ ಒಗಟಿನ ಮಾಲೆ' (ಎರಡು ನೂರ ಆರು ದಂಪತಿ ಒಗಟುಗಳು) ಎಮ್, ಎಸ್. ಶಾಬಾದಿಮಠ ಹಾಗೂ 'ನೂತನ ಒಗಟುಗಳು'—ಇಂಟರ್ ನ್ಯಾಶನಲ್ ಪ್ರಕಾಶನ, ಹುಬ್ಬಳ್ಳಿ—ಈ ಎರಡೂ ಸಂಕಲನಗಳನ್ನು ಒಡಪು ಸಂಗ್ರಹಗಳು ಎಂದು ಡಾ॥ ಎಸ್. ಜಿ. ಇಮ್ರಾಪುರ ಅವರು ಗುರುತಿಸಿದ್ದಾರೆ.[5]

'ಹೆಸರು ಹೇಳಿಸುವ ಮತ್ತು ಹೇಳುವ ಹಾಡುಗಳು' ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ದೊರೆತಿವೆ.[6] ಆದರೆ ಅವುಗಳ ಬಗ್ಗೆ ಉತ್ತರ ಕರ್ನಾಟಕ ಭಾಗದ ಯಾವುದೇ ಒಡಪು ಸಂಗ್ರಹ ಅಥವಾ ಲೇಖನಗಳಲ್ಲಿ ಪ್ರಸ್ತಾಪಿಸಿರುವುದು ನನ್ನ ಗಮನಕ್ಕೆ ಬಂದಿಲ್ಲ. ಡಾ॥ ನಾಯಕರು ಗುರುತಿಸಿರುವ 'ಕನ್ನಡ ಒಗಟುಗಳು' (ವಿವಾಹ ಕಾಲದಲ್ಲಿ ಹಾಡುವ ಪದ್ಯರೂಪದ ಒಗಟುಗಳೆಂಬ ಹಾಡುಗಳು ಶ್ಯಾಮಲಾ ; ಶ್ಯಾಮರಾವ್ ಎಚ್. ಜೋಶಿ (೧೯೩೪) ಮತ್ತು 'ದಂಪತಿ ಒಗಟುಗಳು' (ದಂಪತಿಗಳು ಹಾಡುವ ಒಗಟುಗಳು) ಗಿರಿಜಾದೇವಿ ಇಟ್ಟಂಗಿಮಠ (೧೯೫೫)[7] ಇವು ಒಡಪು ಹಾಡುಗಳ ಸಂಕಲನಗಳೇ ಎಂದು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

'ಉತ್ತರ ಕರ್ನಾಟಕದವರಿಗೆ ಈ ದೀರ್ಘ ಪ್ರಸ್ತಾವನೆ ಅನವಶ್ಯಕವೆನಿಸಬಹುದು. ಆದರೆ ಒಡಪುಗಳ ಪರಂಪರೆ ಇಲ್ಲದ ದಕ್ಷಿಣ ಕರ್ನಾಟಕದವರು ಅವುಗಳ ಸ್ವಾರಸ್ಯ ಅರಿತುಕೊಳ್ಳಲು ಅದು ಅವಶ್ಯವೆಂದು ಕೊಡಲಾಗಿದೆ.'[8]....ಶ್ರೀ ಸುಧಾಕರ ಅವರು ಒಗಟುಗಳ ಬಗೆಗೆ ವಿವರಿಸುತ್ತಾ "ಮದುವೆಯ ಹೆಣ್ಣು ಗಂಡುಗಳು ಪರಸ್ಪರ ಹೆಸರನ್ನು ಹೇಳುವಾಗ ಈ ಒಗಟಿನ ಧಾಟಿಯನ್ನು ಅನುಸರಿಸುತ್ತಾರೆಂದೂ ಈಗಲೂ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆಯೆಂದೂ ಕೇಳಿದ್ದೇನೆ" ಎಂದು ಬರೆದಿದ್ದಾರೆ. ಆದರಿಂದ ಶ್ರೀ ಸುಧಾಕರ ಅವರ ಪ್ರದೇಶವಾದ ಹಳೆಯ ಮೈಸೂರು ಭಾಗದ ಕಡೆಗೆ ಒಡಪಿನೊಂದಿಗೆ ಹೆಸರು ಹೇಳುವ ಸಂಪ್ರದಾಯ ಇಲ್ಲವೆಂಬುದು ಸ್ಪಷ್ಟ.[9]' ಹಳೆಯ

5 ಅದೇ, ಪುಟ-೧೯೬

6 ಪ್ರಸ್ತುತ ಸಂಕಲನದ ಅನುಬಂಧಗಳು-೧ ನ್ನು ನೋಡಿ

7 ಕನ್ನಡ ಜಾನಪದ ಗ್ರಂಥಸೂಚಿ, ಪುಟ-೯೨ ಮತ್ತು ೯೪

8 ಹೆಸರ ಹೇಳ್ತೀನಿ ಒಡಪಕಟ್ಟಿ–ಜ್ಯೋತಿ ಹೊಸೂರ, ಪುಟ-ix

9 ಅದೇ, ಪುಟ-೮

ಮೈಸೂರು ಭಾಗದಲ್ಲಿ ಒಡಪು ಕಟ್ಟಿ ಹೆಸರು ಹೇಳುವ ಪದ್ಧತಿ ಇದ್ದಂತಿಲ್ಲ.'[10] ತುಂಗಭದ್ರಾ ನದಿಯು ದಕ್ಷಿಣಕ್ಕೆ ಹೆಸರು ಹೇಳುವ ಪದ್ಧತಿಯಿದ್ದಂತಿಲ್ಲ ಎಂಬಂತಹ ಹೇಳಿಕೆಗಳ ಇತ್ಯರ್ಥವಾಗಬೇಕು.[11] "ಹಬ್ಬದ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಅರಿಸಿಣ, ಕುಂಕುಮ, ಹಣ್ಣು, ಹೂ, ವಿಳ್ಯೆ ಕೊಡುತ್ತಾರೆ. ಬಾಗಿನ ಕೊಡುತ್ತಾರೆ. ಉತ್ತರ ಕರ್ನಾಟಕದಲ್ಲಿಯಂತೆ ಮುತ್ತೈದೆಯರಿಗೆ ಆರತಿ ಮಾಡುವುದಾಗಲಿ, ಹೆಸರು ಹೇಳುವುದು ಕೇಳುವುದು ಇದ್ದಂತಿಲ್ಲ.[12]"' 'ತುಂಗಭದ್ರೆಯ ದಕ್ಷಿಣಕ್ಕೆ ಧಾರೆಯಾದ ನಂತರ ವಧುವರರು ಒಳಗೆ ಬರುವಾಗ ಪರಸ್ಪರ ಹೆಸರು ಹೇಳುವರಾದರೂ ಒಡಪುಗಳನ್ನು ಹೇಳುವುದಿಲ್ಲ.[13]' 'ಒಡಪು, ಒಗಟಿನಿಂದ ಬೇರೆಯಲ್ಲವೆಂಬ ಅರ್ಥದಲ್ಲಿಯೇ ರಾಗೌ ಅವರು 'ಪ್ರಶ್ನೆರಹಿತ ಒಗಟು' ಪ್ರಕಾರದಲ್ಲಿಯೇ ಹೆಸರಿನ ಒಗಟುಗಳು, ಮದುವೆಯ ಒಗಟುಗಳು ಎಂಬ ಉಪ ಪ್ರಭೇದಗಳನ್ನು ಕಲ್ಪಿಸಿದ್ದುಂಟು.' ಬಹುಶಃ ಇವು ಜಗತ್ತಿನ ಎಲ್ಲ ಜನಾಂಗಗಳಲ್ಲೂ ಬಳಕೆಯಾದಂತೆ ತೋರುವುದಿಲ್ಲ. ಅಷ್ಟೇ ಏಕೆ, ಮೈಸೂರು ಕಡೆಗೂ ಈ ಒಡಪುಗಳ ಬಳಕೆ ಅಷ್ಟಾಗಿ ಪ್ರಚಾರದಲ್ಲಿಲ್ಲವೆಂಬುದು ಸುಧಾಕರ ಅವರ ಅಭಿಪ್ರಾಯದಿಂದಲೇ ಗೊತ್ತಾಗುತ್ತದೆ. ಹೀಗಾಗಿ ಒಡಪು ಮತ್ತು ಒಗಟುಗಳಲ್ಲಿ ಅಂತರ ಕಾಣದೇ ಹೋಗಿರಬಹುದೇನೋ. ಆದರೆ ದೇಜಗೌ ಅವರು ಒಗಟು, ಒಡಪುಗಳು ಬೇರೆ ಬೇರೆಯೇ ಎಂದು ಸಂಶಯಿಸಿದ್ದಾರೆ. ........ಅಂತೂ ಉತ್ತರ ಕರ್ನಾಟಕದಲ್ಲಿ ಮಾತ್ರ ಇವು ಅಧಿಕ ಪ್ರಚುರತೆ ಪಡೆದಿವೆ[14].'

ಮೇಲೆ ಹೇಳಲಾದ ಎಲ್ಲ ಅಭಿಪ್ರಾಯಗಳನ್ನು ಪರಿಶೀಲಿಸಿದಾಗ ದಕ್ಷಿಣ ಕರ್ನಾಟಕ ಭಾಗದಲ್ಲಿ ಒಡಪುಗಳನ್ನು ಹೇಳುವುದಿಲ್ಲ ಎಂದು ತಪ್ಪಾಗಿ ಭಾವಿಸುತ್ತಿರವುದು ತಿಳಿಯುತ್ತದೆ. ಉತ್ತರ ಕರ್ನಾಟದವರು ಹೋಗಲಿ ಹಳೆಯ ಮೈಸೂರು ಭಾಗದ ವಿದ್ವಾಂಸರೂ ಹಾಗೇ ಭಾವಿಸಿದಂತಿದೆ. 'ಉತ್ತರ ಕರ್ನಾಟಕದಲ್ಲಿ ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಗಂಡ ಹೆಂಡತಿಯರ ಹೆಸರನ್ನು ಹೇಳುವಾಗ ಬಳಕೆಯಾಗುವ ರಚನೆಗಳು ಒಡಪುಗಳು ಎಂದು ಹೇಳಲಾಗಿದೆ.[15]' ಎಂದು ಬರೆದಿರುವ ಡಾ॥ ಸಿ. ಪಿ. ಕೃಷ್ಣಕುಮಾರ್ ಅವರು ತಾವೇ ಪ್ರಧಾನ ಸಂಪಾದಕರಾಗಿರುವ

---

10 ಬಳ್ಳಾರಿ ಜಿಲ್ಲೆಯ ಒಡಪುಗಳು-ಸಾಹಿತ್ಯಾನಂದ, ಪುಟ-೩
11 ಸಿರಿಗನ್ನಡ ಒಡಪುಗಳು-ಎಂ. ಎಸ್. ವಾಲಿ, ಪುಟ-XX
12 ಕನ್ನಡ ಒಡಪುಗಳು-ಲೀಲಾವತಿ ತೋರಣ ಗಟ್ಟಿ, ಪುಟ-೩
13 ಅದೇ, ಪುಟ-೪
14 ಜನಪದ ಒಗಟುಗಳು-ಡಾ॥ ಎಸ್.ಜಿ. ಇಮ್ರಾಪುರ, ಪುಟ-೧೦೩
15 ಜಾನಪದ ಗಂಗೋತ್ರಿ ೧/೨, ೧೯೮೬, ಪುಟ-೧೪



'ಮಾನಸ ಕಿರಣ-೧೯೮೧' ರಲ್ಲಿ ಪ್ರಕಟಗೊಂಡಿರುವ ನನ್ನ ಒಡಪು ಸಂಗ್ರಹಗಳನ್ನಾಗಲೀ, ಅನಂತರ ಪ್ರಕಟಗೊಂಡ ನನ್ನ ಇನ್ನಿತರ ಲೇಖನಗಳನ್ನಾಗಲೀ ಗಮನಿಸಿದಂತೆ ಕಾಣುವುದಿಲ್ಲ. ಈ ಪ್ರಕಾರ ದಕ್ಷಿಣ ಕರ್ನಾಟಕ ಭಾಗದಲ್ಲಿ ಇರುವ ಬಗ್ಗೆ ಡಾ॥ ಜೀಶಂಪ ಅವರು ನಾಲ್ಕಾರು ಕಡೆ ಪ್ರಾಸಂಗಿಕವಾಗಿ ಒಡಪುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಎಚ್. ಎಲ್. ನಾಗೇಗೌಡರು ತಮ್ಮ 'ನನ್ನೂರು' ಗ್ರಂಥದಲ್ಲಿ ಮದುವೆಯ ಎಲ್ಲ ಶಾಸ್ತ್ರಗಳೊಂದಿಗೆ ವಿವರವಾಗಿಯೇ ಬರೆದಿದ್ದರೂ ಒಡಪುಗಳ ಬಗ್ಗೆ ಪ್ರಸ್ತಾಪಕೂಡ ಮಾಡಿಲ್ಲ.

ದಕ್ಷಿಣ ಕರ್ನಾಟಕ ಭಾಗದಲ್ಲೂ ಒಡಪುಗಳನ್ನು ಹೇಳಲಾಗುತ್ತದೆ ಎಂದು ಗೊತ್ತಾಗಿದ್ದು ೧೯೮೦ರಲ್ಲಿ. ಮಂಡ್ಯ ಜಿಲ್ಲೆಯ ನಾಗಮಂಗಲ ಹಾಗೂ ಕೃಷ್ಣರಾಜಪೇಟೆ ತಾಲ್ಲೂಕುಗಳ ಕೆಲವು ಹಳ್ಳಿಗಳಲ್ಲಿ ನಾನು ಸಂಗ್ರಹಿಸಿದ ಒಡಪುಗಳಲ್ಲಿ ೧೨ ಮೈಸೂರು ವಿಶ್ವವಿದ್ಯಾಲಯದ ಪಠ್ಯೇತರ ಚಟುವಟಿಕೆಗಳ ಸಮಿತಿಯ 'ಮಾನಸ ಕಿರಣ' ಎಂಬ ವಾರ್ಷಿಕ ಸಂಚಿಕೆ (೧೯೮೧) ಯಲ್ಲಿ ಪ್ರಕಟಗೊಂಡವು. ಅನಂತರ 'ಜಾನಪದ ಜಗತ್ತು' ಸೆಪ್ಟೆಂಬರ್ ೧೯೮೧ರ ಸಂಚಿಕೆ, ಕನ್ನಡಮತ್ತು ಸಂಸ್ಕೃತಿ ಇಲಾಖಾ ಉದ್ಯೋಗಿಗಳ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾರಂಭೋತ್ಸವದ ಸಂದರ್ಭ ಗ್ರಂಥ 'ಸಂಪದ' (೧೯೮೭) ಹಾಗೂ ನನ್ನ ಜಾನಪದ ಪ್ರಬಂಧಗಳ ಸಂಕಲನ 'ಬಾತವೊಂದು ಕವಲೆಂಟು' (೧೯೮೮) ಕೃತಿಗಳಲ್ಲಿ ಒಡಪು ಕುರಿತ ನನ್ನ ಲೇಖನಗಳು ಪ್ರಕಟವಾಗಿವೆ. 'ಕರ್ನಾಟಕ ಜಾನಪದ ಸಮೀಕ್ಷೆ (೧೯೮೨) ಯಲ್ಲಿ ಮೈಲಹಳ್ಳಿ ರೇವಣ್ಣ ಅವರ 'ಕನ್ನಡದಲ್ಲಿ ಬೆಡಗು' ಲೇಖನವೊಂದಿದೆ. ಇವರೇ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಗಾಗಿ ಸಿದ್ದಪಡಿಸಿದ 'ನಮ್ಮ ಒಡಪುಗಳು' ಪುಸ್ತಕ ೧೯೮೯ ರಲ್ಲಿ ಪ್ರಕಟಗೊಂಡಿದೆ. ಡಾ॥ ಪಿ. ಎಸ್. ಪದ್ಮಪ್ರಸಾದ್ ಅವರು ತಮ್ಮ 'ಜೈನ ಜನಪದ ಸಾಹಿತ್ಯ ಸಂಪಾದನೆ ಮತ್ತು ಅಧ್ಯಯನ' ನಿಬಂಧದಲ್ಲಿ (೧೯೮೭) ಶಿವಮೊಗ್ಗ ಮತ್ತು ಶ್ರವಣಬೆಳಗೊಳ ಭಾಗದ ಕೆಲವು ಒಡಪುಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ.

ಡಾ॥ ಅಂಬಳಿಕೆ ಹಿರಿಯಣ್ಣ, ಮೈಲಹಳ್ಳಿ ರೇವಣ್ಣ ಹಾಗೂ ಡಾ॥ ದಸ್ತಗೀರ ಅಲ್ಲೀಭಾಯಿ ಅವರು ವಿ. ಎನ್. ಶಿವರಾಮು ಅವರದೇ ದಕ್ಷಿಣ ಕರ್ನಾಟಕದ ಒಡಪುಗಳ ಮೊದಲ ಲೇಖನ ಎಂದು ಅಭಿಪ್ರಾಯ ಪಟ್ಟಿದ್ದಾರೆ.[16]. ಆದರೆ ದಕ್ಷಿಣ ಕರ್ನಾಟಕದ ಒಡಪುಗಳನ್ನು ಮೊದಲ ಬಾರಿಗೆ ಬೆಳಕಿಗೆ ತಂದ ಕೀರ್ತಿ ಬಿ. ಎಸ್. ನಾಗರತ್ನ ಅವರಿಗೆ ಸಲ್ಲುತ್ತದೆ. ೧೯೮೦ರಲ್ಲೇ ಪ್ರಕಟವಾದ ಇವರ 'ಜಾನಪದ ಪರಿಶೀಲನ' ಎಂಬ ಪುಟ್ಟ ಕೃತಿಯಲ್ಲಿ ಹಾಸನ ಭಾಗದ ಒಡಪು

---

16 ಕ್ರಮವಾಗಿ ಜಾನಪದ ಜಗತ್ತು, ೪/೨, ಪುಟ-೫೧, ಕರ್ನಾಟಕ ಜಾನಪದ ಸಮೀಕ್ಷೆ ಪುಟ-೧೭ರ ಮತ್ತು ಉತ್ತರ ಕರ್ನಾಟಕದ ಜನಪದ ಒಡಪುಗಳು, ಪುಟ-೮

(ತೊಡಕು)ಗಳನ್ನು ಪರಿಚಯಿಸುವ 'ರೀತಿರಾತ್ಮಾ ಕಾವ್ಯಸ್ಯ........' ಎಂಬ ಲೇಖನವೊಂದಿದೆ. ಪುಸ್ತಕಕ್ಕೆ ಮುನ್ನುಡಿ ಬರೆದಿರುವ ಸುಧಾಕರ ಅವರು ರೀತಿರಾತ್ಮಾ ಕಾವ್ಯಸ್ಯ ಎಂಬ ಲೇಖನ ವಿಶಿಷ್ಟವಾದದ್ದು. ಮದುವೆಯ ವೇಳೆಯಲ್ಲಿ ಗಂಡನ ಹೆಸರನ್ನು ಕೇಳಿದಾಗ ಹೆಣ್ಣು ನೇರವಾಗಿ ಹೇಳುವುದಿಲ್ಲ. ಹಾಗೆ ಹೇಳಿದರೆ ಅಶುಭವೆಂಬ ನಂಬಿಕೆಯುಂಟು, ಆದ್ದರಿಂದ ಒಂದು ನಮೂನೆಯ ಬೆಡಗಿನ ನುಡಿಯಲ್ಲಿ ಹೇಳುತ್ತಾರೆ. ಈ ಸಂಪ್ರದಾಯ ಮೊದಲು ಕರ್ನಾಟಕದ ಎಲ್ಲ ಭಾಗಗಳಲ್ಲೂ ಇದ್ದಿರಬೇಕು. ಆದರೆ ನಾಗರಿಕತೆಯ ಸಂಪರ್ಕದಿಂದಾಗಿ ಹಲವಾರು ಭಾಗಗಳಲ್ಲಿ ಇತ್ತೀಚೆಗೆ ಈಸಂಪ್ರದಾಯ ಕಾಣೆಯಾಗುತ್ತಿದೆ. ಆದರೂ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಇಂದಿಗೂ ಈ ಸಂಪ್ರದಾಯವನ್ನು ಕಾಣುತ್ತೇವೆ. ಈ ಬೆಡಗಿನ ನುಡಿಗಳಿಗೆ 'ಒಡಪು'ಗಳು ಎಂದೂ ಒಗಟುಗಳು ಎಂದೂ ಬೆಡಗುಗಳು ಎಂದೂ ವಿವಿಧ ಹೆಸರುಗಳಿವೆ. ಪ್ರಕೃತ ಈ ಲೇಖಕಿ ತಮ್ಮ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ 'ತೊಡಕುಗಳು' ಎಂಬ ಇನ್ನೊಂದು ಹೆಸರಿನಿಂದ ಕರೆದು, ಅವುಗಳ ಕಾವ್ಯಗುಣವನ್ನು ವಿಶ್ಲೇಷಿಸಿದ್ದಾರೆ' ಎಂದು ಹೇಳಿರುವುದನ್ನು ಬಿಟ್ಟರೆ, ಇದುವರೆಗೆ ಮತ್ಯಾರೂ ಈ ಲೇಖನದ ಬಗ್ಗೆ ಎಲ್ಲೂ ಹೇಳಿದಂತೆ ಕಾಣುವುದಿಲ್ಲ. ಜಾನಪದದ ಯಾವ ಲಕ್ಷಣವೂ ಕಾಣದ ನಾಗರತ್ನ ಅವರ ಲೇಖನ ಶೀರ್ಷಿಕೆ ಇದುವರೆಗೆ ಯಾರ ಗಮನವನ್ನೂ ಸೆಳೆಯದಿರುವುದಕ್ಕೆ ಕಾರಣವಿರಬಹುದು.

ಗಂಡ ಹೆಂಡಿರ ಹೆಸರು ಕೇಳುವ ಮತ್ತು ಹೇಳುವ ಪದ್ಧತಿ ದೇಶವಿಡೀ ಇರುವುದಲ್ಲದೆ ಒಡಪಿನೊಡನೆ ಹೆಸರೇಳುವ ಸಂಪ್ರದಾಯವೂ ಇದ್ದಂತಿದೆ. ಹಳೆಯ ಹಿಂದಿ ಸಿನಿಮಾವೊಂದರಲ್ಲಿ ವಧುವಿನಿಂದ ಒಡಪಿನೊಡನೆ ಹೆಸರು ಹೇಳಿಸುವ ಸನ್ನಿವೇಶವನ್ನು ಬಹಳ ಹಿಂದೆ ನಾನು ಗಮನಿಸಿದ್ದೇನೆ. ಇದರಿಂದ ಉತ್ತರ ಭಾರತದಲ್ಲಿ ಒಡಪು ಹೇಳುವ ಸಂಪ್ರದಾಯವಿದೆ ಎಂದು ಹೇಳಬಹುದಾಗಿದೆ. ಮಹಾರಾಷ್ಟ್ರದಲ್ಲಿ ಒಡಪುಗಳಿರುವ ಬಗ್ಗೆ ಸಾಕಷ್ಟು ಆಧಾರಗಳು ದೊರೆತಿವೆ.[17] ತಮಿಳುನಾಡು ಮತ್ತು ಕೇರಳಗಳಲ್ಲಿ ಹೆಸರಿಗೆ ಬದಲು ಹಣ್ಣು, ತರಕಾರಿ, ಮರಗಿಡಗಳ ಹೆಸರು ಹೇಳುವುದಾಗಿ ಕೇಳಿದ್ದೇನೆ. ಇವುಗಳ ಕುರುಹು ಹಿಡಿದು ಹೆಸರನ್ನು ಗ್ರಹಿಸಬೇಕಾಗುತ್ತದೆ. ಕೋಲಾರ ಜಿಲ್ಲೆಯ ಗಡಿ ಭಾಗದಲ್ಲಿ ಒಡಪುಗಳನ್ನು ತೆಲುಗಿನಲ್ಲಿ ಹೇಳುವುದಾಗಿ ಹೇಳುತ್ತಾರೆ. ಆದುದರಿಂದ ಆಂಧ್ರದಲ್ಲೂ ಒಡಪುಗಳನ್ನು ಹೇಳುತ್ತಾರೆ ಎನ್ನಬಹುದು. 'ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ ಭಾಗಗಳಲ್ಲೆಲ್ಲ ಒಡಪು

17 ನೋಡಿ. ಹೆಸರ ಹೇಳ್ತೀನಿ ಒಡಪಕಟ್ಟಿ ಸಂಕಲನದ ಡಾ|| ಬೆಟಗೇರಿ ಕೃಷ್ಣಶರ್ಮರ ಮುನ್ನುಡಿ, ಪುಟ vi ; ಭಾರತೀಯ ಜಾನಪದ ಸಮೀಕ್ಷೆ, ಪುಟ-೫೪, (ಅನು : ಕೆ. ಮರುಳಸಿದ್ದಪ್ಪ) ಡಾ|| ವಾಮನ ಬೇಂದ್ರೆ ಅನುವಾದಿಸಿರುವ 'ಮಹಾರಾಷ್ಟ್ರದ ಜಾನಪದ ಸಾಹಿತ್ಯ' ಪುಸ್ತಕದಲ್ಲಿ ಒಡಪುಗಳಿವೆ ಎಂದು ಗುರುತಿಸಿದ್ದಾರೆ ಡಾ|| ದಸ್ತಗೀರ ಅಲ್ಲೀಭಾಯಿ (ಉತ್ತರ ಕರ್ನಾಟಕದ ಜನಪದ ಒಡಪುಗಳು, ಪುಟ-೪)



ಗಳೊಂದಿಗೆ ಹೆಸರು ಹೇಳುವ ಪದ್ಧತಿ ಪ್ರಚಾರದಲ್ಲಿದೆ.[18] ಕನಕಪುರ, ಮಾಗಡಿ ನಂಜನಗೂಡು, ಚಿಕ್ಕನಾಯಕನಹಳ್ಳಿ ಕಡೆಗಳಲ್ಲೂ ಒಡಪು ಹೇಳುತ್ತಿದ್ದುದಾಗಿ ಕೇಳಿದ್ದೇನೆ. ಆದರೆ ದಕ್ಷಿಣ ಕನ್ನಡ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಾರೂ ಈ ಪ್ರಕಾರವನ್ನು ಗುರುತಿಸಿದಂತೆ ಕಾಣುವುದಿಲ್ಲ. ಇಲ್ಲೂ ಇದ್ದಿರಬೇಕು. ಹೆಸರು ಹೇಳುವ ಬಗ್ಗೆ ಇದ್ದ ನಂಬಿಕೆಗಳು ದೂರಾದಂತೆ ಒಡಪು ಕಾಣೆಯಾಗಿರಬೇಕು. ಆದರೂ ಹುಡುಕಿದರೆ ಅಲ್ಲಲ್ಲಿ ಕೆಲವು ತುಣುಕುಗಳಾದರೂ ಸಿಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ ಇಡೀ ಭಾರತದಲ್ಲಿ ಹೆಣ್ಣುಗಂಡುಗಳಿಬ್ಬರೂ ಹೆಸರು ಕೇಳುವುದು ಮತ್ತು ಹೇಳುವುದು ಅಲ್ಲದೆ ಒಡಪಿನೊಂದಿಗೆ ಹೆಸರೇಳುವ ಸಂಪ್ರದಾಯ ಇತ್ತೀಚಿನವರೆಗೂ ಇದ್ದಿತೆಂದು ತಿಳಿಯಬಹುದಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಒಡಪು ಇದ್ದ ಬಗ್ಗೆ ನಮಗೆ ಎಲ್ಲೂ ತಿಳಿಯುವುದಿಲ್ಲ. ಅಲ್ಲಿ ಯಾವ ನಿರ್ಬಂಧವೂ ಇಲ್ಲದೆ ಹೆಣ್ಣುಗಂಡುಗಳಿಬ್ಬರೂ ಪರಸ್ಪರ ಹೆಸರಿಡಿದು ಕರೆಯುವುದರಿಂದ ಒಡಪುಗಳ ಅವಶ್ಯಕತೆ ಅವರಿಗೆ ಕಂಡುಬಂದಂತಿಲ್ಲ. ಆದುದರಿಂದಲೇ ಆರ್. ಎಸ್, ಬಾಗ್ಸ್. ಅಲೆಗ್ಸಾಂಡರ್ ಎಚ್. ಕ್ರಾಫೆ ಇವರ ಜಾನಪದ ವರ್ಗೀಕರಣದ ವಿವಿಧ ವಿಭಾಗಗಳಲ್ಲಾಗಲೀ, ಒಡಪು ಆಲನ್‌ಡಂಡೆಸ್ ಗುರುತಿಸಿದ ಜಾನಪದ ಪ್ರಕಾರಗಳ ಪಟ್ಟಿಯಲ್ಲಾಗಲೀ ಒಡಪುಗಳ ಪ್ರಸ್ತಾಪವೇ ಕಂಡುಬರುವುದಿಲ್ಲ.

'ಒಡಪು' ಉತ್ತರ ಕರ್ನಾಟಕ ಭಾಗದಲ್ಲಿ ಮಾತ್ರ ಅದೂ ಜನಪದರ ನಾಲಿಗೆ ಮೇಲೆ ಪ್ರಚಲಿತವಿರುವ ಶಬ್ದ. ದಕ್ಷಿಣ ಕರ್ನಾಟಕ ಭಾಗದಲ್ಲಿ ಜಾನಪದ ಅಧ್ಯಯನಕಾರರನ್ನುಳಿದು ಉಳಿದ ಯಾವ ವರ್ಗದ ಜನರಿಗೂ ಒಡಪು ಪದ ತಿಳಿದಿಲ್ಲ. ಚಿತ್ರದುರ್ಗ ಮತ್ತು ಶಿವಮೊಗ್ಗ ಭಾಗಗಳಲ್ಲಿ 'ಬೆಡಗು' ಎಂದು ಕರೆಯುವ ಈ ಜನಪದ ಭಾಷಿಕ ಬಗೆಯನ್ನು ಚಿಕ್ಕಮಗಳೂರು ಮತ್ತು ಹಾಸನ ಸುತ್ತಿನಲ್ಲಿ 'ತೊಡಕು' ಅನ್ನುತ್ತಾರೆ. ನಾಗಮಂಗಲ ತುಮಕೂರು ಕಡೆಗೂ ತೊಡಕು ಎಂಬ ಹೆಸರೇ ಇದ್ದರೂ ಒಡಪಿನೊಂದಿಗೆ ಹೆಸರೇಳುವುದು 'ಜೋಡೆಸ್ರು'. ಒಡಪಿಲ್ಲದೆ ಹೇಳುವುದು 'ಒಂಟೆಸ್ರು' ಅನ್ನುತ್ತಾರೆ. ಬೆಂಗಳೂರಿನಲ್ಲಿ 'ಒಡಪು' ಎಂದಿದ್ದಾರೆ. 'ಮೈಸೂರು ಜಿಲ್ಲೆ ಚಾಮರಾಜನಗರ, ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ 'ಅರ್ಥಮಾನ' ಎಂಬ ಹೆಸರಿದ್ದರೆ, ಕೊಡಗಿನಲ್ಲಿ 'ಹೆಸರು ಹೇಳಿಸೋದು' ಎಂಬ ಮಾತು ರೂಢಿಯಲ್ಲಿದೆ. [19]

ಜಾನಪದದ ಪ್ರಾಚೀನತೆ ಮಾನವನಷ್ಟೇ ಪ್ರಾಚೀನವಾದುದು ಎಂಬ ಸತ್ಯಸಂಗತಿ ಎಲ್ಲರಿಗೂ ತಿಳಿದುದೇ ಆಗಿದೆ. ಆರೆ ಜಾನಪದ ಪ್ರಕಾರಗಳೆನಿಸಿರುವ ಲಾವಣಿ, ಯಕ್ಷಗಾನ ಸಾಹಿತ್ಯಗಳ ಬಗೆಗೇ ನಿರ್ದಿಷ್ಟ ಕಾಲವನ್ನು ಗುರುತಿಸಲು ಸಾಧ್ಯವಾಗಿಲ್ಲ.

18 ಹೆಸರ ಹೇಳ್ತೀನಿ ಒಡಪಕಟ್ಟಿ, ಪುಟ-೮

19 ನಮ್ಮ ಒಡಪುಗಳು-ಮೈಲಹಳ್ಳಿ ರೇವಣ್ಣ, ಪುಟ-೭

ಆಥವ್ವರಲ್ಲಿ ಒಡಪು ಸಾಹಿತ್ಯದ ಪ್ರಾಚೀನತೆಯನ್ನು ನಿರ್ದಿಷ್ಟವಾಗಿ ಹೇಳುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಆದರೆ ಡಾ॥ ದಸ್ತಗೀರ್ ಒಡಪು ಸಾಹಿತ್ಯದ ಪ್ರಾಚೀನತೆಯನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ (ಸಂಪುಟ-೧, ಪುಟ-೧೨೦೬) 'ಒಡಪು' ಶಬ್ದಕ್ಕೆ ಒಡೆದಿರುವಿಕೆ; ಒಡಕು ಎಂದು ಅರ್ಥ ಹೇಳುವಾಗ ಪ್ರಯೋಗಿಸಲಾಗಿರುವ ಹೊಸಕೋಟೆಯ ಶಾಸನ (೧೪೩೩)ದ 'ಪುರದಕೆಱಿಯ ಒಡಪುಗಳನ್ನು ಕಟ್ಟಿ ರೂಪು ಮಾಡಲಾಗಿ' (ಎಪಿಗ್ರಾಫಿಯಾ ಕರ್ನಾಟಕ ix (s) ) ಎಂಬ ಸಾಲಿನ ಆಧಾರದ ಮೇಲೆ 'ಒಡಪು ಎನ್ನುವ ಪದ ತಕ್ಕಮಟ್ಟಿಗೆ ಹಳೆಯದಾದರೂ (೧೪೩೩) ಒಗಟು ಎನ್ನುವ ಅರ್ಥದಲ್ಲಿ ಅದೆಲ್ಲಿಯೂ ರೂಢಿಯಲ್ಲಿದ್ದಂತೆ ತೋರುವುದಿಲ್ಲ. ಈ ಅರ್ಥದಲ್ಲಿ ಅದು ಇತ್ತೀಚೆಗೆ ಮಾತ್ರ ಚಾಲ್ತಿಯಲ್ಲಿದೆ.' ಎಂದು ಡಾ॥ ದೇಜಗೌ ಅವರು ಹೇಳಿದ್ದಾರೆ.[20] ಇದನ್ನು ಉಲ್ಲೇಖಿಸಿರುವ ಡಾ॥ ದಸ್ತಗೀರ್ ಅವರು 'ಕ್ರಿ.ಶ. ೧೪೩೩ ರಷ್ಟು ಪ್ರಾಚೀನವಾದ ಒಡಪು ಸಾಹಿತ್ಯ........'[21] ಎಂದು ಹೇಳುವ ಮೂಲಕ ಜನಪದ ಸಾಹಿತ್ಯ ಪ್ರಕಾರವೊಂದರ ಹುಟ್ಟಿನ ನಿರ್ದಿಷ್ಟ ಕಾಲವನ್ನೇ ಗುರುತಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ. ಡಾ॥ ದೇಜಗೌ ಅವರು ಹೇಳಿರುವುದು ಒಡಪು ಸಾಹಿತ್ಯದ ಬಗೆಗಲ್ಲ ಒಡಪು ಶಬ್ದದ ಬಗೆಗೆ ಮಾತ್ರ ಅನ್ನುವ ವಿಚಾರ ಇವರ ಮನಸ್ಸಿಗೆ ಬಾರದಿರುವುದೇ ಇಂಥ ತಪ್ಪು ತೀರ್ಮಾನಕ್ಕೆ ಎಡೆಮಾಡಿಕೊಟ್ಟಂತಿದೆ.

ಕನ್ನಡ ಜಾನಪದದ ಎಲ್ಲ ಪ್ರಕಾರಗಳಿಗೂ ಇಂಗ್ಲೀಷ್ ಪಾರಿಭಾಷಿಕ ಪದಗಳನ್ನು ಗುರುತಿಸುವ ಪ್ರಯತ್ನ ನಡೆದಿದ್ದು, ಈಗಾಗಲೇ ಬಹಳಷ್ಟು ಪದಗಳನ್ನು ಸಂವಾದಿಯಾಗಿ ಬಳಸಲಾಗುತ್ತಿದೆ. ಜನಪಾದ ಗೀತೆ (Folk song), ಜನಪದ ಕಥೆ (Folk tale), ಪುರಾಣ (Myth), ಐತಿಹ್ಯ (Legend), ಗಾದೆ (Proverb), ಒಗಟು (Riddle), ಹೀಗೆ. ಇಂಗ್ಲೀಷಿನ ಬ್ಯಾಲೆಡ್ (Ballad) ಹಾಗೂ ಕನ್ನಡದ ಲಾವಣಿ ಬೇರೆಬೇರೆ ಎಂಬ ವಾದ ವಿವಾದಗಳ ನಡುವೆಯೂ ಲಾವಣಿಗೆ Ballad ಎಂದೇ ಕರೆಯಲಾಗುತ್ತಿದೆ. ಆದರೆ ಈಗಾಗಲೇ ಹೇಳಿದಂತೆ ಕನ್ನಡದಲ್ಲಿ ದೊರೆಯುವ ಒಡಪು ಪಾಶ್ಚಾತ್ಯ ಜಾನಪದದಲ್ಲಿ ಕಂಡುಬಂದಿಲ್ಲ.[22] ಹಾಗೆಯೇ 'ವಡಬು' ಕೂಡ. ಇಂತಹ ಕೆಲವು ವಿಶಿಷ್ಟ ಪ್ರಕಾರಗಳಿಗೆ ಅಧ್ಯಯನದ ಅನುಕೂಲಕ್ಕಾಗಿ ಇಂಗ್ಲಿಷ್ ಸಂವಾದಿ ಪದಗಳನ್ನು ಕಂಡುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲೂ ಕಂಡುಬರುವ 'ಒಗಟು' ಪ್ರಕಾರಕ್ಕೆ 'Riddle' ಶಬ್ದ ಬಳಕೆಯಲ್ಲಿರುವುದರಿಂದ 'ಒಡಪು' ಶಬ್ದ ಹಾಗೂ ಸಾಹಿತ್ಯ,

---

20 ಜಾನಪದ ಅಧ್ಯಯನ, ಪುಟ-೨೫೪

21 ಉತ್ತರ ಕರ್ನಾಟಕದ ಜನಪದ ಒಡಪುಗಳು, ಪುಟ-೯

22 ಡಾ॥ ಜೀಶಂಪ, ಜಾನಪದ, ಪುಟ-೧೮



ಒಗಟಿಗೆ ತೀರ ಹತ್ತಿರವಾದುದರಿಂದ ಒಡಪನ್ನು 'Naming Riddle' ಎಂದೂ ಆಚರಣೆಯೊಂದಿಗೆ ಬೆಸೆದುಕೊಂಡಿರುವ ವೀರಭದ್ರನ ವಡಬುಗಳನ್ನು 'Ritual Riddles' ಎಂದು ಕರೆಯಬಹುದಾಗಿದೆ.

ಇನ್ನು ಮುಂದೆ ದಕ್ಷಿಣ ಕರ್ನಾಟಕ ಭಾಗಗಳಲ್ಲಿ ಒಡಪು ಹೇಳುವ ಮತ್ತು ಕೇಳುವ ಸಂದರ್ಭ, ನಂಬಿಕೆ, ಸಂಪ್ರದಾಯ, ವಸ್ತು, ವಿಷಯ ಇತ್ಯಾದಿಗಳ ಬಗ್ಗೆ ತಿಳಿದುಕೊಳ್ಳೋಣ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಂಗಸರಾಗಲಿ, ಗಂಡಸರಾಗಲಿ, ಮಕ್ಕಳಾಗಲಿ ಕಿರಿಯರು ಹಿರಿಯರ ಹೆಸರಿಡಿದು ಕರೆಯುವುದಿಲ್ಲ. ಅಗೌರವ ಎಂಬುದು ಇದಕ್ಕೆ ಕಾರಣ. ಹೆಂಗಸರು ತಮ್ಮ ಗಂಡನ ಹೆಸರು ಹೇಳಬಾರದೆಂಬ ಸಂಪ್ರದಾಯವಿದೆ. ಗಂಡನಿಗೆ ತಾವು ತೋರುವ ಗೌರವ ಅಲ್ಲದೆ ನಾಚಿಕೆ ಮತ್ತು 'ಗಂಡನ ಹೆಸರು ಹೇಳಿದರೆ ಆತನ ಆಯುಸ್ಸು ಕಡಿಮೆಯಾಗುತ್ತದೆ' ಎಂಬ ನಂಬಿಕೆಗಳೂ ಕಾರಣಗಳಾಗಿವೆ. ಹೀಗಾಗಿ ಹೆಂಗಸರು ಗಂಡನ ಹೆಸರು ಹೇಳುವುದು ತುಂಬಾ ಕಡಿಮೆ. ಗಂಡಸರೂ ಅಷ್ಟೆ. ಎಲ್ಲೋ ಕೆಲವರು ಮಾತ್ರ ಇತ್ತೀಚೆಗಷ್ಟೆ ತಮ್ಮ ಹೆಂಡಿರ ಹೆಸರಿಡಿದು ಕರೆಯುತ್ತಾರೆ.

ಹಳ್ಳಿಗಳಲ್ಲಿ ಇಂದಿಗೂ ಗಂಡಹೆಂಡಿರು ನೇರವಾಗಿ ಮಾತಾಡುವುದು ಕಡಿಮೆ. ಮಕ್ಕಳ ಮೂಲಕ ಮಾತಾಡುತ್ತಾರೆ. ಅಂದರೆ ಮಕ್ಕಳಿಗೆ ಹೇಳುವಂತೆ ಹೇಳುತ್ತಾರೆ. ಮಕ್ಕಳ ಹೆಸರಿನಿಂದಲೇ ಕರೆಯುತ್ತಾರೆ. ಆದರೆ ಗಂಡ ಹೆಂಡಿರು ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳುವಾಗ ಮತ್ತು ಮಕ್ಕಳನ್ನು ಕೂಗುವಾಗ ಮಾತಿನ ಧಾಟಿ ಬದಲಾಗಿರುತ್ತದೆ. ಇದರಿಂದಲೇ ಯಾರು ಯಾರನ್ನು ಕೂಗುತ್ತಿದ್ದಾರೆ ಎಂದು ಮಕ್ಕಳೂ ಕೂಡ ಅರಿತುಕೊಳುತ್ತಾರೆ.

ಹಳ್ಳಿಯೊಂದು ಮನೆಯಂತಿದ್ದ ಕಾಲವೊಂದಿತ್ತು. ಹಳ್ಳಿಯ ಯಾವೊಬ್ಬನ ಕಷ್ಟ ಸುಖಗಳನ್ನು ಹಳ್ಳಿಯವರೆಲ್ಲ ಹಂಚಿಕೊಳ್ಳುತ್ತಿದ್ದವರು. ಜಾತಿಭೇದಗಳಿಲ್ಲದೆ ನಡೆದುಕೊಂಡವರು. ಹೀಗಾಗಿ ಒಕ್ಕಲಿಗನಿಗೆ ಹೊಲೆಯನೂ ಅಣ್ಣ-ತಮ್ಮ, ಚಿಕ್ಕಪ್ಪ-ದೊಡ್ಡಪ್ಪ, ಅತ್ತೆ-ಮಾವ, ಅಣ್ಣ-ಅಕ್ಕ. ಹಾಗೇ ಸಂಬೋಧಿಸುತ್ತಾರೆ ಕೂಡ.

ತನ್ನ ಪತಿಯನ್ನು ಹುಡುಕುವ ಗ್ರಾಮೀಣ ಸ್ತ್ರೀ 'ನಿಮ್ಮಣ್ಣೋರ್ ನೋಡಿದ್ರ ಮಗ', 'ನಿಮ್ಮಾವಾರ್ ನೋಡ್ದೇನಪ್ಪ', 'ನಿಮ್ಮ ಚಿಕ್ಕಪ್ಪನ್ನ ಕಂಡೇನವ್ವ' ಮುಂತಾಗಿ ಕೇಳುವುದು ಸಾಮಾನ್ಯ. ಹಾಗೆಯೇ ತಮ್ಮ ಮಕ್ಕಳ ಹೆಸರು ಹೇಳಿ ಅವರಪ್ಪ ಈ ಕಡೆ ಬಂದ್ರ ಅನ್ನುತ್ತಾರೆ. ಗಂಡಸಾದರೆ 'ನಿಮ್ಮ ಅಕ್ಕನ್ನ ನೋಡಿದ್ಲ ಮಗ', 'ನಮ್ಮ ಮನೆಯೋಳು ಇತ್ಲಾಗೆ ಬಂದ್ಲ ಅತ್ಗೆ' ಎಂದು ಕೇಳುತ್ತಾರೆ. ಮಲಗಿರುವ

ಗಂಡನನ್ನು ಏಳಿಸಬೇಕೆನ್ನಿ. ಆವಾಗ "ಇದ್ಯಾಕೆ ...ಮಲಗಿದ್ದೀರಾ....ಇಲ್ನೋಡಿ...." ಅನುತ್ತಾರೆ. ಗಂಡಸಾದರೆ "ಲೇ....ಇದ್ಯಾಕೆ" ಎಂದು ಕೂಗುತ್ತಾನೆ. ಅಥವಾ ಮಕ್ಕಳನ್ನು ಕೂಗುವ ಹಾಗೆ ಕರೆಯುತ್ತಾನೆ.

ಒಟ್ಟಾರೆ ಇತ್ತೀಚಿನವರೆಗೂ ಮದುವೆಯಾಗಿ ನಾಲ್ಕಾರು ವರ್ಷಗಳಾಗಿದ್ದು ಎರಡು ಮೂರು ಮಕ್ಕಳಿರುವ ದಂಪತಿಗಳೂ ಸಹ ನಾಲ್ಕು ಜನರೆದುರು ಪರಸ್ಪರ ಮಾತನಾಡುವುದಕ್ಕೂ ಅಂಜುತ್ತಿದ್ದುದುಂಟು. ಹೊಲ ಮನೆಗಳಿಗೆ ತಿರುಗಾಡುವಾಗ, ನೆಂಟರಿಷ್ಟರ ಮನೆಗೆ ಹೋಗಿ ಬರುವಾಗಲೂ ಗಂಡ ಅಲ್ಲಿ, ಹೆಂಡತಿ ಇಲ್ಲಿ–ಕಂಕುಳಲ್ಲೊಂದು, ಕೈಯಲ್ಲೊಂದು ಹಿಡಿದು, ಇನ್ನು ಬಹಿರಂಗವಾಗಿ ತಮ್ಮ ಸಂಗಾತಿಗಳ ಹೆಸರನ್ನು ಹೇಗೆತಾನೆ ಕರೆದಾರು? ಆದರೆ ಹೆಂಡತಿಯಾದವಳಿಗೆ ತನ್ನ ಗಂಡ ಬಾಯಿತುಂಬ ತನ್ನ ಹೆಸರಿಡಿದು ಕರೆಯಬಾರದೆ ಎಂಬ ಆಸೆಯಂತೆ ಅವನಿಗೂ ಕೂಡ ತನ್ನ ಹೆಂಡತಿಯ ಹೆಸರನ್ನು ಹೇಳಬೇಕೆಂಬ ಬಯಕೆ ಸಹಜವಾದುದಾಗಿದೆ. ಈ ಕಾರಣಕ್ಕೋ ಏನೋ ಗ್ರಾಮೀಣರು ಮದುವೆ, ಒಸಗೆ ಮೊದಲಾದ ಸಂದರ್ಭಗಳಲ್ಲಿ ಹೆಸರು ಹೇಳುವ ಮತ್ತು ಕೇಳುವ ಅವಕಾಶಗಳನ್ನು ಕಲ್ಪಿಸಿಕೊಂಡಿರಬೇಕು.

ಹೆಸರು ಹೇಳುವುದು ಕೇಳುವುದು ಎಲ್ಲ ಕಡೆಯಲ್ಲಿರುವಂತೆ ಎಲ್ಲ ವಯೋಮಾನದವರಲ್ಲೂ ಕಂಡುಬರುತ್ತದೆ. ಮಕ್ಕಳು ಆಟಗಳಲ್ಲಿ[23] ದೊಡ್ಡವರು ಶುಭಕಾರ್ಯಗಳಲ್ಲಿ ಹೆಸರು ಹೇಳುತ್ತಾರೆ. ವಿಧವೆಯರು ಮದುವೆ—ಮುಂಜಿಗಳ ಶಾಸ್ತ್ರ ಸಂಪ್ರದಾಯ ಆಚರಣೆಗಳಲ್ಲಿ ಭಾಗವಹಿಸುವುದಿಲ್ಲವಾದ ಕಾರಣ ಹೆಸರು ಹೇಳುವ ಸಂದರ್ಭಗಳೇ ಬರುವುದಿಲ್ಲ. ಚಿತ್ರದುರ್ಗ. ಶಿವಮೊಗ್ಗ ಜಿಲ್ಲೆಗಳಲ್ಲಿ ಮದುವೆ, ಒಸಗೆ, ಸೀಮಂತ, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಹೆಸರೇಳಿಸುವ ಸಂಪ್ರದಾಯವಿದೆ. ಆದರೆ ಹಳೇ ಮೈಸೂರು ಭಾಗದಲ್ಲಿ ಮದುವೆಗಳಲ್ಲಿ ಮಾತ್ರ ಹೆಸರೇಳಿಸುತ್ತಾರೆ. ತುಂಬಾ ಹಿಂದೆ ಇಲ್ಲೂ ಮೇಲೆ ಹೇಳಿದ ಸಂದರ್ಭಗಳಲ್ಲೆಲ್ಲ ಹೆಸರು ಹೇಳಿಸುವ ಸಂಪ್ರದಾಯವಿದ್ದಿರಬೇಕು. ಇಲ್ಲೂ ಕೂಡ ಗ್ರಾಮದೇವತೆಯ ಹಬ್ಬ, ಜಾತ್ರೆಗಳಲ್ಲಿ ಪೂಜೆಗಾಗಿ ಬಂದ ಹೆಂಗಸರು ಗುಡಿಯ ಬಾಗಿಲಿನಲ್ಲಿ ಅಡ್ಡ ಹಾಕಿದ ಯುವಕರಿಗೆ ಹೆಸರು ಹೇಳದೆ ಬರುವಂತಿಲ್ಲ. ಇಂಥ ಸಂದರ್ಭಗಳಲ್ಲಿ ಮದುವೆಯಾಗದ ಯುವತಿಯರಿಂದಲೂ ಹೆಸರೇಳಿಸುವುದುಂಟು. ತಮಗೆ ಮೆಚ್ಚಿಗೆಯಾದವರ ಹೆಸರೇಳುತ್ತಾರೆ. ಮದುವೆಯಾದವಳಂತೂ ನೀರಿಗೆ ಹೋದಾಗ, ಹೊಲಗದ್ದೆಗಳಿಗೆ ಹೋದಾಗ ಹಾದಿಬೀದಿಯಲ್ಲಿ ಅಡ್ಡ ಹಾಕಿದವರಿಗೆಲ್ಲ ಗಂಡಿನ ಹೆಸರೇಳಬೇಕು.

23. ಗ್ರಾಮೀಣ ಪರಿಸರದಲ್ಲಿ ಸಂಗಾತಿಗಳ ಆಯ್ಕೆಗೆ ಸ್ವಾತಂತ್ರ್ಯವಿಲ್ಲದಿದ್ದರೂ ಅಂಥವರ ಬಗ್ಗೆ ಯೋಚಿಸುವ ಸ್ವಾತಂತ್ರ್ಯವನ್ನಂತೂ ಯಾರೂ ಕಿತ್ತುಕೊಳ್ಳಲಾರರಷ್ಟೆ-ಜನಪದ ಆಟಗಳಲ್ಲಿ ಹದಿಹರೆಯದವರ ಅಂಥ ಆಸೆ ಆಕಾಂಕ್ಷೆಗಳು ವ್ಯಕ್ತವಾಗಿವೆ. ನೋಡಿ : ಅನುಬಂಧಗಳು-೨



ಹೆಸರು ಹೇಳಿಸುವುದು ಸಾಮಾನ್ಯವಾಗಿ 'ವರಸೆ', 'ಸಾಲು' ಅಥವಾ 'ಸಾಲಾವಳಿ' ಇರುವವರಲ್ಲಿ ಮಾತ್ರ. ಅಂದರೆ ಹೆಸರು ಹೇಳಬೇಕಾದವರು ಕೇಳುವವರಿಗೆ ಸೋದರತ್ತೆ, ಮಾವ ಅಥವಾ ಅವರ ಮಗ–ಮಗಳು, ಅತ್ತಿಗೆ–ನಾದಿನಿ, ಬಾವ–ಮೈದುನ, ಅತ್ತೆ–ಮಾವ ಈ ರೀತಿಯ ಸಂಬಂಧದವರಾಗಿರುತ್ತಾರೆ. ತಂದೆ–ತಾಯಿ, ಸೋದರ–ಸೋದರಿ ಸಂಬಂಧದವರನ್ನು ಹೆಸರೇಳುವಂತೆ ಕೇಳುವುದಿಲ್ಲ. ಮರೆತೇನಾದರೂ ಕೇಳಿದರೆ 'ಇದೇನ್ಲ ಮಗ ನಿಮ್ಮ ಚಿಕ್ಕಪ್ಪನ್ನೆಸ್ರ ನೀನೇ ಕೇಳ್ತಿಯಾ?' ಅಂದರಾಯಿತು. ತಪ್ಪು ಅರಿವಾದವನು ತೆಪ್ಪಗಾಗುತ್ತಾನೆ. ಉತ್ತರ ಕರ್ನಾಟಕ ಭಾಗದಲ್ಲಿ 'ಬಾಲೆಯರು ಗುಳ್ಳಪ್ಪನಿಗೆ ಆರತಿ ಮಾಡಿ ತಾಯಿಯ ತಂದೆ ಅಜ್ಜ, ಅಥವಾ ಸೋದರ ಮಾವನನ್ನು ಹುಡುಗಿಯರಿಗೆ ಗಂಡ ಎಂದು ಹಿರಿಯರು ತಮಾಷೆ ಮಾಡುವುದು ಹಳ್ಳಿಗಳಲ್ಲಿ ಇಂದಿಗೂ ಉಂಟು :[24] ಆದರೆ ಅಜ್ಜನನ್ನೇ ಅಂದರೆ ತಾಯಿಯ ತಂದೆಯನ್ನು ತಮಾಷೆಗಾದರೂ ಗಂಡನೆನ್ನುವುದು ನಿಜವೇ ಎಂದು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ಮದುವೆಗಳಲ್ಲಿ 'ಬೂವ ಇಕ್ಕುವ ಶಾಸ್ತ್ರ', 'ಹೂ ಚೆಂಡಾಡುವುದು', 'ಕಂದಲ ಮಡಿಕೆಶಾಸ್ತ್ರ', 'ತೊಟ್ಟಿಲು ತೂಗಿಸುವ ಶಾಸ್ತ್ರ', 'ಗಂಧದ ಹುಡಿ ಆಡುವುದು', 'ಓಕಳಿ ಆಡುವುದು', 'ಬಾಗಿಲು ತಡೆಯುವ ಶಾಸ್ತ್ರ', 'ಅತ್ತೆ ಮುಖ ತೋರಿಸುವ ಶಾಸ್ತ್ರ'[25] ಮೊದಲಾದವುಗಳ ಹಿಂದೆ ಹಲವಾರು ಕಾರಣಗಳಿವೆ. ಆದರೆ ಬರಬರುತ್ತಾ ಇವೆಲ್ಲ ಶಾಸ್ತ್ರಕ್ಕಾಗಿಯಷ್ಟೆ ಆಚರಣೆಯಲ್ಲಿ ಉಳಿದವಲ್ಲದೆ ಮನರಂಜನೆಯ ಸಂದರ್ಭಗಳೂ ಎನಿಸಿವೆ. ಹೆಸರು ಹೇಳಿಸುವುದು ಕೂಡ ಹೀಗೆ ಮನರಂಜನೆಯ ರೂಪ ಪಡೆದಿದೆ.

ಹೆಣ್ಣು—ಗಂಡು ಗಂಧದ ಹುಡಿ ಎರಚಾಡಿಸುವ ಶಾಸ್ತ್ರದ ಸಂದರ್ಭದಲ್ಲಿ ಹೆಸರು ಹೇಳಿಸುವುದು ಪದ್ಧತಿ. ದೇವಸ್ಥಾನದ ಮುಂದೆ ಹಸೆ ಮಣೆಯ ಮೇಲೆ ಹಾಕಿದ ಕರಿಯ ಕಂಬಳಿ ಗದ್ದಿಗೆಯ ಮೇಲೆ ಕುಳಿತು ಮುತ್ತೈದೆ ಶಾಸ್ತ್ರ ಮಾಡಿದ ನಂತರ ಗಂಧದ ಪುಡಿ ಬೆರೆಸಿದ ಅರಿಶಿನದ ಪುಡಿಯನ್ನು ಒಬ್ಬರ ಮೇಲೆ ಮತ್ತೊಬ್ಬರು ಎರಚುತ್ತಾರೆ. ಗಂಧದ ಪುಡಿ ಸಿಗದಿದ್ದರೆ ಕೊನ್ನಾರಿಗೆಡ್ಡೆ ಒಣಗಿಸಿ ಪುಡಿ ಮಾಡಿ ಅದನ್ನೇ ಗಂಧದ ಪುಡಿಗೆ ಬದಲು ಬಳಸುವುದುಂಟು. ಇದು ಸ್ವಲ್ಪಮಟ್ಟಿಗೆ ಸುವಾಸನೆಯಿಂದ ಕೂಡಿರುತ್ತದೆ. ಹೆಣ್ಣು ಗಂಡಿಗೆ, ಗಂಡು ಹೆಣ್ಣಿಗ ಗಂಧದ ಹುಡಿ ಎರಚುವುದು ಮುಖಕ್ಕೆ. ತಪ್ಪಿಸಿಕೊಳ್ಳಲು ಇಬ್ಬರೂ ಪ್ರಯತ್ನಿಸುತ್ತಿರುತ್ತಾರೆ. ಹಾಗಾಗಿ

24 ಕನ್ನಡ ಒಡಪುಗಳು-ಲೀಲಾವತಿ ತೋರಣಗಟ್ಟಿ, ಪುಟ-೪

25 ಮದುವೆ ಮತ್ತು ಮದುವೆ ಶಾಸ್ತ್ರಗಳ ವಿವರಗಳಿಗೆ ನೋಡಿ; ಎಚ್.ಎಲ್ ನಾಗೇಗೌಡರ 'ವನ್ನೂರು' ಗ್ರಂಥ.

ಒಮ್ಮೊಮ್ಮೆ ಕಣ್ಣು ಮೂಗು ಬಾಯಿಗೂ ಪುಡಿಯನ್ನು ತುಂಬುವುದುಂಟು. 'ಅಡ್ಡಲಾದಮ್ಮ ಅಡ್ಡಲಾದಂಗೆ'ಯರು ಗಂಡುಹೆಣ್ಣುಗಳ ಮೇಲೆ ಬಿದ್ದ ಪುಡಿಯನ್ನು ಕರವಸ್ತ್ರದಿಂದ ಒರೆಸುತ್ತಿರುತ್ತಾರೆ. ಇಷ್ಟರಲ್ಲಾಗಲೇ ಸ್ವಲ್ಪ ಸಲಿಗೆ ಪಡೆದ ಹೆಣ್ಣು ಗಂಧದ ಹುಡಿ ಎರಚುವ ನೆಪದಲ್ಲಿ ಗಂಡನ ಮುಖವನ್ನೂ ಒಂದಿಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾಳೆ.

ಹೆಣ್ಣು ಗಂಡು ಗಂಧುಡಿ ಆಡುವುದಕ್ಕೆ ಮೊದಲು ಮುತ್ತೈದೆಯರು ಅಕ್ಕಿ ಇಕ್ಕುವ ಶಾಸ್ತ್ರ ಮಾಡುತ್ತಾರೆ. ಒಂದಿಬ್ಬರು ಮದುವೆಯಾದ ಗಂಡಸರೂ ಸೇರಿದಂತೆ ೩–೫–೭ ಜನ ಈ ಶಾಸ್ತ್ರ ಮಾಡುತ್ತಾರೆ. ಮದುಮಕ್ಕಳೆದುರಿಗೆ ತೇವಟಿಗೆ ಮಣೆ ಮೇಲೆ ಇರಿಸಿದ ಕಳಸ ಕನ್ನಡಿಗಳಿಗೆ ಅವನ್ನು ಇರಿಸಿದ ತಟ್ಟೆಯಲ್ಲೇ ಇರುವ ಅರಿಸಿಣ, ಕುಂಕುಮ, ವಿಭೂತಿ ಹಚ್ಚಿ ಅಕ್ಕಿ ಇಟ್ಟು, ಅದೇ ರೀತಿ ಗಂಡು ಹೆಣ್ಣಿಗೂ ಮಾಡುತ್ತಾರೆ. ಎರಡು ಕೈಯಲ್ಲೂ ಅಕ್ಕಿ ಹಿಡಿದು, ಕುಳಿತಿರುವ ಗಂಡಿನ ಎರಡೂ ಮಂಡಿ, ಭುಜಗಳನ್ನು ಬಲವಾಗಿ ಅದುಮಿ ಗಂಡಿನ ಸಾಮರ್ಥ್ಯ ಪರೀಕ್ಷಿಸುವ ಕೆಲಸವೂ ನಡೆಯುತ್ತದೆ ಈ ಸಂದರ್ಭದಲ್ಲಿ–ಮುತ್ತೈದೆಯರಿಂದ.ಎಷ್ಟೇ ಅದುಮಿದರೂ ಅಲುಗಾಡದಂತೆ ಕೂರುವ ಗಂಡುಗಳಿರುವಂತೆ ಮುಟ್ಟಿದ ಕೂಡಲೇ ವಾಲಾಡುವ ಕೊನೆಗೆ ಆಯತಪ್ಪಿ ಉರುಳಿಕೊಳ್ಳುವ ಗಂಡುಗಳೂ ಇರುತ್ತವೆ. ನಂತರ ಎಡಗೈಲಿರುವ ಅಕ್ಕಿಯನ್ನು ಬಲಗೈಗೆ ತೆಗೆದುಕೊಂಡು ಎಡಗೈಯನ್ನು ಗಂಡಿನ ತಲೆಯ ಮೇಲಿಟ್ಟು ಬಲಗೈಲಿರುವ ಅಕ್ಕಿಯನ್ನು ಮೂರು ಸಲ ಎಸೆಯುತ್ತಾಳೆ–ಮುತ್ತೈದೆ ಶಾಸ್ತ್ರ ಮಾಡುವವಳು. ಅಕ್ಕಿ ಇಕ್ಕಿ ಆದಮೇಲೆ ಒಂದು ವೀಳೆಯದೆಲೆಯಲ್ಲಿ ಅಡಿಕೆ ಇಟ್ಟು ದುಂಡಗೆ ಸುತ್ತಿ ತನ್ನೆರಡು ಕೈಗಳ ತುದಿಬೆರಳುಗಳಲ್ಲೂ ಹಿಡಿದು ಕಣ್ಣು ಮುಚ್ಚಿ ಕೈ ಮುಗಿದು ಬಲಮುಂದಾಗಿ ಒಂದು ಸುತ್ತು ತಿರುಗುತ್ತಾ ದೇವರಿಗೆಲ್ಲ ಕೈಮುಗಿದು ಅದನ್ನು ತುದಿಮುಂದಾಗಿ ಗಂಡಿಗೆ ಕೊಡುತ್ತಾಳೆ. ಈಸಿಕೊಂಡ ಗಂಡು ಮತ್ತೆ ಅವಳಿಗೆ ಕೊಡಬೇಕು. ಇವಳು ಈಸಿಕೊಳ್ಳುವುದಿಲ್ಲ. ಹೆಣ್ಣಿನ ಹೆಸರು ಹೇಳಿದ ಮೇಲೆ ಈಸಿಕೊಳ್ಳುತ್ತಾಳೆ. ಈಗ ಇವಳ ಸರದಿ, ಗಂಡು ಈಸಿಕೊಳ್ಳುವುದಿಲ್ಲ. ಅವಳ ಗಂಡನ ಹೆಸರು ಹೇಳಿಸುವುದು ಇವನ ಉದ್ದೇಶ. ಹೆಸರೇಳದಿದ್ದರೆ ಗಂಡು ಎಲೆಯನ್ನು ಈಸಿಕೊಳ್ಳುವುದಿಲ್ಲ. ಹಾಗಂತ ಆ ಎಲೆಯನ್ನು ಅವನ ಕೈಗೆ ಕೊಡದೆಯೂ ಬರುವಂತಿಲ್ಲ. ಹೀಗಾಗಿ ಅನಿವಾರ್ಯವಾಗಿ ಗಂಡನ ಹೆಸರು ಹೇಳಲೇಬೇಕಾಗುತ್ತದೆ. ಆಗ ಗಂಡನ ಹೆಸರು ಹೇಳಿ ವೀಳೆಯದೆಲೆಯನ್ನು ಕೊಟ್ಟು ಹಿಂದೆ ಬರುತ್ತಾಳೆ. ಕೆಲವರು ನೇರವಾಗಿ ಗಂಡನ ಹೆಸರು ಹೇಳುವ ಬದಲು ತನ್ನ ಸುತ್ತಮುತ್ತಲಿನ ಪರಿಸರ, ಗಂಡ ಅತ್ತೆ ಮಾವ ಮೈದುನ ನಾದಿನಿಯರ ಗುಣದೋಷಗಳನ್ನೊಳಗೊಂಡ ಸಾಂಸಾರಿಕ ವಿಷಯ ಇತ್ಯಾದಿಗಳನ್ನು ಪ್ರಾಸಕೂಡಿದ ಸಾಲುಗಳಿಂದ ಆಕರ್ಷಕವಾಗಿ ವರ್ಣಿಸಿ, ಗಂಡನನ್ನು ಹೊಗಳಿ ಅಥವಾ ತೆಗಳಿ ನೆರೆದ ಜನರ ಗಮನವನ್ನು ಅತ್ತ ಸೆಳೆದು ಕೊನೆಯಲ್ಲಿ



ಹೆಸರು ಸೇರಿಸಿ ಹೇಳುತ್ತಾರೆ. ಹೀಗೆಯೇ ಹೆಣ್ಣಿನಿಂದಲೂ ಗಂಡಿನ ಹೆಸರೇಳಿಸುವುದು ಹಾಗೂ ಹೇಳುವುದು ನಡೆಯುತ್ತವೆ. ಸುತ್ತಲೂ ನೆರೆದ ಜನ ಕೇಳಲಿಲ್ಲ ಜೋರಾಗಿ ಹೇಳಿ ಎಂದು ಎರಡು ಮೂರು ಸಲ ಹೇಳಿಸುವುದೂ ಉಂಟು.

ಈಗ ಹೆಣ್ಣು ಗಂಡು ಪರಸ್ಪರ ತಮಗೆ ತಾವೇ ಒಬ್ಬರಿಗೊಬ್ಬರು ಅಕ್ಕಿ ಇಕ್ಕಬೇಕು. ಮೊದಲಿಗೆ ಹೆಣ್ಣು ಗಂಡಿಗೆ ಅಕ್ಕಿ ಇಕ್ಕುತ್ತಾಳೆ. ಇದಕ್ಕಾಗಿ ಅವಳು ಮೇಲೆದ್ದಾಗ ಇವನು ಅವಳ ಜಾಗದಲ್ಲಿ ಕೂರುತ್ತಾನೆ. ಶಾಸ್ತ್ರವೆಲ್ಲ ಮುಗಿದ ಮೇಲೆ ತನ್ನ ಜಾಗ ಬಿಟ್ಟು ಕೊಡುವಂತೆ ಅವಳು ಕೇಳಬೇಕು. ಇಲ್ಲದಿದ್ದರೆ ಜಾಗ ಬಿಡುವುದಿಲ್ಲ. ಹಾಗಂತ ಅವನ ಜಾಗದಲ್ಲಿ ಇವಳು ಕೂರುವಂತೆಯೂ ಇಲ್ಲ. ಆವಾಗ:

ಮಾವನ ಮಗನೆ ಮಲ್ಲಿಗೆ ಹರಳೆ
ನನ್ನ ಬೆಳ್ಳಿ ಸದರ ಬಿಟ್ಟು
ನಿಮ್ಮ ಚಿನ್ನದ ಸದರಕ್ಕೆ ಹೋಗಿ .......

ಎಂದು ತನ್ನ ಪತಿಯ ಹೆಸರು ಸೇರಿಸಿ ಹೇಳುತ್ತಾಳೆ. ಗಂಡು ತನ್ನ ಜಾಗಕ್ಕೆ ಹೋಗಿ ಕೂರುತ್ತಾನೆ. ನಂತರ ಗಂಡು ಹೆಣ್ಣಿಗೆ ಅಕ್ಕಿ ಇಕ್ಕಬೇಕು. ಇವಳೀಗ ಅವನ ಜಾಗದಲ್ಲಿ ಕೂರುತ್ತಾಳೆ. ಆಗ ಅವನು:

ಅತ್ತೆ ಮಗಳೆ ಮುತ್ತಿನ ಚೆಂಡೆ[26]
ಮಾವನ ಮಗಳೆ ಮಲ್ಲಿಗೆ ಹರಳೆ
ನನ್ನ ಚಿನ್ನದ ಸದರ ಬಿಟ್ಟು
ನಿನ್ನ ಬೆಳ್ಳಿ ಸದರಕ್ಕೆ ಹೋಗೆ........

ಎಂದು ತನ್ನ ಹೆಂಡತಿಯ ಹೆಸರು ಸೇರಿಸಿ ಹೇಳುತ್ತಾನೆ. ಅಲ್ಲಿಗೆ ಜಾಗ ಬದಲಾಯಿಸಿದಂತೆ ಆಗುತ್ತದೆ. ಈಗ ಇಬ್ಬರೂ ಮೇಲೇಳಬೇಕು. ನಾ ಮೊದಲು ತಾಮೊದಲೆಂದು ಮೇಲೇಳುತ್ತಾರೆ. ನಂತರ ಊರಿನೊಳಗೆ ಮೆರವಣಿಗೆ.

ಮದುಮಕ್ಕಳು ಊರೊಳಗೆ ವಾದ್ಯ ಸಮೇತ ಮೆರವಣಿಗೆ ಹೊರಟಾಗ ಮನೆಮನೆಗಳಲ್ಲಿ ಅಕ್ಕಿ ಇಟ್ಟು ಹೆಸರು ಕೇಳುವುದು ರೂಢಿ. ಈ ಸಂದರ್ಭಗಳಲ್ಲಿ ಹೆಣ್ಣು ಗಂಡುಗಳಿಗೆ ಹಲವು ಬಗೆಯ ಸಿಹಿ ತಿಂಡಿ, ಹಣ್ಣು, ಕೊಬ್ಬರಿ ಮೊದಲಾದವುಗಳನ್ನು

26 ತಮಾಷೆಗಾಗಿ 'ಅತ್ತೆ ಮಗಳೆ ಕೊತ್ತಿ ಮರಿಯೇ' ಎಂದೂ ಹೇಳುತ್ತಾರೆ. ಚದರಕೆ ಎದ್ಹೋಗು ಅನ್ನುವುದೂ ಉಂಟು. ನಿನ್ನ ಹಳೇ ಚಾಪೆಗೆ ಎದ್ದೋಗು, ನಿನ್ನ ಹಳೇ ಚಾಪ್ಪಿಗೆ ಎದ್ಹೋಗು ಎಂದು ತಮಾಷೆಗಾಗಿ ಹೇಳುತ್ತಾರಾದರೂ ಅಗ ಜಾಗಬಿಟ್ಟು ಮೇಲೇಳುವುದಿಲ್ಲ. ಚದರ, ಸದರ ಜಾಗಕ್ಕೆ ಹೋಗು ಅಂದಾಗ ಮಾತ್ರ ಜಾಗ ಬಿಡುತ್ತಾರೆ ಹೆಣ್ಣು ಕೂಡ ಹೀಗೆ ಹೇಳುವುದುಂಟು.

ಅಕ್ಕಿ ಇಕ್ಕುವವರು ಕೊಡುವುದುಂಟು. ಇವುಗಳಿಗಾಗಿಯೇ ಕಾಯುತ್ತಿರುವ ಅಡ್ಡಲುದಮ್ಮ ಅಡ್ಡಲುದಂಗಿಯರೂ ಇರುತ್ತಾರೆ. ವಧುವರರನ್ನು ಬಾಗಿಲು ತಡೆಯುವಾಗಲೂ ತಡೆದವರಿಗೆ ಇವರು ಹೆಸರು ಹೇಳಲೇಬೇಕು. ಹೀಗೆ ಇನ್ನೂ ಕೆಲವು ಸಂದರ್ಭಗಳಲ್ಲಿ ನವದಂಪತಿಗಳು ಹೆಸರು ಹೇಳುತ್ತಾರೆ.

ಮೆರವಣಿಗೆಯಲ್ಲಿ ಕೆಲವರು ಹೆಣ್ಣು ಗಂಡನ್ನು ಅಡ್ಡಹಾಕಿ ನಾಟಕದ ಭಾಷೆಯಲ್ಲಿ ಹೆಸರು ಕೇಳಿ ಹೇಳಿಸಿ ಸಂತೋಷಪಡುತ್ತಾರೆ. ಉದಾಹರಣೆಗೆ, ನಾಗಮಂಗಲ ಸುತ್ತಿನಲ್ಲಿ

ಕಳಸ ಕನ್ನಡಿ ಸೈತ
ಮಂದಿ ಮಾರ್ಬಲ ಸೈತ
ರಾಜ ಬೀದಿಯಲ್ಲಿ ಬಂದ
ಕಾರಣವೇನು ?

ಎಂದು ಸಾಮಾನ್ಯವಾಗಿ ಗಂಡಸರು ಗಂಡನ್ನು ಕೇಳುತ್ತಾರೆ. ಆಗ ವರ 'ಹೀಗೆ ಮದುವೆಯಾಗಿ ಬಂದಿದ್ದೇನೆ' ಅನ್ನುತ್ತಾನೆ. ಹಾಗಾದರೆ 'ತಮ್ಮ ರಾಣಿಯ ಹೆಸರೇಳಿ ಹೊರಡಬಹುದು' ಅನ್ನುತ್ತಾರೆ. ಅಥವಾ 'ಮುತ್ತು ಕೊಟ್ಟು ಹೆಸರೇಳಿ' ಎಂದೂ ಪೀಡಿಸುತ್ತಾರೆ. ಚುರುಕು ಬುದ್ಧಿಯ ಗಂಡು ಹೆಣ್ಣಿನ ಕೊರಳ ಹಾರದಿಂದ ಹೂವೊಂದನ್ನು ಕಿತ್ತುಕೊಂಡು ಅದಕ್ಕೆ ಮುತ್ತಿಟ್ಟು ಹೆಸರೇಳಿ ಮುಂದೆ ಹೆಜ್ಜೆ ಇಡುತ್ತಾನೆ. ಹೀಗೆ ಹೆಸರು ಕೇಳುವುದು ಹೇಳುವುದು ಮನರಂಜನೆಯ ಸನ್ನಿವೇಶವಾಗಿ ಮುಂದುವರೆಯುತ್ತದೆ.

ಜಾನಪದದ ಯಾವುದೇ ಪ್ರಕಾರಗಳ ವರ್ಗೀಕರಣ ಅಂತಿಮವಾದುದಲ್ಲ. ಎಲ್ಲ ಬಗೆಯ ವರ್ಗೀಕರಣಗಳೂ ಅಧ್ಯಯನದ ಅನುಕೂಲಕ್ಕಷ್ಟೆ ಸೀಮಿತವಾದುವು. ಇಲ್ಲಿಯವರೆಗೆ ನಡೆದಿರುವ ವರ್ಗೀಕರಣವೆಲ್ಲ ಒಂದಿಲ್ಲೊಂದು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡೇ ಇವೆ ಎನ್ನಬಹುದು. ಈ ಮಾತು ಒಡಪುಗಳ ವರ್ಗೀಕರಣಕ್ಕಂತೂ ಹೆಚ್ಚು ಅನ್ವಯವಾಗುತ್ತದೆ. ಗಾದೆಗಳನ್ನಾದರೆ ವಸ್ತುವಿನ ಮೇಲೆ, ಒಗಟುಗಳನ್ನಾದರೆ ಉತ್ತರಗಳ ಮೇಲೆ ವರ್ಗೀಕರಿಸಿಕೊಳ್ಳಬಹುದು. ಒಡಪುಗಳಿಗೆ ಈ ಯಾವ ಸೂತ್ರವೂ ಅನ್ವಯಿಸದು. ಇದುವರೆಗೆ ಪ್ರಕಟಗೊಂಡಿರುವ ಹೆಚ್ಚಿನ ಒಡಪು ಸಂಗ್ರಹಗಳಲ್ಲಿ ಅವುಗಳಲ್ಲಿ ಅಭಿವ್ಯಕ್ತಗೊಂಡಿರುವ ವಿಷಯ, ಭಾವನೆಗಳ ಆಧಾರದ ಮೇಲೆ ವಿಂಗಡಿಸಿಕೊಳ್ಳಲಾಗಿದೆಯಲ್ಲದೆ ಆಕರ್ಷಕವಾಗಿ ಕಂಡ ಯಾವುದಾದರೊಂದು ಒಡಪಿನ ಸೊಲ್ಲಿನಿಂದಲೇ ಆಯಾ ವರ್ಗವನ್ನು ಹೆಸರಿಸಲಾಗಿದೆ. ಪ್ರಧಾನವಾಗಿ ಹೆಂಗಸರು ಹೇಳುವ ಒಡಪುಗಳೆಂದು ಗುರುತಿಸಿ ಹೆಂಗಸರ ಒಡಪುಗಳನ್ನು ದಾಂಪತ್ಯಪ್ರೇಮ, ಗಂಡನ



ಗುಣಗಾನ, ಮೊಂಡತನ ದೋಷ, ಉಡುಗೆ-ತೊಡಗೆ, ತಿನಿಸು ಉಣಿಸು, ಕ್ರೀಡೆ-ಕಲೆ ದೇವರು-ಧರ್ಮ ನ್ಯಾಯ-ನೀತಿ, ಹಾಸ್ಯ ಪರಿಹಾಸ, ಕೃಷಿ ಕಾರ್ಯ, ಮಂಗಳ ಕಾರ್ಯ. ಮತ್ತು ಆಧುನಿಕ ಒಡಪುಗಳೆಂದು ವರ್ಗೀಕರಿಸುವ ಪ್ರಯತ್ನಗಳು ನಡೆದಿವೆ. ಇದರ ಜೊತೆಗೆ ಕೌಟುಂಬಿಕ ಸಂಬಂಧ, ಐತಿಹಾಸಿಕ, ಪೌರಾಣಿಕ ಹೀಗೆ ಇನ್ನೂ ಕೆಲವು ವರ್ಗಗಳನ್ನು ಗುರುತಿಸಬಹುದು. ಸಾಮಾನ್ಯವಾಗಿ ಹೆಂಗಸರ ಒಡಪುಗಳಲ್ಲಿ ಹೆಚ್ಚಿನವು ಗಂಡನನ್ನು ಹೊಗಳುವುದು ಅಥವಾ ತೆಗಳುವ ನುಡಿಯಿಂದಲೇ ಕೊನೆಗೊಳ್ಳುತ್ತವೆ. ಇಂಥ ಯಾವುದೇ ಒಡಪಿನಲ್ಲಿ ಅಡುಗೆ—ಊಟ, ವಡವೆ—ವಸ್ತ್ರ, ದೇವರು ದಿಂಡಿರು, ತೋಟ-ತುಡಿಕೆ ಹೀಗೆ ನಾಲ್ಕಾರುವಿಷಯಗಳು ಸ್ಥಾನ ಪಡೆದಿರುತ್ತವೆ.ಒಂದೇ ವಿಷಯದ ಒಡಪುಗಳೂ ಅಲ್ಲೊಂದು ಇಲ್ಲೊಂದು ಕಂಡುಬರುತ್ತವೆಯಾದರೂ ಎಲ್ಲವನ್ನೂ ನಿರ್ದಿಷ್ಟ ವರ್ಗಗಳಲ್ಲಿ ಗುರುತಿಸುವುದು ಕಷ್ಟಸಾಧ್ಯವಾದ ಕೆಲಸ.ಈ ಎಲ್ಲ ಕಾರಣಗಳಿಂದ ಇಲ್ಲಿಯ ಒಡಪುಗಳನ್ನು ಪ್ರತ್ಯೇಕ ವರ್ಗಗಳಲ್ಲಿ ಕೊಡದೆ 'ಅ' ಕಾರಾದಿಯಾಗಿ ಕೊಡಲಾಗಿದೆ. ಆದರೆ ಒಡಪುಗಳ ಪ್ರಾದೇಶಿಕತೆಯನ್ನು ಗುರುತಿಸಲು ಅನುಕೂಲವಾಗುವಂತೆ ಅವುಗಳ ಕ್ರಮಸಂಖ್ಯೆಗಳನ್ನು ಆಯಾ ಪ್ರದೇಶದ ಕೆಳಗೆ ಕೊಟ್ಟಿದ್ದೇನೆ.[27] ಪ್ರಾದೇಶಿಕವಾಗಿ ಇನ್ನೂ ವಿವರವಾಗಿ ಅಂದರೆ ಕನಿಷ್ಟ ತಾಲ್ಲೂಕುವಾರು ವಿಂಗಡಿಸುವ ಅವಕಾಶವಿದ್ದರೂ ಆರಂಭದಲ್ಲಿ ಒಂದೊಂದು ಜಿಲ್ಲೆಯ ಒಡಪುಗಳನ್ನೆಲ್ಲ ಒಂದೇ ಕಡೆಗೆ ಬರೆದುಕೊಂಡಿದ್ದರಿಂದ ಇಲ್ಲಿ ಅದು ಸಾಧ್ಯವಾಗಲಿಲ್ಲ. ಒಡಪುಗಳಲ್ಲಿ ಉಲ್ಲೇಖಗೊಂಡಿರುವ ಆಹಾರ ಪಾನೀಯಗಳು, ಉಡುಗೆ—ತೊಡುಗೆಗಳು, ದೇವರು ಹಾಗೂ ಪೌರಾಣಿಕ ವ್ಯಕ್ತಿ, ಸ್ಥಳ ಪ್ರಾಣಿ ಪಕ್ಷಿಗಳು, ಯಾತ್ರಾ ಸ್ಥಳಗಳು, ಚಾರಿತ್ರಿಕ ಮತ್ತು ಧಾರ್ಮಿಕ ವ್ಯಕ್ತಿಗಳು, ದೇಶ ನಗರ ಪಟ್ಟಣ ಊರುಗಳು, ಆಯುಧಗಳು, ಕಸಬುದಾರರು, ಕಾಯಿ ಸೊಪ್ಪುಗಳು, ಕೃಷಿ ಸಾಧನಗಳು ಮೊದಲಾದವುಗಳ ಸೂಚಿಯನ್ನೂ ತಯಾರಿಸಿ ಕೊಟ್ಟಿದ್ದೇನೆ. ಇದರಿಂದ ನಿರ್ದಿಷ್ಟ ವಿಷಯ ವಸ್ತುಗಳನ್ನು ಹುಡುಕುವವರಿಗೆ ಅನುಕೂಲವಾಗಬಹುದೆಂದು ಭಾವಿಸಿದ್ದೇನೆ,

ಚಿತ್ರದುರ್ಗ, ಶಿವಮೊಗ್ಗ ಭಾಗದಲ್ಲಿ ಇರುವ ಹಾಗೆ ದಕ್ಷಿಣ ಕರ್ನಾಟಕದ ಇನ್ನುಳಿದ ಪ್ರದೇಶಗಳಲ್ಲಿ ಗಂಡಸರು ಒಡಪು ಹೇಳುವುದು ಅಪರೂಪ. ಗಂಧುಡಿ ಆಡುವಾಗ ಹೆಣ್ಣು ಗಂಡು ಜಾಗ ಬದಲಾಯಿಸುವಾಗಷ್ಟೆ ಗಂಡು ಹಿರಿಯರೊಬ್ಬರು (ಸಾಮಾನ್ಯವಾಗಿ ಹೆಂಗಸು) ಹೇಳಿಕೊಟ್ಟ ಹಾಗೆ ಹೇಳುತ್ತಾನಷ್ಟೆ. ಒಡಪು ಹೇಳುವ ಸಂಪ್ರದಾಯವೇ ತುಂಬಾ ಕಡಿಮೆ ಇದ್ದು ಅಲ್ಲಲ್ಲಿ ಹೆಂಗಸರಲ್ಲಿ ಮಾತ್ರ ಕೆಲವು ಉಳಿದಿವೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಒಡಪುಗಳು ವಸ್ತು ವಿಷಯ ಹಾಗೂ ಭಾಷೆಯ ದೃಷ್ಟಿಯಿಂದ ಪಕ್ಕದ ಹುಬ್ಬಳ್ಳಿ ಧಾರವಾಡ ಬಳ್ಳಾರಿ ಭಾಗದ ಒಡಪುಗಳನ್ನೂ ಹೋಲುತ್ತವೆ. ಇಲ್ಲಿಯ ಕೆಲವು ಒಡಪುಗಳು ಉತ್ತರ ಕರ್ನಾಟಕದ

27 ನೋಡಿ, ಅನುಬಂಧಗಳು-೧.

ಸಂಗ್ರಹಗಳಲ್ಲಿ ಕಾಣಲೂಬಹುದು. ಈ ಜಿಲ್ಲೆಗಳ ಒಡಪುಗಳನ್ನು ಹೆಂಗಸರು ಹೇಳುವ ಒಡಪುಗಳು ಹಾಗೂ ಗಂಡಸರು ಹೇಳುವ ಒಡಪುಗಳು ಎಂದಲ್ಲದೆ ದಂಪತಿಗಳು ಹೇಳುವ ಒಡಪುಗಳು ಎಂದೂ ವಿಭಾಗ ಮಾಡಿಕೊಳ್ಳಬಹುದಾಗಿದೆ. ಆದರೆ ಇನ್ನುಳಿದ ಭಾಗದಲ್ಲಿ ಸಾಮಾನ್ಯವಾಗಿ ಒಡಪು ಹೇಳುವವರು ಮುತ್ತೈದೆ ಶಾಸ್ತ್ರ ಮಾಡುವವರು. ದಂಪತಿಗಳು ಜಾಗ ಬದಲಾಯಿಸುವುದನ್ನು ಬಿಟ್ಟರೆ ಹೆಣ್ಣು ಮಾತ್ರ ಮದುವೆಯಾದ ನಂತರದ ವರ್ಷದವರೆಗೂ ಆಗಾಗ ಹೆಸರು ಹೇಳಲೇಬೇಕಾಗಿ ಬರುವುದರಿಂದ ಕೆಲವೊಮ್ಮೆ ಒಡಪು ಹೇಳಬಹುದಷ್ಟೆ. ಆ ಎರಡು ಜಿಲ್ಲೆಗಳ ಒಡಪುಗಳನ್ನು ಸೀಮಂತ, ಮಗುವನ್ನು ತೊಟ್ಟಿಲಿಗೆ ಹಾಕುವಾಗ ಮತ್ತು ಮದುವೆಯ ಬೇರೆ ಬೇರೆ ಶಾಸ್ತ್ರಗಳ ಸಂದರ್ಭಗಳಲ್ಲಿ ಹೇಳುವ ಒಡಪುಗಳು ಎಂದೂ ವಿಭಾಗಿಸಿಕೊಳ್ಳಲು ಅವಕಾಶವಿದೆ. ಕೆಲವು ಒಡಪುಗಳನ್ನು ಇಂತಿಂಥ ಶಾಸ್ತ್ರಗಳ ಸಂದರ್ಭದಲ್ಲೇ ಹೇಳುವವೆಂದು ಹೇಳುತ್ತಾರೆ. ಉದಾಹರಣೆಗೆ : ನಾಗಮಂಗಲ ಸುತ್ತಿನಲ್ಲಿ ನಾಗವಲ್ಲಿ ಶಾಸ್ತ್ರ ಮಾಡಿಸುವಾಗ ಜೋಯಿಸರೇ ಗಂಡಿಗೆ ಹೇಳಿಕೊಟ್ಟು ಹೇಳಿಸುವ ಒಂದು ಒಡಪು ಹೀಗಿದೆ :

ಎನ್ನರಸಿ
ಚಿನ್ನರಸಿ
ಪ್ರಾಣಕಾಂತೆ
ಮೋಹನಾಂಗಿ
ಬಂಗಾರ್ ಬೊಂಬೆ
ನನ್ನ ಮೆಚ್ಚಿ ಬಂದಿದಿಯ
ನನ್ನ ಅಕ್ಕಿ ಆಣೆ ಮೇಲೆ
ನಿನ್ನ ಉಪ್ಪಿನಾಣೆ
ಬಲಗಾಲು ಮುಂದಾಗಿ ಬಾರೆ
ಮೋಹನಾಂಗಿ..............

ಈ ರೀತಿಯ ವರ್ಗೀಕರಣ ಈ ಸಂಕಲನದಲ್ಲಿ ಇಲ್ಲ. ನನ್ನ ಹನ್ನೆರಡುವರ್ಷಗಳಷ್ಟು ದೀರ್ಘಕಾಲದ ಸಂಗ್ರಹದಲ್ಲಿ ಆರಂಭಕ್ಕೆ ಎಲ್ಲವನ್ನೂ ಒಟ್ಟಿಗೆ ಬರೆದುಕೊಂಡಿದ್ದರಿಂದ ಈ ಬಗೆಯ ವರ್ಗೀಕರಣವೂ ಸಾಧ್ಯವಾಗಲಿಲ್ಲ. ಆದರೂ ಕೆಲವು ಒಡಪುಗಳನ್ನು ಅದರಲ್ಲೂ ವಧುವರರು ಹೇಳುವವುಗಳನ್ನು ಸುಲಭವಾಗಿ ಗುರುತಿಸಬಹುದಾಗಿದೆ.[28]

---

28 ವಧುವರರ ಒಡಪುಗಳು:

೪೨೨, ೪೨೩, ೫೧೪, ೬೪೦, ೬೪೨, ೬೫೨, ೬೫೩, ೬೯೧, ೬೯೯-ಈ ಸಂಖ್ಯೆಯ ಒಡಪುಗಳನ್ನು ನೋಡಿ.



ಹಾಗೆಯೇ ಆಧುನಿಕ ಒಡಪುಗಳನ್ನು[29] ಗುರುತಿಸುವುದೂ ಅಷ್ಟೇ ಸುಲಭ. ಸಾಮಾನ್ಯವಾಗಿ ಗ್ರಾಮೀಣರ ಒಡಪುಗಳಲ್ಲಿ ಹೆಚ್ಚಾಗಿ ಅರ್ಥಮಾಡುಕುವುದು ಸಾಧ್ಯವಿಲ್ಲ. ಇವುಗಳಲ್ಲಿ ಗ್ರಾಮೀಣ ಭಾಷೆ, ಗ್ರಾಮೀಣ ಪರಿಸರ, ಗ್ರಾಮ ದೇವತೆಗಳ ಹೆಸರು, ಒಡವೆ ವಸ್ತ್ರಗಳು, ಆಹಾರ ಪಾನೀಯಗಳು ಮೊದಲಾದ ಪ್ರಾದೇಶಿಕ ವಿಷಯ ವೈಶಿಷ್ಟ್ಯಗಳು ಕಂಡು ಬಂದರೆ, ನಾಗರಿಕರು ಮತ್ತು ಓದು ಬರಹ ಬಲ್ಲವರ ಒಡಪುಗಳು ಗ್ರಾಂಥಿಕ ಶಬ್ದ ಜೋಡಣೆಯಿಂದ ಕೂಡಿದ್ದು, ರಾಮಾಯಣ ಮಹಾಭಾರತ ಮೊದಲಾದ ಪುರಾಣ ಪುಣ್ಯ ಕಥೆಗಳಲ್ಲಿಯ ಪಾತ್ರಗಳು, ವಿಷಯಗಳು ಹಾಗೂ ಚಾರಿತ್ರಿಕ ವ್ಯಕ್ತಿ ಮತ್ತು ವಿಷಯಗಳು ಮೊದಲಾದ ಆಧುನಿಕ ವಿಷಯ ವಸ್ತುಗಳು ಕಂಡು ಬರುತ್ತವೆ[30]. ಇಂಗ್ಲಿಷ್ ಶಬ್ದಗಳೂ ಅಲ್ಲಲ್ಲಿ ಬಳಕೆಯಾಗಿವೆ.

ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕ ಭಾಗದ ಒಡಪುಗಳು ವಿಷಯ, ವಸ್ತುಗಳಲ್ಲಿ ಅಷ್ಟಿಷ್ಟು ಪ್ರಾದೇಶಿಕ ಭಿನ್ನತೆ ಇದ್ದರೂ ಅವುಗಳಲ್ಲಿ ವ್ಯಕ್ತವಾಗಿರುವ ಭಾವನೆಗಳಲ್ಲಿ ಸಾಮಾನ್ಯವಾಗಿ ಸಮಾನತೆಯನ್ನು ಗುರುತಿಸಬಹುದು.

ಹಲವು ಸಂದರ್ಭಗಳಲ್ಲಿ ಹೆಸರನ್ನು ಬಲವಂತದಿಂದ ಹೇಳಬೇಕಾಗುತ್ತದೆ. ಹೆಸರುಹೇಳುವವರ ಮನಸ್ಥಿತಿ ಕೇಳುವವರೊಡನಿರುವ ತಮ್ಮ ಸಂಬಂಧವನ್ನು ಅವಲಂಬಿಸಿರುತ್ತದೆ. ವಯಸ್ಸಾದ ಹೆಂಗಸರು ಗಂಡಿನ ಹೆಸರು ಕೇಳಿದವರ ಮೇಲೆ ರೇಗುವುದುಂಟು. ಆದರೂ ಬಿಡದಿದ್ದಲ್ಲಿ ಒಡಪಿನ ಮೂಲಕವೇ ತಮ್ಮ ಕೋಪ ತಾಪ ತೋರುವುದೂ ಉಂಟು. ಆದರೆ ಇವೆಲ್ಲ ಕೋಪತಾಪಗಳಿಂದ ಹೇಳಿದ ಒಡಪುಗಳೆಂದೇನೂ ಹೇಳುವಂತೆಯೂ ಇಲ್ಲ. ತಮಾಷೆಗಾಗಿಯೇ ಹೇಳಿದವೂ ಆಗಿರಬಹುದು.

---

29 ನಾಗರಿಕರ/ಅಕ್ಷರಸ್ಥರ/ಆಧುನಿಕ ಒಡಪುಗಳು

೧೭, ೧೮, ೧೯, ೩೧, ೩೬, ೫೮, ೬೨, ೬೩, ೬೪, ೭೨, ೭೮, ೧೦೮, ೧೦೯, ೧೧೯, ೧೪೩, ೧೬೫, ೧೮೨, ೨೦೦, ೨೦೧, ೨೧೧, ೨೧೨, ೨೩೧, ೨೪೪, ೨೪೯, ೨೫೭, ೨೫೮, ೨೫೯, ೨೭೦, ೨೭೭, ೨೮೬, ೨೮೭, ೨೯೬, ೨೮೭, ೩೦೦ ರಿಂದ ೩೦೪, ೩೨೪, ೩೨೫, ೩೨೭, ೩೩೦, ೩೩೧, ೩೩೩, ೩೩೯, ೩೫೦, ೩೫೧, ೩೫೨, ೩೫೩, ೩೫೫, ೩೬೬, ೩೭೨, ೩೭೪, ೩೮೫, ೩೮೬, ೩೮೭, ೩೯೩, ೪೦೦, ೪೦೫, ೪೩೬.೪೩೯, ೪೪೫, ೪೪೯, ೪೬೩, ೪೬೭ ರಿಂದ ೪೭೧, ೪೭೩, ೪೭೪, ೪೭೫, ೪೭೭ ರಿಂದ ೪೮೦, ೪೮೯ ರಿಂದ ೪೯೯, ೫೦೨, ೫೦೩, ೫೦೪, ೫೧೭, ೫೧೯, ೫೨೦, ೫೨೬, ೫೩೪, ೫೩೭, ೫೪೧, ೫೪೨, ೫೪೪ ರಿಂದ ೫೪೭, ೬೦೫, ೬೦೬, ೬೫೬. ೬೬೬ ಮತ್ತು ೬೭೭. ಈ ಒಡಪುಗಳೆಲ್ಲ ಶಿವಮೊಗ್ಗ ಮತ್ತು ಚಿತ್ರದುರ್ಗ ಭಾಗದವು. ದಕ್ಷಿಣ ಕರ್ನಾಟಕದ ಇನ್ನುಳಿದ ಭಾಗದಲ್ಲಿ ಒಡಪು ಹೇಳುವ ಸಂಪ್ರದಾಯವೇ ಕಾಣೆಯಾಗುತ್ತಿರುವುದರಿಂದ ಹೊಸ ಒಡಪುಗಳ ಸೃಷ್ಟಿ ಹೇಗೆ ತಾನೆ ಆದೀತು ?

ಅರೆಮ್ಯಾಲರೆ ತೊರೆ ಮ್ಯಾಲೆ ತೊರೆ
ಹೆಸರು ಕೇಳಿದೋರ ತಿಗುದ ಮ್ಯಾಲೆ ಮೂರು ಬರೆ

ಎಂದು ತುಂಬಿದ ಸಭೆಯಲ್ಲಿ ಹೇಳುವ ಹೆಂಗಸಿನ ಧೈರ್ಯ ನೋಡಿ ಹಾಗೆಯೇ "........ರ ಹೆಸರು ಕೇಳಲಿಕ್ಕೆ ನಿಮಗ್ಯಾಕಿಷ್ಟು ಹಟ?

ನನ್ನ ಗಂಡನ ಹೆಸರು ಹೇಳಿದವರ ಹೆಣ ಎಲ್ಲಿ ? ಎಂದು ಕೇಳುವಂತೆ,

ಹೆಸರು ಕೇಳುವವರು ಬಲು ಹುಚ್ಚು
ಹೆಸರು ಕೇಳಿದವನ ಹೆಂಡತಿಗೆ ಎಡಮುರಿಗೆ ಕಟ್ಟು
ಹೆಸರು ಕೇಳಿದವರ ಕಣ್ಣಿಗೆ ಕಾರದ ಪುಡಿ
ಹೆಸರು ಕೇಳಿದೋನ ಬಾಯಿ ಮೇಲೆ ಬಡಿ
ನನ್ನ ಗಂಡನ ಹೆಸರು ಕೇಳಿದೋರ ಸ್ವಾಟ್ಗೆ ಎಟ್ಟ

ಎಂದೆಲ್ಲ ಸಿಟ್ಟಾಗಿದ್ದಾಳೆ, ಹಾಸ್ಯ ಮಾಡಿದ್ದಾಳೆ.

ಹೆಸರು ಹೇಳುವುದು ಜನರ ಕಾಟಕ್ಕೆ ಎಂದಿರುವಂತೆ,
....ರ ಹೆಸರು ಹೇಳುವುದು ಆರತಿ ಮಾಡಿದ ಕಾರಣ
"ನಾವು ಹೆಸರು ಹೇಳುವುದು ಆರತಿ ಸಲುವಾಗಿ"
ಎಂದಿರುವುದೂ ಉಂಟು.

ಯುವಕ ಯುವತಿಯರು ತುಂಟಾಟಕ್ಕಾಗಿ ಮದುವೆಯಾಗದವರನ್ನೂ ಹೆಸರು ಕೇಳುವುದುಂಟು. ಅಂತಹ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡ ಹುಡುಗಿಯೊಬ್ಬಳು "ಮದುವೆಯಾಗದವಳ ಹೆಸರು ಕೇಳುವರು ಬಲು ಬಿತ್ರಿ" ಅಂದಿದ್ದಾಳೆ.

ನಮ್ಮನೇರ ಹೆಸರು ಹೇಳೋಕೆ ನನಗೆ ಬಲು ಆನಂದ ಎಂದೊಬ್ಬಳು ಹೇಳಿದರೆ,

ಗುಣದಲ್ಲಿ ಹೇಳುವೆ ಗುರುವಿನ ಹೆಸರು
ಮನದಲ್ಲಿ ಹೇಳುವೆ ಮೈದುನನ ಹೆಸರು
ನಗುತಾ ಹೇಳುವೆ ನಾದುನಿ ಹೆಸರು
ಹತ್ತು ಮಂದೀಲಿ ಹೇಳುವೆ ಅತ್ತೆ ಮಾವರ ಹೆಸರು
ನೂರು ಮಂದೀಲಿ ಹೇಳುವೆ ತಂದೆ ತಾಯಿಯರ ಹೆಸರು
ಸಾವಿರ ಮಂದೀಲಿ ಹೇಳುವೆ ನಮ್ಮವರು....ರ ಹೆಸರು

ಎಂದು ಮತ್ತೊಬ್ಬಳು ತನ್ನ ಪತಿ, ಮಾವ, ಅತ್ತೆ, ನಾದಿನಿ, ಮೈದುನ, ತಂದೆ, ತಾಯಿ, ಗುರು ಎಲ್ಲರನ್ನೂ ಹೆಚ್ಚುಗಾರಿಕೆಯಿಂದ ನೆನೆದಿದ್ದಾಳೆ. "ನಮ್ಮನೇರ ಹೆಸರೇ ಲೋದು ಬಾಳ ತಪ್ಪು" ಎಂಬ ಭಾವನೆ ಇನ್ನೊಬ್ಬ ಗರತಿಯದು.



ಎಂಟು ಹತ್ತು ವರ್ಷದ ಹೆಣ್ಣುಮಕ್ಕಳಿಗೆಲ್ಲ ಮದುವೆ ಮಾಡುವ ಕಾಲ ವೊಂದಿತ್ತು. ಹದಿನೆಂಟು ಮೀರಿದ ಹೆಣ್ಣಿಗೆ ಮಾತ್ರ ಮದುವೆ ಎಂದು ಕಾನೂನಿದ್ದರೂ ೧೫–೧೬ ವರ್ಷದ ಹುಡುಗಿಯರಿಗೆ ಈಗಲೂ ಮದುವೆ ನಡೆಯುತ್ತಿವೆ. ಮದುವೆ, ಸಂಸಾರಗಳ ಬಗ್ಗೆ ಕಲ್ಪನೆಯೇ ಇಲ್ಲದ ವಯಸ್ಸಿನಲ್ಲಿ ಮದುವೆಯಾದ ಹೆಣ್ಣೊಬ್ಬಳು 'ನಮ್ಮ ಲಗ್ನವಾಗಿದ್ದು ಚಿಕ್ಕಂದಿನಲ್ಲಿ' ಎಂದಿದ್ದಾಳೆ.

ವರದಕ್ಷಿಣೆ ಒಂದು ಸಾಮಾಜಿಕ ಪಿಡುಗಾಗಿ ಬೆಳೆದಿದೆ. ತಾವು ಮದುವೆ ಯಾದಾಗ ಇದನ್ನು ಕಾಣದ, ಕೇಳದ ಹಿರಿಯರು ಜಾತ್ರೆ ಸಂತೆಗಳಲ್ಲಿ ತಮ್ಮ ದನ ಗಳಿಗೆ ಬೆಲೆ ಕಟ್ಟುವ, ವ್ಯಾಪಾರದಲ್ಲಿ ಚೌಕಾಸಿ ಮಾಡುವ, ವ್ಯಾಪಾರ ಮುಗಿದ ಮೇಲೆ 'ಹಗ್ಗದ ಕಾಸು' ಕೊಟ್ಟು ದನಗಳು ತಮ್ಮವೆಂದು ಗೊತ್ತುಮಾಡಿಕೊಳ್ಳುತ್ತಿದ್ದ ಪದ್ಧತಿ ಯನ್ನು ಇಂದಿನ 'ಗಂಡಿನ ವ್ಯಾಪಾರ'ಕ್ಕೆ ಹೋಲಿಕೆ ಮಾಡಿ ವ್ಯಥೆ ಪಡುತ್ತಿದ್ದಾರೆ. ಈ ಪದ್ಧತಿಯಿಂದ ಕಂಗಾಲಾಗಿ ಹೋಗಿದ್ದಾರೆ. ಇದನ್ನು ಅರ್ಥ ಮಾಡಿಕೊಂಡ ಹೆಣ್ಣೊಬ್ಬಳು

ಹಳೆ ಜನರ ತಲೆ ಕೆಡಿಸಿದ್ದು ವರದಕ್ಷಿಣೆ
ನಾನು ಮಾಡಿದ್ದು....ರ ರಕ್ಷಣೆ

ಎಂದಿದ್ದಾಳೆ. ಆದರೆ ತನ್ನ ಗಂಡನನ್ನು ಯಾವ ರೀತಿಯಲ್ಲಿ ರಕ್ಷಣೆ ಮಾಡಿದಳೆಂಬು ದನ್ನು ಮಾತ್ರ ಇಲ್ಲಿ ತಿಳಿಸಿಲ್ಲ.

ಬಸವಣ್ಣನವರು ಹುಟ್ಟಿದ್ದು ಕಲ್ಯಾಣಕ್ಕಾಗಿ
ಗಾಂಧೀಜಿ ಹುಟ್ಟಿದ್ದು ಸತ್ಯಕ್ಕಾಗಿ

ಎಂದು ಹೇಳುವಾಗ ತನ್ನನ್ನು ಹೀಗೇ ಹೊಗಳಬಹುದೆಂದು ನಿರೀಕ್ಷಿಸಿದ ಗಂಡೊಬ್ಬ....ರು ಹುಟ್ಟಿದ್ದು ವರದಕ್ಷಿಣೆಗಾಗಿ ಎಂದಾಗ ಮುಖ ಪೆಚ್ಚು ಮಾಡಿ ಕೊಂಡಿರಬೇಕು.

ಹೆಂಗಸರ ಒಡಪುಗಳಲ್ಲಿ ಗಂಡನನ್ನು ಹೊಗಳಿರುವುದು ಅಥವಾ ತೆಗಳಿರುವುದು ಸಾಮಾನ್ಯ.

ಚಿನ್ನದ ಮಣೆ ಮ್ಯಾಲೆ ರನ್ನದ ತಟ್ಟೆ ಮಡಿಕೊಂಡು
ಬೆಳ್ಳಿ ರೂಪಾಯಿ ಲೆಕ್ಕ ಬಿಡ್ತಾರೆ.
ಸುಪ್ಪತ್ಗೆ ಮ್ಯಾಲೆ ಶಿವಪೂಜೆ ಮಾಡ್ತಾರೆ
ಆನೆ ಮ್ಯಾಲೆ ಕೂತ್ಗೊಂಡು ದಾನ ಮಾಡ್ತಾರೆ
ಸಭೇಲಿ ಕೂತ್ಕೊಂಡು ಜವಾಬು ಕೊಡ್ತಾರೆ
ಕಚೇರೀಲಿ ಕೂತ್ಕೊಂಡು ಇಚಾರ್ಣೆ ಮಾಡ್ತಾರೆ

ಎಂದು ಗಂಡನ ಶ್ರೀಮಂತಿಕೆ, ಸ್ಥಾನ ಮಾನಗಳನ್ನು ಕುರಿತು ಹೇಳಿರುವ ಗರತಿ ಅತ್ತೆ ಹೊಟ್ಟೇಲಿ ಮುತ್ತಿನಂತೋರು ಹುಟ್ಟಿದ್ದಾರೆ ಎಂದು ಮೆಚ್ಚಿ ನುಡಿದಿದ್ದಾಳೆ.

ನಮ್ಮವರಿಗೆ ಎಲ್ಲಿಲ್ಲದ ಇಂಗ್ಲೀಷ್ ವ್ಯಾಮೋಹ. ಮಾತಿನ ನಡುವೆ ಕೆಲವಾದರೂ ಇಂಗ್ಲಿಷ್ ವಾಕ್ಯ ಶಬ್ದಗಳನ್ನಾದರೂ ಸೇರಿಸಬೇಕು. ಆಗಲೇ ಸಮಾಜದಲ್ಲಿ ತಮ್ಮ ಪ್ರತಿಷ್ಠೆಯ ಹೆಚ್ಚುಗಾರಿಕೆ ಅಂದುಕೊಂಡವರು ಹಲವರು. ಬಟ್ಲರ್ ಇಂಗ್ಲಿಷ್ ಮಾತಾಡುವ ಕೆಲವರಿಗೆ ತನ್ನ ತಾಯಿಭಾಷೆ ಕನ್ನಡವನ್ನು ಅನ್ಯ ಭಾಷೆಯವರ ಹಾಗೆ ತೊಡಿರಿಸಿಕೊಂಡು ಮಾತಾಡುವುದು ಕೆಲವರ ಹುಚ್ಚು. 'ನಮ್ಮುಡುಗುನ್ಗೆ ಇಂಗ್ಲೀಷು ನೀರ್ಕುಡ್ದಂಗೆ, ಆ ಹಾಳಾದ್ದು ಕನ್ನಡ್ವೇ ಬರ್ದು ಅವುನ್ಗೆ' ಎಂದು ಹೇಳುವ ಮೂಲಕ ತನ್ನ ಮಗ ಬಹಳ ಬುದ್ಧಿವಂತ ಎಂದು ಜಂಬ ಕೊಚ್ಚಿಕೊಳ್ಳುವ ಅಮ್ಮಂದಿರೇ ಹೆಚ್ಚು. ಇತ್ತೀಚೆಗಂತೂ ಹಳ್ಳಿಹಳ್ಳಿಗಳಿಗೂ ಇಂಗ್ಲೀಷ್ ಕಾನ್ವೆಂಟ್ ಎಂಬ ಹೆಸರಲ್ಲಿ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಅರ್ಧಂಬರ್ಧ ಇಂಗ್ಲಿಷ್ ಮಾಧ್ಯಮದ ಶಾಲೆಗಳ ಟೀಚರ್‌ಗಳಿಗೇ ಅತ್ತ ಇಂಗ್ಲೀಷಾಗಲೀ ಇತ್ತ ಕನ್ನಡವಾಗಲೀ ಸರಿಯಾಗಿ ಬಾರದು. ಅಕ್ಷರಗಳ ಮುಖವನ್ನೇ ಕಾಣದ ಹಾಲು, ಹಣ್ಣು, ಹೂ, ತರಕಾರಿ ಮಾರುವವರಿಂದ ಹಿಡಿದು ಎಲ್ಲರೂ ತಮ್ಮ ಮಕ್ಕಳನ್ನು ಕಾನ್ವೆಂಟ್ ಶಾಲೆಗೆ ಕಳಿಸಿ ಎಲ್ಲರನ್ನೂ ಇಂಜಿನಿಯರ್, ಡಾಕ್ಟರ್ ಮಾಡುವ ಹಂಬಲ.' ನಮ್ಮುಡ್ಗ ಕಾರ್ಮೆಂಟ್ಗೋಗವ್ನೆ' ಅನ್ನೋದೆ ಅವರವ್ವನಿಗೆ ಹೆಮ್ಮೆ. ಅವ್ವ ಅಂತಿದ್ದೋನು 'ಮಮ್ಮಿ' ಅಂದಾಗ ಅವಳನ್ನು ಹಿಡಿಯಲು ನಾಲ್ಕು ಜನ ಸಾಲದು. ಹೀಗಾಗಿ ವ್ಯಾಪಾರಿ ಉದ್ದೇಶದ ಇಂತಹ ವಿದ್ಯಾ (?) ಸಂಸ್ಥೆಗಳು ಹಾಗೂ ಪೋಷಕರು ಮಕ್ಕಳ ಭವಿಷ್ಯವನ್ನೇ ಹಾಳು ಮಾಡುತ್ತಿದ್ದಾರೆ. ಇಂಥ ವಾತಾವರಣದಿಂದಾಗಿ ಗ್ರಾಮೀಣ ಗರತಿಯನ್ನೂ ಇಂಗ್ಲಿಷ್ ವ್ಯಾಮೋಹ ಕಾಡಿದಂತಿದೆ. ತನ್ನ ಗಂಡ ಕುರ್ಚಿ ಮ್ಯಾಲೆ ಕೂತ್ಕೊಂಡು ಇಂಗ್ಲಿಷ್ ಪೇಪರ್ ಓದ್ತಾನೆ ಎಂದು ಹೇಳೋದರಲ್ಲೇ ಆಕೆಗೇನೋ ಆನಂದ.

ಟೀ ಕಾಫಿ ಕುಡಿಯದ, ಬೀಡಿ ಸಿಗರೇಟು ಸೇದದ, ಪರಸ್ತ್ರೀಯರನ್ನು ಕಣ್ಣೆತ್ತಿ ಕೂಡ ನೋಡದ, ಪರಮೇಶ್ವರ ಕೊಟ್ಟ ಬುದ್ಧೀಲಿ ಪರ ಉಪಕಾರ ಮಾಡುವ ಗಂಡನನ್ನು ಎಷ್ಟು ಹೊಗಳಿದರೂ ಸಾಲದು. ಸ್ವಾವಲಂಬನೆ ಸುಖದ ಹಾದಿ, ಪರಾವಲಂಬನೆ ದುಃಖದ ಹಾದಿ ಎಂದು ಅರಿತಿರುವ ಹೆಣ್ಣು ತನ್ನವರ ಕೈಹಿಡಿದಿದ್ದು ಸ್ವತಂತ್ರದ ಹಾದಿ ಎಂದು ಹಾಡಿ ಹೊಗಳಿದ್ದಾಳೆ. ಬಯಲಲ್ಲಿ ನಿಂತು ಭಾಷಣ ಮಾಡ್ತಾರೆ, ದೇಶ ತಿರುಗಿ ಪಾಸಾಗಿ ಬರ್ತಾರೆ, ಹಳ್ಳಳ್ಳಿ ತಿರುಗಿ ಒಳ್ಳೇರು ಅನಿಸಿಕೊಳ್ತಾರೆ ಎಂಬ ಮೆಚ್ಚಿಗೆಯಿದೆ.

ತಾನೊಂದು ಸುಗಂಧರಾಜ ಹೂ, ಆ ಹೂವಿನ ಸುತ್ತ ಸುಳಿದಾಡ್ತಾರೆ— ಎಂದು ತನ್ನನ್ನು ಗಂಡ ಪ್ರೀತಿಸುವ ಕುರಿತು ಹೇಳಿರುವ ಗರತಿ ಸತಿಪತಿಯೊಳಗೆ ನಾವೇ



ಶ್ರೇಷ್ಠರು ಎಂದಿದ್ದಾಳೆ. ತನ್ನ ಪತಿರಾಯರು ಉಣ್ತಾರೆ ಸವಿಯುಸಿರು, ಕೆಂಪು ಕ್ಯಾದಿಗೆ ಗುಂಪು ಮಲ್ಲಿಗೆ ತಂದು ಕಂಪಿನಿಂದ ಮುಡುಸ್ತಾರೆ, ನನ್ನವರಿಗೆ ನಾನೇ ಚಂದ ಅವರೇ ನನ್ನ ಹೃದಯೇಶ್ವರ, ನನಗೂ ನನ್ನ ರಾಯರಿಗೂ ಜನ್ಮ ಜನ್ಮದ ನಂಟುಂಟು ಸತಿಯಲ್ಲಿ ಅತಿ ಪ್ರೀತಿಯುಳ್ಳವರು ಎಂಬ ಮಾತುಗಳಲ್ಲಿ ತನ್ನ ದಾಂಪತ್ಯ ಪ್ರೀತಿ ಪ್ರೇಮವನ್ನು ಹತ್ತು ಜನರೆದುರು ಬಿಚ್ಚಿ ಹೇಳಿದ್ದಾಳೆ. ಅಷ್ಟೇ ಅಲ್ಲ, ಜನ್ಮ ಜನ್ಮಾಂತರದಲ್ಲೂ ದೊರೆಯಬೇಕು ಇವರಂತ ಪತಿ ಎಂದು ಪ್ರಾರ್ಥಿಸಿದ್ದಾಳೆ.

ತಂದೆ ತಾಯಿಯರ ಹೆಸರು ಹೇಳುವುದು ನಿಂತಂತ ಸ್ಥಳದಲ್ಲಿ
ಅತ್ತೆ ಮಾವರ ಹೆಸರು ಹೇಳುವುದು ಕುಂತಂತ ಸ್ಥಳದಲ್ಲಿ
ನಗುನಗುತ ಹೇಳುವ ನಾದಿನಿಯರ ಹೆಸರು
ಭಾವಿಸಿ ಹೇಳುವೆ ಭಾವ ಮೈದುನರ ಹೆಸರು

ಈ ಒಡಪಿನಲ್ಲಿ ಹಿರಿಯರು ಕಿರಿಯರೊಡನೆ ನಡೆದುಕೊಳ್ಳುವ ಹೆಣ್ಣಿನ ನಡವಳಿಕೆ ಚಿತ್ರಿತವಾಗಿದೆ. ತಂದೆತಾಯಿಗಳ ಜೊತೆಗಿರುವ ಸಲುಗೆ ಅತ್ತೆ ಮಾವರಲ್ಲಿ ಇಲ್ಲವಾದರೂ ಗೌರವ ಭಾವನೆ ಇದೆ, ಪ್ರೀತಿ ವಿಶ್ವಾಸಗಳಿವೆ. ಅತ್ತಿಗೆ ನಾದಿನಿಯರು ನಗುನಗುತ ಇರಬೇಕಾದರೆ, ಭಾವ ಮೈದುನರ ಜೊತೆ ಭಾವಣಿಸಿ ನಡೆಯುವ ಅಂದರೆ ಸಂಸಾರದಲ್ಲಿ ಅವರವರ ಯೋಗ್ಯತಾನುಸಾರ ಪ್ರೀತಿ, ವಿಶ್ವಾಸ ತೋರುವ ಉಪಚಾರ ಮಾಡುವ ಮತ್ತು ಪ್ರತಿಯಾಗಿ ಅವರೆಲ್ಲರಿಂದಲೂ ಗೌರವ ಪ್ರೀತಿ ವಿಶ್ವಾಸ ಪಡೆಯುವ ತುಂಬಿದ ಮನೆಯ ಹೆಣ್ಣಿಗೆ ಇನ್ನೇನು ಬೇಕು. ಇದಕ್ಕೆ ವಿರುದ್ಧವಾಗಿ ನಡೆದುಕೊಂಡವರನ್ನು ಸುಮ್ಮನೆ ಬಿಟ್ಟಿಲ್ಲ ಆಕೆ. ಅತ್ತೆಯನ್ನು ಹರಕುಚಾಪೆ, ಮಾವನನ್ನು ಮಂಚದ ಕಾಲು, ಗಂಡನನ್ನು ದಾಡಾಬಂದ್ ಎಂದು ಹೀಯಾಳಿಸಿದ್ದಾಳೆ. ಗಂಡನ ಅಕ್ಕತಂಗಿಯರನ್ನಂತೂ ಕತ್ತೆ ಗೂಟಕ್ಕೆ ಕಟ್ಟಬೇಕೆಂದಿದ್ದಾಳೆ.

ನೀರಾಕಿದ ಕೆಂಡ ಅಂದರೆ ಇದ್ದಿಲು ಬಣ್ಣದ ಮೈಯ, ಮುದ್ದೆಯಂತ ಹೊಟ್ಟೆಯ, ವಟ್ಟೆ ಮೆಣಸಿನಕಾಯಿ ಕಡಿದು ಕಟ್ಟೆ ಮೇಲೆ ಉರಳಾಡಿವ ಗಂಡಿನ ರೂಪ ಗುಣಗಳನ್ನು ಹೇಗೆ ತಾನೆ ಮೆಚ್ಚಿಕೊಂಡಾಳು ? ನಮ್ಮ ರಾಜ ನಮಗಿಂತ ಕಪ್ಪು, ನಾನು ಒಪ್ಪಿದ್ದು ತಪ್ಪು ಎಂದಿರುವಂತೆಯೇ ನನಗಿಂತ ಕೆಂಪು ಎಂದೂ ಕೂಡ ಗಂಡನ ರೂಪವನ್ನು ಮೆಚ್ಚಿಕೊಂಡಿರುವುದುಂಟು.

ಮೈಸೂರು ಎಲೆ, ಬೀರೂರು ಅಡಿಕೆ, ಸೂಗಲೂರು ಸುಣ್ಣ, ಇವನ್ನೆಲ್ಲ ಅಪ್ಪಕೊಟ್ಟ ಬಂಗಾರದ ತಟ್ಟೇಲಿಟ್ಟುಕೊಂಡು ಸಿಂಗಾರ ಮಾಡ್ಕೊಂಡೋದ್ರೆ, ತಂಬಾಕಿಲ್ಲಾಂತ ತಕರಾರು ಮಾಡುವ, ಸಿಗರೇಟಿಲ್ಲ ಅಂತ ಸಿಟ್ಟಾಗುವ ಗಂಡಂದಿರಿದ್ದಾರೆ. ಸಂಜೆ ಹೊತ್ತಿಗೆ ಸಾವಿರ ಸುಳ್ಳೇಳುವ, ತೊಲ ಬಂಗಾರಕ್ಕೆ ಗುಂಜಾಡುವ

ಗಂಡಂದಿರಿಗೇನೂ ಕಡಿಮೆಯಿಲ್ಲ. ಇದನ್ನು ಕಂಡ ಮಹಿಳೆ"ನಾ ತೋರಿದೆ ಪ್ರೀತಿ ಅಪಾರ ನನ್ನನ್ನೀಗ ಮಾಡಿದರು ನಿಷ್ಟುರ" ಎಂದು ಮನದಲ್ಲೇ ಮರುಗಿದ್ದಾಳೆ.

ಕೆಲವರಿಗೆ ಸ್ವಂತ ಬುದ್ಧಿಯೂ ಇರೋದಿಲ್ಲ, ಹೇಳಿದ ಮಾತೂ ಕೇಳುವುದಿಲ್ಲ. ಆರುಕಾಸು ಕೊಟ್ಟು ಮೂರು ಕಾಸಿನದನ್ನು ತರುತ್ತಾರೆ. ಅಗ್ಗ ಅಂತ ಮುಗ್ಗಿದ ಜೋಳ ತರುತ್ತಾರೆ. ಸಿಟ್ಟಿನಲ್ಲಿ ಏನಾದ್ರೂ ಅಂದ್ರೆ ಮನೇಗೆ ಬರೋದು ಬಿಟ್ಟು ಸೂಳೆ ಮನೆ ಸೇರುತ್ತಾರೆ. ಸೂಳೆಯ ಸಹವಾಸದಿಂದಾಗಿ ಆಸ್ತಿಪಾಸ್ತಿನೆಲ್ಲ ಕಳೆದುಕೊಂಡದ್ದಲ್ಲದೆ ಸೂಳೆಯಲ್ಲೂ ಸಾಲ ಹೇಳುವವರಿದ್ದಾರೆ. ನೆರಮನೆ ಹೆಣ್ಣುಮಗಳು ಹೊಟ್ಟೆ ಬಟ್ಟೆಗಿಲ್ಲದೆ ಕಣ್ಣೀರಿಡಬಾರದೆಂದು ಅಲ್ಲಿ ಇಲ್ಲಿ ಸಾಲಮಾಡಿ ಸಂಸಾರ ಸಾಗಿಸುವ ಮಾವಂದಿರಿದ್ದಾರೆ. ಕಿಡಕಿ ಸಾಲ ಮಾಡಿ ಮನೆಯ ಸಂಸಾರ ನೀಗಿಸುವ ಅತ್ತೆಯರಿದ್ದಾರೆ. ಇಂಥ ಗಂಡನನ್ನು ಹೇಗೆ ತಾನೆ ಮೆಚ್ಚಿಕೊಂಡಾಳು ?

ಮಕ್ಕಳಿಗೆ ನೆರಮನೆಯ ಊಟ ಸಾರೆಂದರೆ ಇಷ್ಟ. ಹಟ ಹಿಡಿದ ಮಕ್ಕಳನ್ನು ಸಮಾಧಾನಪಡಿಸಲು ತಮ್ಮ ಮನೆಯ ಸಾರನ್ನೇ ಮುಚ್ಚಿಕೊಂಡು ಹೊರಗೆ ಹೋಗಿ ಪಕ್ಕದ ಮನೆಯಿಂದ ತಂದಿದ್ದು ಎಂದು ಕೊಡುತ್ತಾರೆ. ಕೆಲವು ಮಕ್ಕಳು ಅದು ತಮ್ಮನೆಯದೇ ಎಂದು ಪತ್ತೆ ಹಚ್ಚಿ ಬಿಡುತ್ತವೆ. ಮತ್ತೆ ಅದೇ ಸಾರಿಗೆ ಸ್ವಲ್ಪ ನೀರು ಬೆರೆಸಿಕೊಂಡು ಹೋಗಿ ಬಂದು ಕೊಡುತ್ತಾರೆ. ಆವಾಗ ಲೊಟ್ಟೆ ಹೊಡೆಯುತ್ತಾ ಊಟ ಮಾಡುತ್ತವೆ. ಹಾಗೆಯೇ ತನ್ನ ಮಡದಿ ಎಷ್ಟೇ ಸುಂದರಿಯಾದರೂ ಗಂಡಸಿಗೆ ಪಕ್ಕದ ಮನೆಯ ಹೆಂಗಸೇ ಸುಂದರವಾಗಿ ಕಾಣುತ್ತಾಳೆಂಬ ಮಾತೊಂದಿದೆ. ಕೆಲವರಿಗಂತೂ ಕುರೂಪಿಯಾದರೂ ಇಟ್ಟುಕೊಂಡವಳೇ ಸುಂದರಿ. ಇದನ್ನು ಕಂಡ ಗರತಿ

ಗಂಗೆ ಗೌರಿಯಂತ ಮಡದಿನ ಬಿಟ್ಟು
ಹಿತಗೆಟ್ಟಳ ಮನೆಗೆ ಮಾನಗೆಟ್ಟನು ಹೋಗ್ತಾನೆ

ಎಂದು ತನ್ನ ದುಗುಡ ತೋಡಿಕೊಂಡಿದ್ದಾಳೆ.

ಒಳ್ಳೊಳ್ಳೆ ಹೆಣ್ಮಕ್ಳ ಕಂಡ್ರೆ ಕಣ್ಣೊಡೆಯುವ, ಕೆಂಪು ಬಣ್ಣದ ಹುಡ್ಗಿ ಕೂಟ ಹಾದಿಯಾಗೇ ಮಸಲತ್ತು ಮಾಡುವ ಗಂಡನ ಚಟುವಟಿಕೆಗಳನ್ನೂ ಗಮನಿಸಿದ್ದಾಳೆ.

ಮನೆ ಮಂದಿಯೆಲ್ಲ ಉಂಡು ಮಿಕ್ಕಿದ್ದನ್ನು ಉಣ್ಣುವುದೇ ಗೃಹಿಣಿಯ ಕರ್ತವ್ಯವೆಂದು ತಿಳಿದವಳು ಗ್ರಾಮೀಣ ಗರತಿ. ದುಡಿಯುವ ಗಂಡಸಿಗೆ ಪ್ರೀತಿಯ ಮಕ್ಕಳಿಗೆ ಮೊದಲ ಆದ್ಯತೆ. ಹಾಗೆಂದೇ ಒಲೆಯ ಮೇಲೆ ಇನ್ನೂ ಕುದಿಯುತ್ತಿರುವ ಅಂಬ್ರ, ಕೋಲು ಬಾಯಿ ಮುದ್ದೆ ಇಕ್ಕಾಕೋದ್ರೆ ಕುಕ್ಕಾಕಿ ಬರುವ ಗಂಡಂದಿರಿದ್ದಾರೆ. ದಪ್ಪಕ್ಕಿ



ಅನ್ನ ಉಣ್ಣಕಾಗಲ್ಲ ಅನ್ನುವ, ಸಣ್ಣಕ್ಕಿ ತರಲಾರದ, ಮಾತೂ ಕೇಳದ ಮನೆಯಾಗೂ ಇರದ, ಹರಗಾಕೆ ಹೋಗು ಅಂದರೆ ತಿರುಗಾಕೆ ಹೋಗುವವರೂ ಇದ್ದಾರೆ.

ಕಾಡಿನಲ್ಲಿ ಬೆಳೆದ ಜೋಳವನ್ನು ಕಾಗೆ ಕಚ್ಚಿಕೊಂಡು ಹೋದರೆ ಅದನ್ನು ಅಟ್ಟಿಸಿಕೊಂಡು ಏಳು ಹರದಾರಿ ದೂರ ಓಡಿ ಹೋಗುವಂತಹ ಗಂಡನನ್ನು ಹಾಸ್ಯಮಾಡಿದ್ದಾಳೆ. ಇಕ್ಕೊಳ್ಳೋದು ಹರಿದ ಅಂಗಿ, ವಾಸ ಮಾಡೋದು ನೆರಕೆ ಮನೆ, ಬೆಳೆಯೋದು ಗರಿಕೆ ಹೊಲದಲ್ಲಿ, ಅಂತಾದ್ರಲ್ಲಿ ಸರ್ಕಾರಕ್ಕೇ ದರ್ಬಾಸು ಕೊಡ್ತೀನಿ ಎಂದು ಬೂಟಾಟಿಕೆ ಮಾತಾಡುವ ಗಂಡಸನ್ನು ಹಂಗಿಸಿದ್ದಾಳೆ.

ಪೌರಾಣಿಕ ವಸ್ತು, ವಿಷಯ, ಪಾತ್ರ, ಪ್ರಸಂಗಗಳು ಒಡಪುಗಳಲ್ಲಂತೂ ಯಥೇಚ್ಛವಾಗಿ ಕಂಡು ಬರುತ್ತವೆ. ಅಶ್ವತ್ಥಾಮನು ಪಾಂಡವರ ವಂಶ ನಿರ್ಮೂಲನ ಮಾಡಬೇಕೆಂದು ಉತ್ತರೆಯ ಗರ್ಭಕ್ಕೆ ಬಿಟ್ಟಿದ್ದು ಬ್ರಹ್ಮಾಸ್ತ್ರ. ಚಾಂಗಣಾದೇವಿಯು ತನ್ನ ಮಗನ ತಲೆಯನ್ನು ಕುಟ್ಟಿ ಹಾಕಿದಳು ಒರಳಲ್ಲಿ. ಜಟಾಯು ಪಕ್ಷಿ ರಾವಣನಿತ್ತ ಪೆಟ್ಟಿನ ಬಾಧೆಯನ್ನು ತಾಳಲಾರದೆ ಕಾಯುತ್ತಿತ್ತು ಶ್ರೀರಾಮನ ಬರುವನ್ನು ಶ್ರೀರಾಮನು ತನ್ನ ಅನುಜನೊಡನೆ ಬಂದನು ಬಹುನೊಂದು.ಪರೀಕ್ಷಿತನಿಗೆ ಕಡಿದದ್ದು ತಕ್ಷಕನೆಂಬ ಹಾವು. ಬ್ರಹ್ಮ ವಿಷ್ಣು ಮಹೇಶ್ವರರು ಬಾಲರೂಪ ಪಡೆದದ್ದು ಅನಸೂಯಾದೇವಿಯ ಸತ್ಯಕ್ಕಾಗಿ. ವಶಿಷ್ಟ ವಿಶ್ವಾಮಿತ್ರರು ವಾದಿಸಿದು. ಹರಿಶ್ಚಂದ್ರನ ಸತ್ಯ ಪರೀಕ್ಷೆಗಾಗಿ. ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದು.

ಅಕ್ಕಮಹಾದೇವಿ ಹುಟ್ಟಿದ್ದು ಉಡತಡಿ ಎಂಬ ಗ್ರಾಮದಲ್ಲಿ. ಬಸವಣ್ಣನವರು ಹುಟ್ಟಿದ್ದು ಬಾಗೇವಾಡಿಯಲ್ಲಿ. ಮಹಾತ್ಮಗಾಂಧಿ ಹುಟ್ಟಿದ್ದು ಪೋರ್‌ಬಂದರಿನಲ್ಲಿ. ಜವಾಹರಲಾಲ್ ನೆಹರು ಹುಟ್ಟಿದ್ದು ಅಲಹಾಬಾದಿನಲ್ಲಿ. ಪೈಗಂಬರ್ ವಾಸವಾಗಿರುವುದು ಮೆಕ್ಕ ಮೊದಲಾಗಿ ಒಡಪುಗಳ ಮೂಲಕ ಧಾರ್ಮಿಕ, ಐತಿಹಾಸಿಕ ವ್ಯಕ್ತಿಗಳನ್ನು ನೆನಪಿಸಿಕೊಟ್ಟಿರುವ ಗ್ರಾಮೀಣ ಮಹಿಳೆಯರು ಕಿತ್ತೂರು ರಾಣಿ ಚನ್ನಮ್ಮನ ಶೌರ್ಯ, ಬೆಳವಡಿ ಮಲ್ಲಮ್ಮನ ಧೈರ್ಯ, ಕಿತ್ತೂರು ಚನ್ನಮ್ಮ ಹೋರಾಡಿದ್ದು ಕನ್ನಡ ನಾಡಿಗಾಗಿ, ಮಲ್ಲಮ್ಮ ಶಿವಾಜಿ ಕೂಡ ಯುದ್ಧ ಮಾಡಿದ್ದು ದೇಶಕ್ಕಾಗಿ ಎಂದು ಹೇಳುವ ಮೂಲಕ ಕನ್ನಡ ನಾಡಿನ ವೀರ ರಮಣಿಯರ ಶೌರ್ಯವನ್ನು ಸಾರಿದ್ದಾರೆ.

ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು ವಿದ್ಯಾರಣ್ಯ ಎಂದು ಗ್ರಾಮೀಣರಿಗೆ ತಿಳಿಸಿಕೊಟ್ಟಿರುವುದಲ್ಲದೆ, ಲೋಕಮಾನ್ಯ ತಿಲಕರು ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಗುಡುಗಿದ್ದನ್ನೂ ಒಡಪುಗಳಲ್ಲಿ ಹೇಳಲಾಗಿದೆ.

ಐಹೊಳೆಯಲ್ಲಿರುವುದು ಶಿಲ್ಪಕಲೆ, ಅಜಂತಾದಲ್ಲಿರುವುದು ವರ್ಣಕಲೆ ಎಂದಿರುವ ಗರತಿಯರು ಪಂಪ ಬರೆದದ್ದು ಹಳಗನ್ನಡ ಕಾವ್ಯ, ವ್ಯಾಸರು ಬರೆದದ್ದು ಮಹಾಭಾರತ, ದಾಸರು ಹೇಳುವರು ಹರಿಕಥಾಮೃತ, ಸುಧಾ ಪರಿಮಳ ಗ್ರಂಥವನ್ನು ರಚಿಸಿದವರು ರಾಘವೇಂದ್ರ ಯತಿಗಳು, ಕಾದಂಬರಿಕಾರರಲ್ಲಿ ಹೆಸರಾದವರು ಬಂಕಿಮ ಮುಂತಾಗಿ ಕನ್ನಡ ಸಾಹಿತ್ಯದ ಅವಲೋಕನ ಮಾಡಿದ್ದಾರೆ. ಹಿಂದಿನವರು ಪುರಾಣ ಪ್ರಿಯರು, ಇಂದಿನವರು ಸಿನಿಮಾ ಪ್ರಿಯರು ಎಂದು ವಿಮರ್ಶಿಸಿರುವ ಗರತಿಯೊಬ್ಬಳು ತನ್ನವರನ್ನು ಮಾತ್ರ ಸಾಹಿತ್ಯ ಪ್ರಿಯರು ಎಂದಿದ್ದಾಳೆ.

ಭಾರತ ಜಾಗೃತವಾಯಿತು ವಿವೇಕಾನಂದರಿಂದ
ಸ್ವಾತಂತ್ರ್ಯ ಪಡೆಯಿತು ಗಾಂಧೀಜಿಯವರಿಂದ
ಆಧ್ಯಾತ್ಮ ಜಾಗೃತವಾಯಿತು ಶ್ರೀ ಅರವಿಂದರಿಂದ
ಅಭಿವೃದ್ಧಿ ಪಡೆಯಿತು ನೆಹರೂಜಿಯವರಿಂದ
ಹಸಿರು ಕ್ರಾಂತ್ರಿಯಾಯಿತು ಶಾಸ್ತ್ರೀಜಿಯವರಿಂದ

ಹೀಗೆ ಸ್ವತಂತ್ರ ಭಾರತದ ಬೆಳವಣಿಗೆಗೆ ಕಾರಣರಾದವರ ಬಗ್ಗೆ ಬೆಳಕು ಚೆಲ್ಲುವ ಗ್ರಾಮೀಣ ಮಹಿಳೆ, ಇಂದಿನ ರಾಜಕಾರಣಿಗಳು ಬರೀ ಭಾಷಣಗಾರರು ಎಂದು ಗೇಲಿ ಮಾಡಿದ್ದಾಳೆ.

ಪರದೇಶದಲ್ಲಿ ಭಾರತದ ತತ್ವಜ್ಞಾನ ಬೀರಿದವರು ವಿವೇಕಾನಂದ ಎಂದಿರುವುದಲ್ಲದೆ,

ದುಡುಮೆಯಲ್ಲಿ ಜರ್ಮನಿ ಮುಂದೆ
ಆರ್ಥಿಕದಲ್ಲಿ ಅಮೇರಿಕ ಮುಂದೆ
ಚಾಣಾಕ್ಷತನಕ್ಕೆ ಬ್ರಿಟಿಷ್ ಮುಂದೆ
ಹಿಂದೂಸ್ಥಾನ ಇಲ್ಲೀ ಹಿಂದೆ
ಹಡೆಯೋದ್ರಲ್ಲಿ ಆಗೈತೆ ಬಾಳ ಮುಂದೆ

ಎಂದು ಪ್ರಪಂಚದ ಸಾಧನೆಯನ್ನು ತಿಳಿಸಿಕೊಟ್ಟಿರುವುದರ ಜೊತೆಗೆ ಭಾರತದ ಜನಸಂಖ್ಯಾ ಸ್ಫೋಟದ ಬಗ್ಗೆ ಗಂಭೀರವಾಗಿ ಚಿಂತಿಸಿದ್ದಾಳೆ.

ಇಂಗ್ಲಿಷ್ ಭಾಷೆಯ ಪರಿಚಯವಿರುವ ಇತ್ತೀಚಿನ ಮಹಿಳೆಯರಂತೂ ಇಂಗ್ಲಿಷಿನಲ್ಲೇ ಒಡಪು ಕಟ್ಟಿದ್ದಾರೆ.

ಇಂಗ್ಲೀಷಿನಲ್ಲಿ ಕೋಳಿಗೆ ಅನ್ನುವರು ಹೆನ್
ನಮ್ಮ ರಾಯರು....ರಿಗೆ ಕೊಡುವೆನು ಪೆನ್



ಇಂಗ್ಲೀಷಿನಲ್ಲಿ ನೀರಿಗೆ ಅನ್ನುವರು ವಾಟರ್
....ರ ಹೆಸರು ಹೇಳುವೆನು....ರ ಡಾಟರ್

ತ್ರೀ × ತ್ರೀ = ನೈನ್
ಮೈ ಅಸ್ಬೆಂಡ್ ಈಸ್ ವೆರಿಫೈನ್....

'ಜಾನಪದ ಸಾವನ್ನು ನಿರಾಕರಿಸುವ ಜೀವಂತ ಪಳೆಯುಳಿಕೆ, ಅದು ನಿರಂತರವಾಗಿ ಹುಟ್ಟು ಮರು ಹುಟ್ಟುಗಳನ್ನು ಕಾಣುತ್ತಾ ಹೋಗುತ್ತದೆ' ಎಂಬ ಮಾತನ್ನು ಒಡಪುಗಳು ಸಾಬೀತುಪಡಿಸಿವೆ.

ಸತ್ಯ ಧರ್ಮದ ಮೂಲ, ನೀತಿ ನಡತೆಯ ಮೂಲ, ಶೀಲ ಶಾಂತಿಯ ಮೂಲ, ಸ್ವಾರ್ಥ ಪಾಪದ ಮೂಲ ಎಂದೇಳುವಂತಹ ನೀತಿಬೋಧನೆಯ ಒಡಪುಗಳೂ ಉಂಟು.

ಬೂರೆ ನನ್ನ ಗಂಡ ಬುಗುಡಿ ಮಾಡಿಸು ಅನ್ನೊವತ್ಗೆ
ಕಠಾರಿ ತಾರೆ ಖಡ್ಗ ಮಾಡುಸ್ತೀನಿ ಅದ್ನಂತೆ

ಎನ್ನುವ ಗಾದೆ ಒಡಪಿನ ರೂಪ (೩೩೧) ತಾಳಿರುವಂತೆ, ಕುದುರೆ ಮೇಲೆ ಕುಳಿತ ಮದುವೆ ಗಂಡು ಹಾಗೂ ಮಂತ್ರ ಹೇಳುವ ಜೋಯಿಸನನ್ನು ಕುರಿತ ಒಗಟು ಕೂಡ ಒಡಪಾಗಿದೆ (೭೩೫).

ಹೋತನ ಮ್ಯಾಲೆ ಕೂತ್ಕೊಂಡು
ಹೊನ್ನಿ ಸುಂಗ್ರ ಇಕ್ಕೊಂಡು
ಮಾತು ಮಾತ್ಗೆಲ್ಲ ಕ್ಯಾತೆ ತಗಿತಾನೆ

ಕುಲಜಾತಿ ನೆಲಕ್ಕಿಲ್ಲ
ಜಲಕ್ಕೆ ಮೈಲಿಗೆಯಿಲ್ಲ
ಹೊಲೆತನವು ಗುಣಕ್ಕಿಲ್ಲ
ಕಲಿಕೆಗೆ ಅಂಜಿಕೆಯಿಲ್ಲ
....ರ ಸಲಿಗೆ ನನಗಿಲ್ಲ

ಎಂಬಂತಹ ವಚನದ ಮಾದರಿಯ ಒಡಪುಗಳೂ ಇವೆ.

ಹೀಗೆ ಒಡಪುಗಳು ವ್ಯಾಪಿಸದ ವಿಷಯಗಳೇ ಕಡಿಮೆ. ಉಡುಗೆ ತೊಡುಗೆಗಳು, ದೇವರು–ದಿಂಡಿರು, ಗುರುಗಳು–ಮಠಗಳು, ತಿನಿಸು–ಉಣಿಸುಗಳು, ಕೃಷಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಒಡಪುಗಳು ಬಹಳಷ್ಟಿವೆ. ಸಾಹಿತ್ಯ ಮತ್ತು ಭಾಷೆಯ ದೃಷ್ಟಿಯಿಂದಂತೂ ಒಡಪುಗಳು ಉತ್ತಮ ಆಕರಗಳೆನಿಸಿವೆ. ಮಾನವಶಾಸ್ತ್ರ ಮನಶಾಸ್ತ್ರಗಳ ಹಿನ್ನೆಲೆಯಲ್ಲೂ ಒಡಪುಗಳ ಅಧ್ಯಯನಕ್ಕೆ ವಿಪುಲ ಮಾಹಿತಿ ಸಿಗುತ್ತದೆ.

ಹೆಂಗಸರ ಒಡಪುಗಳು ಹೆಂಗಸರಷ್ಟೇ ನಯನಾಜೂಕಿನಿಂದ ಕೂಡಿದುವಾಗಿದ್ದರೆ ಗಂಡಸರ ಒಡಪುಗಳು ಅಷ್ಟೇ ಒರಟುಒರಟಾಗಿರುತ್ತವೆ, ಆದರೂ ಕೂಡ,

ಕಾಡೋಳಲ್ಲ ಬೇಡೋಳಲ್ಲ
ಚಾಡಿ ಮಾತ ಕೇಳೋಳಲ್ಲ
ಇದ್ದುದರಲ್ಲಿ ತೃಪ್ತಿಪಡ್ತಾಳೆ

ಎಂದು ಹೆಣ್ಣಿನ ಒಳ್ಳೆಯ ಸ್ವಭಾವವನ್ನು ಮೆಚ್ಚಿ ಹೇಳಿರುವ ಗಂಡಸರ ಒಡಪುಗಳೂ ಇಲ್ಲದಿಲ್ಲ.'

ಗಂಡಸರು ಹೆಸರೇಳುವಾಗ ಹೆಂಡತಿಯ ಹೆಸರನ್ನು ಮೊಟಕಾಗಿ ಹೇಳುವುದು ಸಾಮಾನ್ಯ. ಕೆಂಪಮ್ಮನನ್ನು ಕೆಂಪಿ ಎನ್ನುತ್ತಾರೆ. ಹಾಗೆಯೇ ಬೋರಿ, ಕಮಲಿ, ಸರೋಜಿ ಅನ್ನುತ್ತಾರೆ. ಆದರೆ ಪಕ್ಕದಲ್ಲೇ ಇರುವ ಇನ್ನಿತರ ಹೆಂಗಸರು ಅದರಲ್ಲೂ ಹಿರಿಯ ಮಹಿಳೆಯರು 'ಅದೆಂತದದು! ಅವರಪ್ಪ ಅವರವ್ವ ಹೆಸರಿಟ್ಟಿಲ್ವೆ? ಸರಿಯಾಗಿ ಬಾಯಿತುಂಬ ಹೆಸರಿಡಿದು ಕರಿಯಬಾರದೆ ?' ಎಂದು ರೇಗುತ್ತಾರೆ. ತಟ್ಟನೆ ಇವನು ಸರಿಮಾಡಿಕೊಳ್ಳುತ್ತಾನೆ. ಹೆಣ್ಣು ಮಾತ್ರ ಗೌಡ್ರು, ರಾಯರು ಎಂದು ಹೆಸರಿನ ಮುಂದೆ ಗೌರವ ಸೂಚಕ ಪದಗಳನ್ನು ಸೇರಿಸಿ ಹೇಳುತ್ತಾಳೆ.

'ನನಗೆ ದೊರೆತ ಗಂಡುಮಕ್ಕಳ ಒಡಪುಗಳಲ್ಲಿ ಹೆಚ್ಚಾಗಿ ಅಶ್ಲೀಲವಾದವುಗಳೇ ಕಾಣಿಸಿಕೊಂಡಿದ್ದರಿಂದ ಮನಸಾ ಅವುಗಳನ್ನು ಕೈಬಿಟ್ಟಿದ್ದೇನೆ....ಆದರೆ ಅಶ್ಲೀಲ ಒಡಪುಗಳು ಅಭ್ಯಾಸಕ್ಕೆ ಅಯೋಗ್ಯವೆಂದೇನೂ ನನ್ನ ಭಾವನೆಯಲ್ಲ. ಒಂದೊಂದು ಸಲ ಅವುಗಳೇ ಇತರ ಒಡಪುಗಳಿಗಿಂತ ಹೆಚ್ಚು ಪರಿಣಾಮಕಾರಿಯೆನಿಸುತ್ತವೆ' [31] ಎಂದಿದ್ದಾರೆ ಶಾಂತಕುಮಾರಿ ಪಾಟೀಲ ಅವರು. 'ಅವುಗಳಲ್ಲಿ ಅಲ್ಲಲ್ಲಿ ಬಳಸಿರುವ ಒಂದೆರಡು ಮಾತುಗಳು, ನಾಗರಿಕರೆನಿಸಿಕೊಳ್ಳುವವರಿಗೆ ಮುಖ ಮುದುರಿಸಲು ಹಚ್ಚಬಹುದೆಂದು ತೋರುವುದು. ಆದರೆ ಹಳ್ಳಿಗರ ಜೀವನದಲ್ಲಿ ಅವು ಸಾಮಾನ್ಯ ಪದಗಳು, ಅವುಗಳ ಬಳಕೆಗಾಗಿ ಅವರು ಎಂದೂ ಹಿಂಜರಿಯಲಾರರು'[32] ಎಂದು ಬೆಟಗೇರಿ ಕೃಷ್ಣಶರ್ಮ ಅವರು ಸ್ಪಷ್ಟಪಡಿಸಿದ್ದಾರೆ. ಒಡಪುಗಳು ಅಶ್ಲೀಲರಹಿತವಾದವುಗಳು ಎಂದು ಅಭಿಪ್ರಾಯಪಟ್ಟಿರುವ ಮೈಲಹಳ್ಳಿ ರೇವಣ್ಣ ಅವರು ಜನಪದ ಸಾಹಿತ್ಯದ ಇತರೆ ಪ್ರಕಾರಗಳಂತೆ, ಅಶ್ಲೀಲವಾದ ಅಂಶಗಳು ಕಂಡುಬರುವುದಿಲ್ಲ ಎಂದು ದಿಢೀರ್ ತೀರ್ಮಾನ ತೆಗೆದುಕೊಂಡಿದ್ದಾರೆ.[33]

---

31. ಜನಪದ ಒಡಪುಗಳು ಪುಟ-೧೦
32. ಹೆಸರ ಹೇಳ್ತೀನಿ ಒಡಪ ಕಟ್ಟಿ, ಪುಟ-viii
33. ಕರ್ನಾಟಕ ಜಾನಪದ ಸಮೀಕ್ಷೆ, (ಪುಟ-೧೩೫)-ಸಂ: ಡಾ॥ ಜೀ. ಶಂ. ಪರಮಶಿವಯ್ಯ



ಜಾನಪದ ಅಧ್ಯಯನದಲ್ಲಿ ಶೀಲ ಅಶ್ಲೀಲಗಳ ಕಲ್ಪನೆ ತಲೆ ಹಾಕಬಾರದು. ಜಾನಪದ ಕ್ಷೇತ್ರ ಕಾರ್ಯತಜ್ಞನಿಗೆ ಇಂಥ ಮಡಿವಂತಿಕೆಗಳಿದ್ದಲ್ಲಿ ಅವನ ಕೆಲಸ ಅಪೂರ್ಣವೆಂದೇ ಹೇಳಬೇಕು. ಸಾಂದರ್ಭಿಕವಾಗಿ ಇಂಥ ಒಂದೆರಡು ಮಾತುಗಳನ್ನಾಡಿದರೇನೇ ಇನ್ನುಳಿದ ಸರಕು ಸಿಗಲು ಸಾಧ್ಯ. ತಮ್ಮ ನಡೆನುಡಿಗಳಲ್ಲಿ ಯಾವ ಸಂಕೋಚ ಅಂಜಿಕೆಗಳಿಲ್ಲದೆ ಸಹಜವಾಗಿ ಬಳಸುವ ಗ್ರಾಮೀಣರ ಲೈಂಗಿಕ ವಿಚಾರಗಳು ಅವರ ಹಾಡುಪಾಡುಗಳನ್ನೆಲ್ಲ ಆವರಿಸಿಕೊಂಡಿವೆ.

ವನವೆಲ್ಲ ಹಸಿರು
ಹೊಸದಾಗಿ ಬಸಿರು
ಬಸಿರು ಮಾಡ್ದೋರು............

ಎಂದು ಹೇಳಿರುವ ಹೆಣ್ಣಿಗೆ ಯಾವ ಸಂಕೋಚವೂ ಕಾಡಿಲ್ಲ.

ಗಾದೆ, ಒಗಟು, ಬೈಗುಳಗಳಲ್ಲಂತೂ ಲೈಂಗಿಕ ವಿಚಾರಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ. ಅವ್ವ ಹಾಕಿಕೊಟ್ಟ ರೊಟ್ಟಿಯನ್ನು ತಿನ್ನುವ ಅಪ್ಪನನ್ನು ಕುರಿತು ಮಾರ್ಮಿಕವಾಗಿ 'ನಿಮ್ಮಪ್ಪ ಅಗಲಿಸ,ನಿಮ್ಮಪ್ಪ ತಗಲಿಸ' ಎಂದೂ ಹಳ್ಳಿಯ ಗಂಡಸರು ಯಾವುದೋ ಒಂದು ಮೂಲೆಯಲ್ಲಿ ನಿಂತು ಚಡ್ಡಿ ಬದಲಾಯಿಸುವುದನ್ನು ಅತ್ತಿತ್ತ ನೋಡ್ದ ಕಾಲೆತ್ದ ಕಬುಕ್ಕೆ ಹಾಕ್ದ 'ಎಂದೂ ಬೀಸುವ ಕಲ್ಲನ್ನು ಚಿತ್ರಿಸುವ ಪುಣ್ಯಾತ್ಗಿತ್ತಿ ಪುಕ್ಳಿ ಮ್ಯಾಲೊಂದು ಗೂಟ, ಮಾರಾಗಿತ್ತಿ ಮೊಲೆ ಮ್ಯಾಲೊಂದು ಗೂಟ, ಅವ್ಳು ತಿಂದು ಏತಿದ್ದೆ ಊರ್ಗೆಲ್ಲ ಊಟ' ಎಂದು ಹೇಳುವ ಒಗಟುಗಳಿವೆ. ಕುಟ್ಕೊ ಬತ್ತ ಬಿಟ್ಟು ಹುಟ್ಕೊ ಶಾಟ ನೋಡ್ಕಂಡು ಕೂತಿದ್ಲು' 'ಎನ್ನುವ ಗಾದೆ, ನಿನ್ನ ಕಣ್ಗೆ ನನ್ನುಣ್ಣೆ ಇಕ್ಕ ಎಂಬ ಬೈಗುಳ, ಹೊಂಗೆ ಕಾಯಿ ಅನ್ನು, ಹೊಂಗೆಕಾಯಿ ನಿನ್ನತಂಗಿಕೆಯ್ಯಿ ಎಂಬ ಮಾರ್ನುಡಿ, ನಾಲಿಗೆ ಹಿಡಿದುಕೊಂಡು ನಾನು ನಮ್ಮತ್ತುವೆ ಮೊರುಕ್ಕೆ ಮೂರಕ್ಕಿ ಕಾಳಾಯ್ಕೊಂಡು ಕೇರಾಡ್ತಿದ್ದೊ ಎಂದು ಹೇಳಿಸುವ ತೊಡರು ನುಡಿ ಜನಪದ ಸಾಹಿತ್ಯದಲ್ಲಿ ಲೈಂಗಿಕ ಚಿತ್ರಣಕ್ಕೆ ಕೇವಲ ಉದಾಹರಣೆಗಳಷ್ಟೆ.

ಪ್ರಸಿದ್ಧ ಸಂಶೋಧಕ ಡಾ॥ ಎಂ. ಚಿದಾನಂದ ಮೂರ್ತಿಯವರಂಥ ಗೌರವಾನ್ವಿತ ವ್ಯಕ್ತಿ ತನ್ನ ವ್ಯಕ್ತಿತ್ವಕ್ಕೆ ಎಲ್ಲಿ ಕುಂದುಂಟಾಗುವುದೋ ಎಂದು ಹಿಂದು ಮುಂದು ನೋಡಿದ್ದರೆ ಶೂಲದ ಹಬ್ಬದ ಸಂದರ್ಭದಲ್ಲಿ ಹಾಡುತ್ತಿದ್ದ ದಿಮ್ಸಾಲೆ ಪದಗಳು ಅವರ 'ಗ್ರಾಮೀಣ' (ಪು.೬೫) ಗ್ರಂಥವನ್ನು ಸೇರುತ್ತಿರಲೇ ಇಲ್ಲ. ಕೃಷ್ಣರಾಜ ಪೇಟೆ ತಾಲ್ಲೂಕು ಕಿಕ್ಕೇರಿ ಲಕ್ಕಮ್ಮನ ಹಬ್ಬದಲ್ಲಿ ಮರದಿಂದ ಮಾಡಿದ ಶಿಶ್ನವನ್ನು ಸೊಂಟಕ್ಕೆ ಕಟ್ಟಿಕೊಂಡು ಮೈಮೇಲೆ ಹೊದೆದುಕೊಂಡ ರಗ್ಗಿನಿಂದ ಮುಚ್ಚಿಕೊಂಡಿರುವವನೊಬ್ಬ ತಮಟೆಯ ಗತ್ತಿಗೆ ಕುಣಿಯುತ್ತಾ ಆಗಾಗ್ಗೆ ಆ ಮರದ ಶಿಶ್ನವನ್ನು ತೋರುತ್ತ

ಲೈಂಗಿಕ ವಿಚಾರವಾದ ಪದಗಳನ್ನು ಯತೇಚ್ಛವಾಗಿ ಬಳಸುತ್ತಾ ಬೈಯುತ್ತಾ ಹಾಡುತ್ತಾನೆ. ಹೀಗೆ ಬೈದು ಹಾಡಿದರೆ ಮಾತ್ರ ಲಕ್ಕವ್ವ ಮೆರವಣಿಗೆಯಲ್ಲಿ ಮುಂದೆ ಬರುವುದೆಂದು ಹೇಳುತ್ತಾರೆ, ಲೈಂಗಿಕ ಜ್ಞಾನವನ್ನು ನೀಡುವ ಹಲವಾರು ಜನಪದ ಕಥೆಗಳಿವೆ. ಜೋಕ್ಸ್‌ಗಳಂತೂ[34] ಲೈಂಗಿಕ ವಿಷಯಗಳ ಸುತ್ತ ಹೆಣೆದುಕೊಂಡಿರುವುದೇ ಹೆಚ್ಚು.

ಗ್ರಾಮೀಣರ ಮಾತಿನಲ್ಲಿ ಹೇರಳವಾಗಿ ಬಳಕೆಯಾಗುವ ಗಾದೆ, ನುಡಿಗಟ್ಟು, ಬೈಗುಳಗಳನ್ನು ಬಿಟ್ಟರೆ, ಒಗಟು ಕಥೆಗಳನ್ನುಳಿದು ಹೆಂಗಸರು ಹಾಡುವ ಗೀತ ಪ್ರಕಾರಗಳಲ್ಲಿ ಲೈಂಗಿಕ ವಿಚಾರಗಳು ಅಷ್ಟಾಗಿ ಬರುವುದಿಲ್ಲ. ಆದರೆ ಗಂಡಸರ ಗಾಡಿ ಪದ, ಕಣದ ಪದ, ಕಗ್ಗದ ಪದಗಳಲ್ಲಂತೂ ಈ ವಿಚಾರಗಳೇ ಹೆಚ್ಚು. ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನಮ್ಮವರೆಲ್ಲ ಇಂಥ ಹಲವಾರು ಜಾನಪದ ಪ್ರಕಾರಗಳನ್ನು ಉದ್ದೇಶಪೂರ್ವಕವಾಗಿ ಕೈಬಿಡುತ್ತಿದ್ದಾರೆ. ವಿಷಯಕ್ಕೆ ಪೂರಕವೆನಿಸಿದಾಗಲೂ ಮಡಿವಂತಿಕೆ ತೋರುವುದು ಖಂಡಿತ ಸರಿಯೆನಿಸದು. ಡಾ॥ ರಂಗಾರೆಡ್ಡಿ ಕೋಡಿರಾಂಪುರ, ಡಾ॥ ಪುರುಷೋತ್ತಮ ಬಿಳಿಮಲೆ ಪ್ರೊ॥ ಸುಧಾಕರ ಅವರು ಸಾಂದರ್ಭಿಕವಾಗಿ ಲೈಂಗಿಕ ವಿಷಯಗಳನ್ನು ಸಂಗ್ರಹ ಮಾಡಿಕೊಟ್ಟಿರುವುದುಂಟು. ನಾಗರೀಕರೆನಿಸಿಕೊಳ್ಳುವರು ಅಶ್ಲೀಲವೆಂದು ಕರೆಯುವ ಕೆಲವು ಶಬ್ದಗಳಿರುವ ಕಾರಣದಿಂದಾಗಿ ವಿಶ್ವವಿದ್ಯಾನಿಲಯ ಗೊತ್ತು ಮಾಡಿದ ಪಠ್ಯಗ್ರಂಥಗಳೇ ರದ್ದಾಗಿವೆ. ತರಗತಿಗಳಲ್ಲಿ ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಮುಜುಗರವನ್ನುಂಟು ಮಾಡುವ ಇಂಥ ಕೆಲವು ಪದಗಳನ್ನು ತೆಗೆದು ಹಾಕಿ ಪಠ್ಯವನ್ನಾಗಿ ಅಚ್ಚು ಹಾಕಿಸಬಹುದಾದರೂ ಸಂಗ್ರಹಕರೇ ಇಂಥವನ್ನು ಕೈಬಿಡುವುದು ಉಚಿತವೆನಿಸದು.

ವಿ. ಎನ್. ಶಿವರಾಮು

34 ನೋಡಿ : ಅನುಬಂಧಗಳು-೨.

## ಹೆಂಗಸರು ಹೇಳುವ ಒಡಪುಗಳು

೧. ಅಂಗಕ್ಕೆ ಲಿಂಗವೆ ಚಂದ
ನಮ್ಮ ಪತ್ರಿ........ರು ನಮಗೆ ಚಂದ

೨. ಅಂಗಳಕ್ಕೆ ಅರಲು ಶ್ರೇಷ್ಟ
ಕೊರಳಿಗೆ ಮುತ್ತು ಶ್ರೇಷ್ಟ
ಹುತ್ತಕ್ಕೆ ಹಾವು ಶ್ರೇಷ್ಟ
ಸತಿಪತಿಯೊಳಗೆ ನಾವೇ ಶ್ರೇಷ್ಟ.......

೩. ಅಂಗಳದ ತುಂಬ ಆನ್ಕಲ್ಲು*
ಗಂಗಳದ ತುಂಬ ಮಲ್ಲಿಗೆ ಹೂವು
........ರು ಕುದ್ರೆ ಹಿಡ್ಕೊಂಡು**
ತಂಗೇರ್ ಕರೆಯೋಕೆ ಹೋಗವ್ರೆ

೪. ಅಂಗಳದ ತುಂಬ ಹಾವಿನೋರಿ
ಗಂಗಳದ ತುಂಬ ಮಲ್ಲೇಹೂವ
ಚಂದ್ರಮನಂತ ಕುದ್ರೆ ಆಯ್ಕಂಡು
ಚಂದುಕೆ ಬತ್ತಾರೆ........

೫. ಅಂಗಳದಲ್ಲಿ ಅಪ್ರೆ ಹೂವು
ಗಂಗಳದಲ್ಲಿ ಮಲ್ಲೆ ಹೂವು
ದಾರದಲ್ಲವ್ರೆ ದರಬಾರದಲ್ಲವ್ರೆ
ಕಚೇರಿ ಮುಂದೆ ಇಚಾರ್ಣೆ ಮಾಡ್ತಾರೆ....

೩.* ಆನೆಕಲ್ಲು, ಆಯಿಂಕಲ್ಲು, ಆವಿನಕಲ್ಲು, ಆಲಿಕಲ್ಲು, ಆಯಿಕಲ್ಲು.
** ಅಂಗಳದಾಗೆ ನಿತ್ಕೊಂಡು
ಅವ್ರು ಅಕ್ಕ ತಂಗೇರ ಕರಿತಾರೆ........
ಪಂಜರದಲ್ಲಿ ಕೂತ್ಗಂಡ್ ಪಗಡೆ ಆಡ್ತಾರೆ........
ಗಂಗಾ ಸ್ನಾನುಕ್ಕೋಗವ್ರೆ........

೬. ಅಂಗಳದಾಗೆ ಗಂಗಳ
ಗಂಗಳದಾಗೆ ಮಲ್ಲಿಗೆ ಹೂವಿನ ಹಾರ
ಗಂಗಾಧರ ಕುದುರೆ ಹಾಕ್ಕಂಡ್*
ತಂಗೇರ್ನ ಕರೆಯಾಕೆ ಹೋಗ್ತಾರೆ....

೭. ಅಂಗೈಗೆ ಆರ್ಗಿಣಿ
ಮುಂಗೈಗೆ ಮೂರ್ಗಿಣಿ
ಅಂಗುಳ್ದಾಗ್ ನಿತಗಂದ್*
ಅಕ್ಕಾ ತಂಗೇರ್ನ್ ಕರಿತಾರೆ....

೮. ಅಂಗೈಯಾಗ್ ಆರ್‌ಗಿಣಿ
ಮುಂಗೈಯಾಗ್ ಮೂರ್‌ಗಿಣಿ
ಪಂಜರದಲ್ಲಿ ಕೂತ್ಗಂಡ್ ಪಗಡೆ ಆಡ್ತಾರೆ.......,

೯. ಅಂಗೈಯಾಗ್ ಆರ್‌ಪುಸ್ತಕ
ಮುಂಗೈಯಾಗ್ ಮೂರ್ ಪುಸ್ತಕ
ಬಂಗಾರ್ದ ಕುರ್ಚಿ ಮ್ಯಾಲೆ ಕೂತ್ಕೊಂಡು
ಇಂಗ್ಲಿಷ್ ಪೇಪರ್ ಓತ್ತಾರೆ....

೧೦. ಅಂಟು ಹುಗ್ಗಿ, ಕಂಟು ಬೆಲ್ಲ
ಗಂಟೆಗಂಟೆಗೂ ನ್ಯಾಯ ಮಾಡ್ತಾರೆ.......

೧೧. ಅಂಡ್ಗಂಬ್ಳಿ ತುಂಡುಡುಗ್ರು
ಕರಿಯಮ್ಮನ ಗುಡಿಯೊಳಗೆ ನೀರುಳ್ಳಿ
ಕೆಂಪು ಹುಡ್ಗಿ ಮೇಲೆ ಸಣ್ಗಂಡ
ಹಾದೇಗೇ ಮಸಲತ್ತು ಮಾಡ್ತಾನೆ....

---

೬* ಬಂಗಾರದ ಕುರ್ಚಿ ಮ್ಯಾಲೆ ಕೂತ್ಕೊಂಡು
ಇಂಗ್ಲಿಷ್ ಪೇಪರ್ ಓದ್ತಾರೆ........
ಪಲ್ಲಂಗದ ಮ್ಯಾಲೆ ಕೂತ್ಕೊಂಡು
ಪಗಡೆ ಆಡ್ತಾರೆ........
ಅಂಗಳದಾಗೆ ಕೂತ್ಕೊಂಡು
ಬೊಮ್ಮಕ್ಕಳಆಡುಸ್ತಾರೆ........

೭* ಪಂಜರದಲ್ಲಿ ಕೂತ್ಕಂಡ್ ಪಗಡೆ ಆಡ್ತಾರೆ........
ಅಂಗುಳ್ದಾಗ್ ಕೂತ್ಕೊಂಡ್ ಬೊಮ್ಮಕ್ಳಾಡುಸ್ತಾರೆ........



೧೨. ಅಂತು ಮಂತು
ಅಂತಕ್ಕೆ ನಾನೂರು
ಜಂತಿಗೆ ಇನ್ನೂರು
ಮಾತ್ನೋರೆ ಬೊಂಬಾಯಿ ದೊರೆ
ಸರ್ದಾರ ಕಟ್ಟೆಮ್ಯಾಗೆ ಕುತಗಂದ್
ಸರಿಗೆ ಯಾಪಾರ ಮಾಡ್ತಾರೆ........

೧೩. ಅಂತೂರ್ ಮಂತೂರ್
ಸ್ಲೇಟು ಸೇಪು
ಗದಗರಿ ಬೆಟಗರಿ
ಬೊಂಬಾಯ್ ದೊರಿ ಮಾತಿನ ಸಿರಿ
ಸರಿಕರ ಕಟ್ಟೆ ಮ್ಯಾಗೆ ಕುಂತಗಂದು
ಸರಿಗೆ ಯಾಪಾರ ಮಾಡ್ತಾರೆ........

೧೪. ಅಂತೂರು ಜಂತೂರು
ಜಂತ್ಗೆ ನಾನೂರು
ಸೋಪು ಸರಾಟು
ಮಾತು ಮದ್ರಾಸು
ಊಟ ಬೆಂಗ್ಳೂರು
ಸಿಂಹಾಸನದ ಮೇಲೆ ಕೂತ್ಕಂಡ್
ಶಿವಪೂಜೆ ಮಾಡ್ತಾರೆ*

೧೫. ಅಂತೋರು ಇಂತೋರು
ಜಂತಿಗೆ ನಾನೂರು
ಸ್ಲೇಟ್ ಸ್ಯಾಪೂರ್
ಗದಗು ಬೆಟಗೇರಿ
ಮುಂಬೈ ದೊರೆ ಮಾತಿಗೆ ಸರೆ
ಸರೀಕ್ರ ಕುಟಗಾಡಿ
ಸರಿಗೆ ಗೆದ್ಕಂಡ್ ಬತ್ತಾರೆ........

೧೬. ಅಂಥ ಹೂವು ಇಂಥ ಹೂವು
ಕಂಚಿಹೂವು ಕಮಲದ ಹೂವು

---

೧೪* ಸರ್ಕಾರದ ಕಚೇರಿಲಿ ಸವಾಲ್ ಮಾಡ್ತಾರೆ........

ಮಂಚದ ಮೇಲೆ ಕೂತ್ಗಂಡು
ಮೊಮ್ಮಕ್ಳ ಆಡಿಸ್ತಾರೆ........

೧೭. ಅಂಬಿಕಾ ದೇವಿಯ ಪೂಜೆಗೆ ಹೋಗಲಿಕ್ಕೆ
ರುಕ್ಮಿಣಿಯು ಆದಳು ಖುಷಿ
........ರ ಹೆಸರು ಹೇಳುವೆನು....ರ ಸೊಸಿ

೧೮. ಅಕ್ಕ ಮಹಾದೇವಿಗೆ ಚಿಕ್ಕಂದಿನಲೆ ದೊರಕಿದ್ದು ವೈರಾಗ್ಯ
ನನಗೆ ದೊರಕಿದ್ದು ........ರಿಂದ ಸೌಭಾಗ್ಯ

೧೯. ಅಕ್ಕ ಮಹಾದೇವಿ ಹುಟ್ಟಿದ್ದು
ಉಡತಡಿ ಎಂಬ ಗ್ರಾಮದಲ್ಲಿ
ಬಸವಣ್ಣನವರು ಹುಟ್ಟಿದ್ದು
ಬಾಗೇವಾಡಿಯಲ್ಲಿ
........ರ ಕೈ ಹಿಡಿದದ್ದು
........ರ ಮನೆಯಲ್ಲಿ

೨೦. ಅಕ್ಕ ಮಾಡ್ಯಾಳೆ ಅವರೆಕಾಳು
ತಂಗಿ ಮಾಡ್ಯಾಳೆ ತೊಗರಿಕಾಳು
ಬಲ್ಲವರು ಮಾಡ್ಯಾರೆ ಬಾಳೆಕಾಯಿ
ಎಲ್ಲರು ಮಾಡ್ಯಾರೆ ಯಾಲಕ್ಕಿಕಾಯಿ
ಶಿವಶಿವ ನಮ್ಮತ್ತೆ
ಶಿವರಾಯ ನಮ್ಮ ಮಾವ
ಮಜಪೂರ ನಮ್ಮ ಮೈದ್ನ
ಚಜ್‌ಪೂರ್ ನಮ್ಮ ನಾದ್ನಿ
ಸತ್‌ಬಾಯಿ ನನ್ನ ಸವ್ತಿ
ರುಕ್ಮಿಣಿದೇವಿ ನನ್ನ ಗೆಣ್ತಿ
ಪಾರ್ವತಿಕುಟ್ಟಿ ಪಗಡೆಯನಾಡ್ತಾರೆ........

೨೧. ಅಕ್ಕಮ್ಮನವರು ಹುಟ್ಟಿದ್ದು ಉಡುವ ಗ್ರಾಮದಲ್ಲಿ
ತಂದೆತಾಯಿಯರ ಹೆಸರು ಹೇಳುವುದು ನಿಂತಂತ ಸ್ಥಳದಲ್ಲಿ
ಅತ್ತೆ ಮಾವರ ಹೆಸರು ಹೇಳುವುದು ಕುಂತಂತ ಸ್ಥಳದಲ್ಲಿ
ನಗುನಗುತ ಹೇಳುವೆ ನಾದಿನಿಯರ ಹೆಸರ



ಭಾವಿಸಿ ಹೇಳುವೆ ಭಾವ ಮೈದುನರ ಹೆಸರ
ನಿಮ್ಮೆಲ್ಲರ ಪ್ರೀತಿಯಿಂದ ಹೇಳುವೆ........ರ ಹೆಸರ

೨೨. ಅಕ್ಕ ಯಾಲಕ್ಕಿ ತಂಗಿ ದ್ರಾಕ್ಷಿ
ಅಕ್ಕಾರು ಹೇಳ್ಯಾರೆ ತಕ್ಕಂತ ಮಾತ
ಅಣ್ಣಾರು ಹೇಳ್ಯಾರೆ ಬಣ್ಣದಂತ ಮಾತ
ತಕ್ಕಂತ ಹೆಂಡತಿ ಕೂಟಿ ಕೂತು
ನಕ್ಕಂತ ಮಾತಾಡ್ತಾರೆ.... ...

೨೩. ಅಕ್ಕಿನುಚ್ಚು ಹೂವಿನ ಕುಚ್ಚು *
ನನಗಂಡ...........ರ
ಹೆಸ್ರಕೇಳರು ಬಲು ಹುಚ್ಚು

೨೪. ಅಕ್ಕಿ ಬಲು ತೆಳುವು
ಅನ್ನ ಬಲು ಉದುರು
ಸೋಸಿದ ಮೊಸರು
ಕ್ಯಾದಿಗೆ ತದರು
ಪಂತೇಗೆ ಕೂತ್ಗಂಡು
ಸರೀಕ್ಷೆ ಬರಿತಾರೆ....

೨೫. ಅಕ್ಕಿಬೆಕ್ಕಿ ಸೊಪ್ಪು
ಅದಕೆ ಸೇರು ಉಪ್ಪು
........ರು ಒಪ್ಪು

೨೬. ಅಕ್ಕಿರೊಟ್ಟಿ ಚೆಂದ
ಅಕ್ಕ ತೌರಿಗೆ ಚೆಂದ
ನನ್ನ ಪತಿಗೆ ನಾನೇ ಚೆಂದ........

---

೨೩.* ಅಕ್ಕಿ ನುಚ್ಚು
ಮಲ್ಲಿಗೆ ಹೂವಿನ ಕುಚ್ಚು
ನನ್ನ ಗಂಡ್ಗೆ ಹಿಡಿದೈತೆ
ಸೂಳೇರ ಹುಚ್ಚು........

೨೭. ಅಕ್ಕಿ ರೊಟ್ಟಿ ಮುರಿದ್ರೆಗಟ್ಟಿ
ಅವ್ರಕ್ಕ ತಂಗೇರ್ನ ಮೂರೇಟು ಕುಟ್ಟಿ
ಕತ್ತೆ ಗೂಟಕ್ಕೆ ಕಟ್ಟಿ
ನಾಯ್ಕನಟ್ಟಿ ಜಾತ್ರೆಗೆ ಹೋಗ್ತರೆ........

೨೮. ಅಕ್ಕಿರೊಟ್ಟಿ ಹಾಕಿ
ಮುರ್ದು ಮುರ್ದು ಬುತ್ತಿ ಕಟ್ಟಿ
ಅವರ ಅಕ್ಕ ತಂಗೇರ ಕತ್ತೆ ಗೂಟಕ್ ಕಟ್ಟಿ
ಹೆಗ್ಣ ಹೊಡ್ಕೊಂಡು
ಹೆಗಲಿಗೆ ಹಾಯ್ಕೊಂಡು
ಬುಡುಸ್ಕಂಡು ಬರೋಕ್ಕೋಗವ್ರೆ........

೨೯. ಅಚ್ಚಕ್ಕಿ ನುಚ್ಚಕ್ಕಿ
ಜಾಜಿಹೂವು ಜೇನ್ತುಪ್ಪ
ಚಿನ್ನದ ಮಣೆ ಮೇಲೆ
ರನ್ನದ ತಟ್ಟೆ ಮಡಿಕೊಂಡು
ಬೆಳ್ಳಿ ರುಪಾಯ ಲೆಕ್ಕ ಬಿಡ್ತಾರೆ.......

೩೦. ಅಚ್ಚಿಸರ ಪಚ್ಚಿಸರ
ಪವನ್‌ಸರ ಪಗ್ಡೆಸರ
ಅಂತೋರು ಜಂತೋರು
ಜಂತಿಗೆ ನಾನೂರು
ಸೀರೇಟ್ ಸ್ಯಾಪ್ಗೇರಿ
ಗದ್ಗ ಬೆಟ್ಗೇರಿ
ಬೊಂಬಾಗಿರಿ
ಮಾತಿಗ್ ನನ್‌ಸರಿ
ಸದರಿನ್‌ಮ್ಯಾಲ್ ಕುತಗಂಡ್
ಸಕ್ರೆ ಹಂಚ್ತಾರೆ........

೩೧. ಅರ್ಜುನನಿಗೆ ಶ್ರೀಕೃಷ್ಣ ಸಾರಥಿ
ಭೀಮಸೇನನ ಸತಿ ಭಾರತಿ
ಲಗ್ನವಾಗಿ ನಾನಾದೆ...........ರ ಸತಿ.



೩೨. ಅಟ್ಟದ ಮೇಲಿನ ಮೊಸರು
ಕೆಳಗೆ ಬಿದ್ದರೆ ಕೆಸರು
ಅತ್ತೆ ಮಾವ ಇಟ್ಟ ಹೆಸರು........

೩೩. ಅಡಕೆ ಅಕ್ಕಂಡ್ ಕಿಟಗ್ಯಾಗೆ ನೋಡ್ತರೆ
ಲವಂಗ ಅಕ್ಕಂಡ್ ಲೋಲ್ ಮಾಡ್ತರೆ
ಹೂವಿನಂತ ಹುಡ್ಗಿ ಕಂಡ್ರೆ ಹುಬ್ಬು ಆರಿಸ್ತಾರೆ........

೩೪. ಅಡಚುಡಿ ಬೆಂಕಿಚುಡಿ
ಕಬ್ಬಿನ್ ಗದ್ದೇಲಿ ಸೌತೇಕುಡಿ
ತಡೀಬ್ಯಾಡಿ ಬುಡಿ........

೩೫. ಅಡವ್ಯಾಗಿನ ಹುಲ್ಲು
ಬಾಯಾಗಿನ ಹಲ್ಲು
ಸಂತ್ಯಾಗೆ ಗುಲ್ಲು
ನಮ್ಮ...........ರು ಬಲುಕಲ್ಲು

೩೬. ಅಡವಿಯಲ್ಲಿ ಯಮನನ್ನು ಕಂಡು
ಸಾವಿತ್ರಿ ಎದೆಯೊಡೆದು ನೀರಾಯಿತು
ನನ್ನನ್ನು........ರಿಗೆ ಕೊಟ್ಟ ಮೇಲೆ
ನಮ್ಮ ತಂದೆತಾಯಿಯರ ಚಿಂತೆ ದೂರಾಯಿತು

೩೭. ಅಡ್ಕೆ ತ್ವಾಟ ಕಿಟಕಿಬಾಗ್ಲು
ಆನೆ ಮ್ಯಾಗೆ ಅವ್ರು ಅಂದಲದಲ್ಲಿ ನಾನು
ಒಂಟೆ ಮ್ಯಾಗೆ ಅವ್ರು ಮಂಟಪದಲ್ಲಿ ನಾನು
ಚಿನ್ನದ ಮಣೆಮ್ಯಾಗೆ
ರನ್ನದ ರುಪಾಯಿ ಲೆಕ್ಕ ಬಿಡ್ತಾರೆ........

೩೮. ಅಡ್ಕೆ ತ್ವಾಟದೋರು
ಚಿ (ಕಿ) ಟಕಿ ಬಾಕ್ಲೋರು
ಚೋಮಾಲೆ ಸರದೋರು
ಕಚೇರೀಲಿ ಇಚಾರ್ಣೆ ಮಾಡ್ತಾರೆ.......

೩೯ ಅಡ್ಕೆಮರ ಕಿಟ್ಗಿ ಬಾಕ್ಲು
ಒಂಬ್ಮತ್ತು ಕಂಟೀಸರ

ಜೋಡ್ಮುತ್ತು ಜೋಮಾಲೆಸರ
ರನ್ನದ ಮಣೆ ಮೇಲೆ
ಚಿನ್ನಾನೆ ಏಣಿಸ್ತಾರೆ........

೪೦. ಅಡ್ಕೆ ಹಾಯ್ಕೊಂಡು ಕಡುಕ್ ಮಾಡಿ
ಲವಂಗ ಹಾಯ್ಕೊಂಡು ಲೋಲ್ ಮಾಡಿ
ಎಲೆ ಹಾಯ್ಕೊಂಡು ವಲುಪ್ ಮಾಡಿ
ಒಳ್ಳೊಳ್ಳೆ ಹೆಣ್ಮಕ್ಳು ಕಂಡು ಕಣ್ಣೊಡಿತರೆ*........

೪೧. ಅಣ್ಕೆ ಮಿಣ್ಕೆ ಕಬ್ಬಿನ್ಗಣ್ಕೆ
ಗದ್ದೇಲಿರೊ ಸಾಲುಗಂಬಿ
ಸಂಪಿಗೆ ಮರ........

೪೨. ಅಣ್ಕೆ ಮಿಣ್ಕೆ ಕೆಂಪೀನ್‌ಗಣ್ಕೆ
ಗದ್ದೇಲಿಗರ್ಜಿ ನಿದ್ದೇಲಿಭೋಗಿ
ಸಣ್ಗಂಬಿ ಸಕಲಾತಿ
ಸಭೇಲಿ ಕೂತ್ಕೊಂಡು ಜವಾಬ್ ಕೊಡ್ತಾರೆ........

೪೩. ಅತ್ತ ಆಲದಮರ
ಸುತ್ತ ಬೇವಿನಮರ
ಪತ್ರೆ ಕಟ್ಟೆ ವ್ಯಾಲೆ ಕುಳಿತು
ದಿಕ್ಕು ದಿಕ್ಕಿಗೆಲ್ಲ ಪತ್ರ ಬರಿತಾರೆ........

೪೪. ಅತ್ಲಾಗೆ ಅವ್ರು ಹೋದ್ರು
ಇತ್ಲಾಗೆ ನಾ ಬಂದೆ
ಕತ್ಲಾ ಆಯ್ತುಲೂ ಬಂದು
ಕತ್ತು ಹಿಡಿತಾರೆ........

೪೫. ಅತ್ತಿ ಹೂವಿನ ಸೀರಿ
ಮುತ್ತಿನ ಉಡಿಯಕ್ಕಿ

೪೦* ಗಿಡ್ ಹುಡ್ಗೀಗೆ ಹುಬ್ ಹಾರಿಸ್ತಾರೆ........
ಅಂಗಳದಲ್ಲಿ ಕೂತ್ಕೊಂಡು
ಅಕ್ಕತಂಗೇರ ಕರೀತಾರೆ........



ಅತ್ತೆ ಹೊಟ್ಟೆಯಲಿ ಮುತ್ತಿನಂತೋರು*
ಹುಟ್ಟಿದಾರೆ........

೪೬. ಅತ್ತೆ ಹೆಸ್ರು ಅತ್ತಿ ಹೂವು
ಮಾವನ ಹೆಸ್ರು ಮಲ್ಲಿಗೆ ಹೂವು
ನನ್ನೆಸ್ರು ಸುಗಂಧರಾಜ
ಸುಗಂಧರಾಜ ಹೂವಿನ ಸುತ್ತ ಸುಳಿದಾಡ್ತಾರೆ........

೪೭. ಅತ್ತೆ ಹೆಸರು ಅರಕು ಚಾಪೆ
ಮಾವನ ಹೆಸರು ಮಂಚದ ಕಾಲು
ಗಂಡನ ಹೆಸರು ದಾಡಾಬಂದ್
ನನ್ನ ಹೆಸರು ಮುತ್ತಿನ ಚಂಡು........

೪೮. ಅರ್ಧ ರೊಟ್ಟಿ ಅವರೆ ಪಲ್ಯ
ಸುಮ್ಕೆ ಉಂಡು ಸೂಳೆಮನ್ಗೋಗ್ತಾರೆ........

೪೯. ಅರ್ಧ ರೊಟ್ಟಿ ಗೊರ್ಜಿಸಪ್ಪು
ಬರದಗೆ ಹುಟ್ಟಿದಾರೆ........

೫೦. ಅನ್ನಸಾರು ಕಾರಿನಚೂರು
ಕಾರ್ನಾಗೆ ಕೂತ್ಕೊಂಡು
ಕರೆಯಾಕೆ ಬತ್ತಾರೆ........

೫೧. ಅಮವಾಸೆಕತ್ಲೆ
ಬಿಳೀಜೋಳ ಬಿಲ್ಲೆ
ನನ್ನ ಗಂಡನ ಹೆಸರು
ಕೇಳಿದವರ ಹೆಣ ಎಲ್ಲೆ ?........

೫೨. ಅರಕಟ್ಟು ಮರಕಟ್ಟು
ಮರಕ್ಕೆ ಮೂವತ್ತು ಕಟ್ಟು

೪೫* ಅತ್ತೆ ಯಾರೂಂತ ಹೇಳನ
ಹೊಟ್ಟೇಲಿ ಮುತ್ತಿನಂತಾವ್ರು ಹುಟ್ಟವ್ರೆ........
ಉತ್ತುತ್ತೆ ಮರ್ದಡೆಲ್ ಕುತಗಂದ್
ಮುತ್ತಿನ ವ್ಯಾಪಾರ ಮಾಡ್ತಾರೆ........

ಹೆಸರು ಕೇಳ್ದನ ಹೆಣ್ತಿಗೆ
ಎಡಮುರಿಗೆ ಕಟ್ಟು........

೫೩. ಅರಕು ಮಚ್ಚಿ ಮುರುಕು ಚಂಬು
ಮಸೂತಿ ಮ್ಯಾಲೆ ಕೂತ್ಕೊಂಡು
ಮಂಗ್ಯನಾಡುಸ್ತಾರೆ........

೫೪. ಅರಗಿನ ಕೊಡ ಸೆರಗಿನ ಸಿಂಬೆ
ಎಂತವರ ಮಗಳೆಂದು
ಸಂತೋಷಪಡ್ತಾರೆ........

೫೫. ಅರಗಿನ ಕೊಡ ಸೆರಗಿನ ಸಿಂಬೆ
ಶೀಲವಂತ್ರ ಮಗಳು
ಸೀತಾದೇವಿ ಬರ್ತ್ತಾಳೆ*
ದಾರಿಬಿಡಂದ್ರೆ ಮಾರಿನೋಡ್ತಾರೆ........

೫೬. ಅರ್ಕಹಗ್ಗ ಮುರ್ಕನೊಗ
ಎತ್ತು ಎಳೆಯಲ್ಲ ಅಂತ
ಎದೆವದೆ ಬಡ್ಕೊಕತಾರೆ........

೫೭. ಅರ್ಗಿನ ಅಟಣಿಗೆ
ಮುರ್ಗಿನ ಪಾಟಣಿಗೆ
ಅರ್ಗಿನ ಕೊಡ ಸೆರ್ಗಿನ ಸಿಂಬಿ
ಶೀಲವಂತ್ರ ಮಗಳು
ಸೀತಾದೇವಿ ನೋಡಿ ದಾರಿ ಬಿಡ್ತಾರೆ....

೫೮. ಅರುಣೋದಯ ಕಾಲದಲ್ಲಿ ನವತರುಣರೊಂದಿಗೆ
ಲಿಂಗಣಾಗುಣಿತದಿಂದ ಚಲ್ಲಾಟದ ನಾಟ್ಯ ಮಾಡುತ್ತಿದ್ದಳು
ಜಲದೇವತೆ
........ರ ಹೆಸರು ಹೇಳುವೆನು........ವನಿತೆ

೫೯. ಅರೆಮ್ಯಾಲೆ ಅರೆ ತೊರೆ ಮ್ಯಾಲೆ ತೊರೆ
ಹೆಸ್ರುಕೇಳ್ದೋರ ತಿಗುದ ಮ್ಯಾಲೆ ಮೂರು ಬರೆ
ಎಲ್ಲಿದ್ರು........ಗೌಡ್ರು ದೊರೆ

---

೫೫* ಸೀತಾದೇವಿ ಬರುವಳೆಂದು
ಮಾರಿ ನೋಡಿ ಧಾರೆ ಎರಿತಾರೆ....



೬೦. ಅಲುಕ್ ಮಲುಕ್ ಚಿಲುಕ್ ಚಿತ್ತಾರ
ನಿಲುಕಲಾರ್ದ ಹೂವ ಅರಿಯೋಕೆ
ನಿಗರಿ ನಿಗರಿ ನೋಡ್ತಾರೆ........

೬೧. ಅವ್ರು ಹುಟ್ಟಿದ್ದು ದಿಳ್ಳಿಯಲ್ಲಿ
ನಾನು ಹುಟ್ಟಿದ್ದು ಹಳ್ಳಿಯಲ್ಲಿ
ಮದುವೆಯಾದದ್ದು ಚಿಕ್ಕಪ್ರಾಯದಲ್ಲಿ
........ರ ಹೆಸರ ಹೇಳೋದು ಮದುವೆ ಮಂಟಪದಲ್ಲಿ

೬೨. ಅಶ್ವತ್ಥಾಮನು ಪಾಂಡವರ ವಂಶ ನಿರ್ಮೂಲ ಮಾಡಬೇಕೆಂದು
ಉತ್ತರೆಯ ಗರ್ಭಕ್ಕೆ ಬಿಟ್ಟಿದ್ದು ಬ್ರಹಾಸ್ತ್ರ
........ರು ನನಗೆ ಕಟ್ಟಿದ್ದು ಮಂಗಳಸೂತ್ರ

೬೩. ಅಶ್ವಪತಿ ಮಾರಾಜನ ಮಗಳು
ಮದುವಿ ಮಾಡಿಕೊಳ್ಳಲಿಕ್ಕೆ ಹೋದದ್ದು ತೀರ್ಥಯಾತ್ರೆ
ಅಲ್ಲಿ ಸತ್ಯವಾನನು ಸಾವಿತ್ರಿಗೆ ಕಟ್ಟಿದ್ದು ಮಂಗಳ ಸೂತ್ರ
........ರ ಚರಣ ಸನ್ನಿಧಿಯೇ ನನಗೆ ಪುಣ್ಯಕ್ಷೇತ್ರ

೬೪. ಅಹಲ್ಯೆಯು ಉದ್ಧಾರವಾದಳು ಶ್ರೀರಾಮನ ಪಾದತಾಕಿ
ಸುರರು ಜಯಜಯವೆಂದರು ಪುಷ್ಪಗಳ ಹಾಕಿ
........ರಾಯರಿಗೆ ಧಾರೆ ಎರೆದುಕೊಟ್ಟರು
ನಮ್ಮ ತಂದೆ ಇಲ್ಲಿಯವರೆಗೆ ಸಾಕಿ

೬೫. ಅಳ್ಳಿಎಲೆ ಒಳ್ಳೆ ಹೂರಣ
ಅಳ್ಳಿ ಬಿಗಿಯಂಗೆ ಉಂಡು
ಹಳ್ಳದ ಕಡೆ ಹೋಗ್ತಾರೆ........

೬೬. ಆ ಅಕ್ಕಿ ಈ ಅಕ್ಕಿ
ಕೇಸಕ್ಕಿ ತಿನ್ನು........

೬೭. ಆ ಊರಲ್ಲಿ ಬೆಳೆಯೋದು ಎಲಕ್ಕಿ
ನಮ್ಮೂರ್ನಾಗೆ ಬೆಳೆಯೋದು ಸಣ್ಣಕ್ಕಿ
ಊಟಕ್ಕೆ ನೀಡ್ತಾರೆ........ರು ಮೊಸರವಲಕ್ಕಿ

೬೮. ಆಕಳು ಹುಟ್ಟಿದ್ದು ಆ ಲೋಕದಲ್ಲಿ
ಬಸವಣ್ಣ ಹುಟ್ಟಿದ್ದು ಭೂಲೋಕದಲ್ಲಿ

ನಮ್ಮ ಲಗ್ನವಾಗಿದ್ದು ಚಿಕ್ಕಂದಿನಲ್ಲಿ
ನಾವು ಹೆಸರು ಹೇಳುವುದು ಮದುವೆ ಮಂಟಪದಲ್ಲಿ

೬೯. ಆಕಾಶಕ್ಕೆ ಚಂದ್ರ ಚಂದ
ಗುಡಿಗೆ ಗೋಪುರ ಚಂದ
ನಮ್ಮ ಊರು ನಮಗೆ ಚಂದ
ನಮ್ಮ ಪತಿದೇವರಂತು ಬಲು ಚಂದ........

೭೦. ಆಕಾಶಕ್ಕೆ ನಕ್ಷತ್ರ ಮೇಲು
ನನಗೆ ನನ್ನ ಪತಿ........ರೇ ಮೇಲು

೭೧. ಆಕಾಶದಲ್ಲಿ ಆಕಳು ಹುಟ್ಟುವುದು
ಭೂಲೋಕದಲ್ಲಿ ಸೀತೆ ಹುಟ್ಟುವುದು
ಚಿಕ್ಕ ವಯಸ್ಸಿನಲ್ಲಿ ನನ್ನ ಮದುವೆಯಾಗುವುದು
ಮದುವೆ ಮಂಟಪದಾಗೆ........ರ ಹೆಸರು ಹೇಳುವುದು

೭೨. ಆಕಾಶದಲ್ಲಿ ಎಷ್ಟೊಂದು ತಾರೆಗಳಿದ್ದರೂ
ಬೆಳಕು ಕೊಡುವವನೊಬ್ಬನೆ ಚಂದಿರ
........ರಾಯರ ಮನೆಯೆ ನನಗೆ ನಿವಾಸ ಮಂದಿರ

೭೩ ಆಕಾಶದಲ್ಲಿ ಮಿನುಗುವುದು ತಾರೆ
ನನಗಾಯಿತು........ರೊಡನೆ ಧಾರೆ

೭೪. ಆಕಾಶದಲ್ಲಿ ಮಿನುಗುವುದು ತಾರೆ
ಭೂಮಿಯಲ್ಲಿ ಉರುಡುವುದು ಹಣ್ಣು
ಮಡಕೇಲಿದ್ದರೆ ಮೊಸರು
ಕೆಳಗೆ ಬಿದ್ದರೆ ಕೆಸರು
ಕೆಸರಲ್ಲಿ ಇದ್ದವರೆ........

೭೫. ಆಕಾಶದಲ್ಲಿ ಹಾರೋದು ಗಿಡಗ
ಮೂಡಣದಲ್ಲಿ ಹುಟ್ಟೋದು ಗುಡುಗ
ನನಗೆ ಗೊತ್ತು........ರು ಮಾಡುವ ತುಡಗ



೭೬. ಆಕಾಶದಲ್ಲಿ ಹಾರೋದು ಹದ್ದು
ಅಂಗ್ಡೀಲಿ ಮಾರೋದು ಉದ್ದು
ನಮ್ಗ್ ನಮ್ ಗಂಡುಂಗು ಮುದ್ದು........

೭೭. ಆಕಾಶದಲ್ಲಿ ಆಗೋದು ಐದಿಂಚಿನ ಮಳೆ
ಬರುಪೂರಿಂದ ಬರೋದು ಮಲ್ಲಮ್ಮನ ಹೊಳೆ
ಅದರಿಂದ ಕಂಡೆವು ಐದು ಹಸಿರ ಬಳೆ........

೭೮. ಆಕಾಶದಿಂದ ಇಳಿದು ಬಂದ ಕೊರವಂಜಿ
ವೇಷ ಧರಿಸಿದನು ವೈಕುಂಠಪತಿ
ಆತನಿಗೆ ಹಸ್ತ ಹಿಡಿದವಳು ಪದ್ಮಾವತಿ
ಜನ್ಮಜನ್ಮಾಂತರದಲ್ಲೂ ದೊರೆಯಬೇಕು ಇವರಂತ ಪತಿ........

೭೯. ಆಕಾಶದೊಳಗೆ ಹಾರುವುದು ಗಾಳಿಪಟ
ಗೋಡೆಯ ಮೇಲಿರುವುದು ದೇವರಪಟ
........ರ ಹೆಸರು ಕೇಳಲಿಕ್ಕೆ ನಿಮಗ್ಯಾಕಿಷ್ಟು ಹಟ

೮೦. ಆಗನೂರು ಅಡಿಕೆ
ಸೂಗಲೂರು ಸುಣ್ಣ
ನೆಗ್ಗೇರಿ ಎಲಿ
ಅಪ್ಪ ಕೊಟ್ಟ ಬಂಗಾರ್ದ ತಾಟ್ನಾಗೆ ಇಟ್ಟುಕೊಟ್ರೆ
ತಂಬಾಕಿಲ್ಲಾಂದು ತಕರಾರು ಮಾಡ್ತಾರೆ........

೮೧. ಆತ್ಮ ಜ್ಞಾನವನ್ನು ಸಂಪಾದಿಸಿದವನು
ತ್ಯಾಗ ಮಾಡುವುದು ಕರ್ಮ
........ರಾಯರನ್ನು ಅನುಸರಿಸಿ
ನಡೆಯುವುದೆ ಪತಿವ್ರತ ಧರ್ಮ

೮೨. ಆನೆಗೆ ಅಂಕುಶ ಮೇಲು
ಗಗನಕ್ಕೆ ಸೂರ್ಯ ಮೇಲು
ನಮಿಗೆ........ರಾಯ್ರು ಮೇಲು

೮೩. ಆನೆಗೆ ಅಂಕುಶವೆ ಮೇಲು
ಸೂರ್ಯನಿಗೆ ಕಿರಣವೆ ಮೇಲು
ದಾನದೊಳಗೆ ನಿದಾನವೆ ಮೇಲು
ಸತಿಗೆ ಪತಿಯೇ ಮೇಲು........

೩೪. ಆನೆ ಮ್ಯಾಲೆ ಆನೆ
ಒಂಟೆಮ್ಯಾಲೆ ಒಂಟೆ
ಒಂಟೆ ಮೂರು ವಾಲಾಡ್ತವೆ
ಗಂಟೆಸರ ನ್ಯಾತಾಡ್ತವೆ
ಅಚ್ಚ ಮಲ್ಲಿಗೆ ನುಚ್ಚ ಮಲ್ಲಿಗೆ
ಕಾಮಜೇನು ಕರ್ಜೂರದ ಹಣ್ಣು
ವಜ್ರದ ವಾಲೇಕಾರ
ಗೆಜ್ಜೇನಹಳ್ಳಿ ದಬೇದಾರ
ಚಿಕ್ಕಂ ಚೋಡಿ ಬೆಂಕಿಪುಡಿ
ಕಡೆ ಹೊಲದಲ್ಲಿ ಸೌತೆಕುಡಿ
ತಡಿಬ್ಯಾಡಿ ಬುಡಿ........

೩೫. ಆನೆಮ್ಯಾಲೆ ಕೂತ್ಗಂಡು
ದಾನ ಮಾಡ್ತರೆ........

೩೬. ಆನೆ ಹಿಂಡುತದೆ ಆರುಕೊಡ ಹಾಲು
........ರು ಮಾಡ್ತಾರೆ ಸೂಳೇರ ಪಾಲು

೩೭. ಆರಣ್ಯದ ಅಡಿಗಿಮನಿ
ಕಾಡಲ್ಲಿ ಪಡಸಾಲಿ
ತಾಟು ಹಾಕೀನಿ ಊಟಕ್ಕೆ ಬರ್‍ರೀಂದ್ರೆ
ಪ್ಯಾಟ್ಯಾಗೆ ಹೋಗ್ತಾರೆ........

೩೮. ಆರ್ಗಂಗಾಳ ಹೂವು
ಮೂರ್ಗಂಗಾಳ ಪತ್ರೆ
ಸಿಂಗಾರದ ಮಣೆಮ್ಯಾಲ್ ಕುತಗಂದ್
ಶಿವಪೂಜೆ ಮಾಡ್ಕೆಂತಾರ್........

೩೯. ಆರ್ಮರ ಎಳ್ಳು
ಮೂರ್ಮರ ಜಳ್ಳು
ನಮ್ಮ ರಾಯ್ರಾಡಿದ ಮಾತು ಪೊಳ್ಳು........

೪೦. ಆರ್ಮರ ಹಳ್ಳು
ಮೂರ್ಮರ ಜಳ್ಳು
ಸಂಜೆ ಹೊತ್ಗೆ ಸಾವಿರ ಸುಳ್ಳು........



೪೧. ಆರಾಡಿ ಈರಾಡಿ ಹುಣಸೆರಾಡಿ
ಹೆಣ್ಣಿನ ಮನೆಗೂ ಗಂಡಿನ ಮನೆಗೂ ಓಡಾಡಿ
ತೊಲ ಬಂಗಾರಕ್ಕೆ ಗುಂಜಾಡತಾರ........

೪೨. ಆರಿದಸ್ನ ಬೇಳೆಸಾರು
ಬಗ್ಗಿ ಬಗ್ಗಿ ನೋಡ್ತಾರೆ........

೪೩. ಆರು ಕಾಸುಕೊಟ್ಟು ಅರ್ಗ್ರಿ ತಂದ್ರು
ಮೂರು ಕಾಸುಕೊಟ್ಟು ಮುದ್ಗ್ರಿ ತಂದ್ರು
ಮಾತು ಕೇಳೊಲ್ರು ಮನೆಗೂ ಬರೊಲ್ರು
ಸುಳುದಾಡಿಕೊಂಡು ಸೂಳೆ ಮನೆಗೋಯ್ತಾರೆ........

೪೪. ಆರು ಮಣ ಹಿಟ್ಟು
ಮೂರು ಮಣ ಸಕ್ರೆ
ಹದ ಹಿಡಿ ಅಂದ್ರೆ
ಕದ ಹಿಡಿತರೆ........

೪೫. ಆರು ಮೂರು ಮಲ್ಲಿಗೆ ಹೂವು
ಮೂರು ಮೂರು ಬಿಲ್ಪತ್ರೆ
ಬಂಗಾರದ ತಟ್ಟೇಲಿ ಇಟ್ಕಂಡ್
ಲಿಂಗ ಪೂಜೆ ಮಾಡ್ತರೆ........

೪೬. ಆರು ಮೊರ ಎಳ್ಳು
ಮೂರು ಮೊರ ಜಳ್ಳು
ಬುಗುರಿ ಮರದ ಮೇಲೆ
ಕೂತ್ಕೊಂಡು ಬುಗುರಿ ಬುಡ್ತಾರೆ........

೪೭. ಆರು ಸುತ್ತಿನ ಕೋಟೆಯೊಳಗೆ
ನಾರಿಯೊಬ್ಬಳ ಕಂಡನು
ಗುತ್ತಿ ಅರಸನ ಮಗಬಂದು
ನಾರಿ ಕಣ್ಣಿಟ್ಟನುಕ್ಷಿ
ನೋಡಿ ಕಣ್ಣಿಟ್ಟನು
ಹ್ಯಾಗೆ ಸಾಕಲೆಂದನು
ಹ್ಯಾಗೆ ಸಲುಹಲೆಂದನು
ಕಣ್ಣಾಯಿಟ್ಟು ಕೈಯಲಿ ಹಿಡಿದು
ಗೆದ್ದ ಕಾಣೆ ಮದುವಳಿಗ
........ರು ಗೆದ್ದ ಕಾಣೊ

೯೮. ಆರು ಸೇರು ಎಳ್ಳು
ಮೂರು ಸೇರು ಜಳ್ಳು
ನಮ್ಮ ರಾಯ್ರು ಹೇಳೊದೆಲ್ಲ ಸುಳ್ಳು*........

೯೯. ಆರು ಸೇರು ಪತ್ರೆ
ಮೂರು ಸೇರು ಹೂವು
ಸಿಂಹಾಸನದ ಮೇಲೆ ಕೂತುಗೊಂಡು
ಶಿವಪೂಜೆ ಮಾಡ್ತಾರೆ........

೧೦೦. ಆರು ಸೇರು ಮಂಡಕ್ಕಿ
ಮೂರು ಸೇರು ಕಾರ
ಪಲ್ಲಕ್ಕ್ಯಾಗೆ ಕೂತು ಫಲಾರ ಮಾಡ್ತಾರೆ........

೧೦೧. ಆರ್ಸೇರಳ್ಳು ಮೂರ್ಸೇರು ಜಳ್ಳು
ಆನೆಮ್ಯಾಲಾನೆ ಒಂಟೆ ಮ್ಯಾಲೊಂಟೆ
ಒಂಟೆ ಮೂರು ವಾಲಾಡ್ತವೆ
ಗಂಟೆ ಸರ ನ್ಯಾತಾಡ್ತವೆ........

೧೦೨. ಅರ್ಸೇರೆಳ್ಳು ಮೂರ್ಸೇರ್ ಜಳ್ಳು
ದಾರದಲ್ಲವ್ರೆ ದರ್ಬಾರ್ದಲ್ಲವ್ರೆ
ಕಣ್ಣಲ್ಲವ್ರೆ ಕಣ್ಕಪ್ನಲ್ಲವ್ರೆ
ಕಚೇರಿ ಮುಂದೆ ಇಚಾರ್ಣೆ ಮಾಡ್ತರೆ........

೧೦೩. ಆರ್ಸೇರೆಳ್ಳು ಮೂರ್ಸೇರು ಜಳ್ಳು
ವಜ್ರುಗಾರ ವಾಲೀಕಾರ
ಸಭೆ ಒಳಗೆ ಕೂತ್ಕೊಂಡು ಜಪ ಮಾಡ್ತರೆ*........

೧೦೪. ಆಲದ ಬಳ್ಳಿ ಚೆಂದ
ದ್ರಾಕ್ಷಿ ಬಳ್ಳಿನು ಚೆಂದ
............ರಿಗೆ ನಾ ಚೆಂದ

---

೯೮* ಹೆಸರು ಕೇಳ್ದೋರು ಪೊಳ್ಳು
೧೦೩* ಸಭೆ ಒಳಗೆ ಕೂತ್ಕೊಂಡು ಜವಾಬ್ ಕೊಡ್ತರೆ



೧೦೫. ಆಲದ ಹೆರೆ ಜೋತ್‌ಬಿಡು
ಮುತ್ತಿನ ಕುದುರೆ ಮುಂದೆ ಬಿಡು
ರಾಯರು ಬರ್ತಾರೆ ದಾರಿ ಬಿಡು........

೧೦೬. ಆಲೂರು ಹಾಗಲಕಾಯಿ
ಬೇಲೂರು ಹುಣಿಸೆಕಾಯಿ
ಚೆನ್ನರಾಯಪಟ್ಟಣದ ತೊಗರೀಬೇಳೆ
ಸುಪ್ಪತ್ಗೆ ಮ್ಯಾಲೆ ಶಿವಪೂಜೆ ಮಾಡ್ತಾರೆ........

೧೦೭. ಆ ಹೂವು ಈ ಹೂವು
ಕಂಚಿನ ಹೂವು ಕಮಲದ ಹೂವು
ಮಂಚದ ಮೇಲೆ ಕೂತ್ಕೊಂಡು
ಪೊಮ್ಮಕ್ಳ ಆಡಿಸ್ತಾರೆ........

೧೦೮. ಇಂಗ್ಲೀಷಿನಲ್ಲಿ ಕೋಳಿಗೆ ಅನ್ನುವರು ಹೆನ್
ನಮ್ಮ ರಾಯರು........ರಿಗೆ ಕೊಡುವೆನು ಪೆನ್

೧೦೯. ಇಂಗ್ಲೀಷಿನಲ್ಲಿ ನೀರಿಗೆ ಅನ್ನುವರು ವಾಟರ್
........ರ ಹೆಸರು ಹೇಳುವೆನು........ರ ಡಾಟರ್

೧೧೦. ಇಂದ್ರನ ಸಭೆಯಲ್ಲಿ ಅಪ್ಸರೆಯರು ಮಾಡಿದರು
ಅಮೋಘವಾದ ನಾಚು
........ರ ಕೈಗೆ ಕಟ್ಟುವೆನು
ಎಚ್‌ಎಂಟಿ ವಾಚು

೧೧೧. ಇಂಪ್ಲಿ ಅನ್ನ ಕಂಪ್ಲಿ ಸಾರು
ಬೊಂಬಾಯಿ ತುಪ್ಪ ಮದ್ರಾಸ್ ಚಟ್ನಿ
ಊಟ ಮಾಡು ಅಂದ್ರೆ
ಊದ್‌ಕೊಂಡ್ ಹೋಗ್ತಾರೆ........

೧೧೨. ಇದ್ದಿಲಂತ ಮೈ ಮುದ್ದೆಯಂತ ಹೊಟ್ಟೆ
ಪಟ್ಟೆ ಮೆಣಸಿನಕಾಯಿ ಕಡಿದು
ಕಟ್ಟೆ ಮೇಲೆ ಉಲ್ಡಾಡ್ತರೆ........

೧೧೩. ಇರುಬೆ ಇರುಬೆ ಸಾಲು
ಕಟ್ಟಿರ್ಬೆ ಸಾಲು ಕಟ್ಟಿರ್ಬೇಕು
ಕಟ್ಟಿರೊ ರುಮಾಲು ಕಟ್ಟಿದಂಗಿರ್ಬೇಕು
ಈ ಪೇಟೆನಂಗಿ ತೊಟ್ಟಿರಬೇಕು
ಮೈಸೂರುಡುಗಿ ಇಟ್ಟಿರಬೇಕು
ಬೆಂಗ್ಳೂರ್ ಹುಡುಗಿ ಬಿಟ್ಟಿರಬೇಕು
ಅದುರ್‌ಮ್ಯಾಲ್ ನಮ್ಮ್ರಾಯ್ರು
ನನ್ನ ತಂದಿರ್ಬೇಕು........

೧೧೪. ಇಳಕಲ್ ಸೀರಿ
ಕಿಮ್ಮತ್ತು ಬಾರಿ
ಸೀರೆ ತರ್ರೀಂದ್ರೆ
ಮಾರಿ ನೋಡ್ತಾರೆ........

೧೧೫. ಈಶ್ವರನ ಜಡೆಯಲ್ಲಿರುವಳು ಗಂಗೆ
........ರ ಹೆಸರು ಹೇಳುವೆನು........ರ ತಂಗಿ.

೧೧೬. ಈಶ್ವರ ಪಾರ್ವತಿಗೆ ಶೋಭೆ
ಬಡವರಿಗೆ ಲಕ್ಷ್ಮಿ ಶೋಭೆ
ವಿದ್ಯೆಗೆ ಸರಸ್ವತಿ ಶೋಭೆ
ನಾ ಶೋಭೆ........ರಿಗೆ

೧೧೭. ಉಗ್ಗಿ ಅಂದ್ರೆ ಬಲು ಹಿಗ್ಗು
ಸಿಗ್ಗು ಅಂದ್ರೆ ನಮ್ಮವರ ಮುಖ ಪೆಗ್ಗು........

೧೧೮. ಉಡುಗ್ಗೆ ಅನ್ನ ಮಾಡಿ
ಉದ್ದಿನ ಅಪ್ಪಮಾಡಿ
ಕರಿಬೇವಿನ ಎಲೆ ಹಿಂಡಿ ಮಾಡಿ
ಕರ್ಜೂರದ ಹಣ್ಣಿನ ತಾಳ್ದ ಮಾಡಿ*
ಸುಮ್ಮನೆ ಉಂಡು ಸೂಳೆ ಮನೆಗೋಯ್ತ್ತಾರೆ........

---

೧೧೮* ಕರ್ಜಕಾಯ ತಾಳ್ದ ಮಾಡಿ
ಮಾಡ್ದೋರು ಅತ್ತೆಮ್ಮ
ಉಂಡೋರು ಯಜಮಾನ್ರು
ನಾನೇನೇಳ್ಲಿ ನೆರ್ಮನೆ ಮಗ್ಳು........



೧೧೯. ಉಡುಪಿ ಕೃಷ್ಣ ಮೆಟ್ಟಿದ್ದು ನಾಗರ ಹೆಡೆ
ಮಲ್ಲಯ್ಯ ಉಡುವುದು ಬಂಗಾರದ ಮಡಿ
ನಾನು........ರ ಹೆಸರು ಹೇಳುವೆನು ಕನ್ನಡನುಡಿ

೧೨೦. ಉತ್ತರದಲ್ಲಿ ಇರೋದು ಕಾಶಿ
ಅದರ ಮುಂದಿರೋದು ಚಿನ್ನದ ರಾಶಿ
ನಾನು ಅವರ ಚರಣದಾಸಿ........

೧೨೧. ಉದುದ್ರೊ ಅನ್ನ
ಗಮ್ಮನ್ನೊ ತುಪ್ಪ
ಒಬ್ಬಟ್ಟಿನೂಟ
ಸುಮ್ನುಂಡ್ರು
ಸೂಳೆಮನೆಗೋದ್ರು
ನೆರ್ಮನೆ ಮಗ್ಳು ನಾನೇನು ಬಲ್ಲೆ........

೧೨೨. ಉದುರು ಉದುರು ಅನ್ನ
ಉದ್ದಿನ ಹಪ್ಪಳ
ಕರಿಬೇವು ಚಟ್ನಿ
ಕಮ್ಮನ ತುಪ್ಪ
ಸುಮ್ಮನುಂಡು ಸೂಳೆಮನೆಗೆ ಹೋಗ್ತಾರೆ........

೧೨೩. ಉಬ್ಬು ನೋಡು
ಹುಬ್ಬಳ್ಳಿ ನೋಡು
ತಿದ್ದಿ ನೋಡು
ತಿಮ್ಮಾಪುರದ ಕೆರೆ ನೋಡು
ಕೆರೆ ಮೇಲೆ ಬರೋ ಬಾಲೆನೋಡು
ಬಾಲೆ ತಲೆ ಮೇಲೆ ಸಿಂಬೆ ನೋಡು
ಸಿಂಬೆ ಮೇಲೆ ಕೊಡನೋಡು
ಕೊಡದ ಮೇಲೆ ಕೈನೋಡು
ಕೈ ಮೇಲೆ ಹಚ್ಚೆ ನೋಡು
ಹಚ್ಚೆ ನೋಡಿ ಮೆಚ್ಚಿ ಬಂದ್ರು........

೧೨೪. ಉಳ್ಳಾಗಡ್ಡೆ ಕರ್‍ತ
ಮನೆ ಹೆಣ್ತಿ ಮರ್‍ತ........

೧೨೫. ಊಟುಕ್ ನೂರ್ ಉಪ್ಪಿನಕಾಯಿ
ತ್ವಾಟುಕ್ ನೂರ್ ಎಲೆ
ಊಟ ಮಾಡಂದ್ರೆ
ರಾಂಪುರ್ಕೆ ನಾಟ್ಕಕ್ಕೋಕ್ತಾರೆ........

೧೨೬. ಊಟುಕ್ ಮೂರ್ ಉಪ್ಪಿನಕಾಯಿ
ತ್ವಾಟುಕ್ ಮೂರ್ ವಿಳ್ಳೆದೆಲೆ
ಊಟ ಮಾಡ್ಕೊಂಡ್ ಹೋಗಂದ್ರೆ
ಸಿನಿಮ ನೋಡ್ಕೊಂದ್ ಬರ್‍ತೀನೀಂತ ಹೋಗ್ತಾರೆ........

೧೨೭. ಊಟುಕ್ಕೆ ಉಪ್ಪಿನಕಾಯಿ
ತ್ವಾಟುಕ್ಕೆ ಬದನೆಕಾಯಿ
ತಾಟಗಿತ್ತಿ ಮಲ್ಲಿ ತಡಕಾಡ್ತರೆ........

೧೨೮. ಊಟಕ್ಕೆ ನೋಡು ಉಪ್ಪಿನಕಾಯಿ
ತೋಟಕ್ಕೆ ನೋಡು ಕಂಚೀಕಾಯಿ
ಹಟ ಮಾಡಿ ಹದ್ನಾರ್ ಹೋಳಿಗೆ ತಿಂತಾರೆ........

೧೨೯. ಊಟುಕ್ಕೋದ್ರೆ ಮೂರು ಉಪ್ಪಿನಕಾಯಿ
ತ್ವಾಟುಕ್ಕೋದ್ರೆ ಮೂರು ಇಳ್ಳೇದೆಲೆ
ಚಿಕ್ಕುಡ್ಗಿ ಕೈಲಿ ಚೀಲ ಕೊಟ್ಕೊಂಡು
ಚಕ್ಕಂದ ಆಡ್ತರೆ........

೧೩೦. ಊದ್ಗಡ್ಡಿ ಉರಿ ಹಾಕಿ
ಕಲ್ಸಕ್ರೆ ಸಾರು ಮಾಡಿ
ಯಾಲಕ್ಕಿ ಅನ್ನ ಮಾಡಿ
ಒಳಗೋಗಿ ನೀರು ತರೊವತ್ಗೆ
ಸುಳ್ದಾಡ್ಕೊಂಡು ಸೂಳೆ ಮನೆಗೋಯ್ತಾರೆ........



೧೩೧. ಎಂಟು ಕುಂಬಳಕಾಯಿ ಸೊಂಟಕ್ಕೆ ಕಟ್ಕೊಂಡು
ಎಂಟೆಂಟು ದಿನ್ಕೆ ಕರಿಯಕ್ಕೆ ಬತ್ತಾರೆ*........

೧೩೨. ಎಂಟು ಚೀಣಿಕಾಯಿ ಸೊಂಟಕ್ಕೆ ಕಟ್ಕೊಂಡು
ನೆಂಟಸ್ತಿಗೆ ಹೋಗ್ತಾರೆ........

೧೩೩. ಎಂಟ್ರೊಟ್ಟೆ ಪಲ್ಟಿಗರಿಂಡಿ*
ಸೊಂಟುಕ್ ಕಟಿಗೆಂದ್ ರಂಟೆ ಹೊಡಿತಾರೆ........

೧೩೪. ಎಂತಹಿಟ್ಟು ಮೆಂತೆಹಿಟ್ಟು
ಕುಂಕುಮದ ಬಟ್ಟು
ಎಂತವರ ಮಗಳೆಂದು*
ಸಂತೋಷ ಪಡ್ತರೆ........

೧೩೫. ಎಡಕೆ ಎತ್ತಿಲ್ಲ
ಬಲಕೆ ಬಾರುಕೋಲಿಲ್ಲ
ಕೂರಿಗೆ ಹೊತ್ಗೊಂಡು ಕುಣಿದಾಡ್ತರೆ........

೧೩೬. ಎಡಕ್ಕೆ ಎಣ್ಣೆ ಚಟಿಗೆ
ಬಲಕ್ಕೆ ಬೆಣ್ಣೆ ಚಟಿಗೆ
ತೇರು ಮೇಲೆ: ಕೂತ್ಗೊಂಡು
ಪೂಜೆ ಮಾಡ್ತಾರೆ........

೧೩೭. ಎಡಕ್ಕೆ ಎಣ್ಣೆದೀವಿಗೆ
ಬಲಕ್ಕೆ ತುಪ್ಪದ ದೀವಿಗೆ
ಶೃಂಗಾರದ ಮಣೆ ಮ್ಯಾಲೆ ಕೂತ್ಕೊಂಡು
ಶಿವಪೂಜೆ ಮಾಡ್ತಾರೆ........

---

೧೩೧.* ನೆಂಟ್ರು ಮನ್ಗೋಗವ್ರೆ
೧೩೩.* ಎಂಟ್ರೊಟ್ಟೆ ಕರಿಹಿಂಡಿ
೧೩೪.* ನಡ್ವೆ ಸಿಂಹಾಸುನ್ದ್ ಮೇಲ್ ಕೂತ್ಕೊಂಡ್
ಗನ ಶಿವಪೂಜೆ ಮಾಡ್ತಾರೆ............

೧೩೮. ಎಮ್ಮೆ ಕರೆಯಿತು ಕೊಡ ಹಾಲು
ಉರುಡಿ(ಳಿ) ಹೋಯಿತು ನೆಲಪಾಲು
ಮಾವ ಮಾಡ್ಯಾನೆ ಮನೆಸಾಲ
ಅತ್ತೆ ಮಾಡ್ಯಾಳೆ ಕಿಡಕಿಸಾಲ
........ರು ಮಾಡ್ಯಾರೆ ಸೂಳೆ ಸಾಲ

೧೩೯. ಎಲೆಗೊಂದ್‌ಕಾಯಿ
ತಲೆಗೊಂದ್‌ಕಾಯಿ
ಜಾಣನಿಗೊಂದ್‌ಕಾಯಿ
ಜಗದೀಶನಿಗೊಂದ್‌ಕಾಯಿ
ನನಗಂಡನ ಹೆಸರು........

೧೪೦. ಎಷ್ಟೊಡಿತಿ ಹೊಡಿ
ಹೊಲಕ್ಕೋಗನ ನಡಿ
ಕಾಮಿ ಬಂದೈತಿ ಉಶ್
ನನ್ನ ಗಂಡ್ನ ಹೆಸರು ಬಶ್ಯಾ

೧೪೧. ಎಸರು ಮಸರುಪಜ್ಜಿ
ಮಾಡ್ದೋರು ಅತ್ತೆ
ಉಂಡೋರು ಗೌಡ್ರು
ನಾವೇನ್ ಬಲ್ಲೊ ನೆರ್ಮನೆ ಮಗ್ಳು
ತಡಿಬ್ಯಾಡಿ ಬುಡಿ........

೧೪೨-೧ಏರಿ ನೋಡು ಕೆರೆ ನೋಡು
ಕೆರೆಲಿರೊ ಬಾಲೇರ್ ನೋಡು
ಬಾಲೇರು ಹುಟ್ಟಿರೊ ಸೀರೆ ನೋಡು
ಸೀರೆಗೆ ತಕ್ಕಂತ ಸೆರಗು ನೋಡು
ಸೆರಗಿಗೆ ತಕ್ಕಂತ ಸಿಂಬೆ ನೋಡು
ಸಿಂಬೆ ಮೇಲೆ ಕೊಡನೋಡು
ಕೊಡದ ಮೇಲೆ ಕೈನೋಡು
ಕೈಮೇಲಿನ ಹಚ್ಚೆ ನೋಡಿ ಮೆಚ್ಚಿ ಬಂದ್ರು........

೧೪೨.೨ಏರಿಬಂತು ಮಲ್ಲಮ್ಮನ ಬೆಳಿ
ಆಗಿ ಹೋತು ಐದು ಇಂಚಿನಮಳಿ
ಇವರಿಂದ ಕಂಡೆ ಐದು ಹಸಿರು ಬಳಿ........



೧೪೩. ಐಹೊಳೆಯಲ್ಲಿರುವುದು ಶಿಲ್ಪಕಲೆ
ಅಜಂತಾದಲ್ಲಿರುವುದು ವರ್ಣಕಲೆ
............ರ ಜೊತೆ ನಾ ಕಲಿತದ್ದು ಜೀವನಕಲೆ

೧೪೪. ಒಂಟ್ಮುತ್ತು ಕಂಟೀಸರ
ಜೋಡ್ಮುತ್ತು ಜೋಮಾಲೆಸರ
ಅಡ್ಕೆತ್ವಾಟ ಕಿಟ್ಕಿಬಾಕ್ಲು
ಎಲೆ ಹಾಕ್ಕೊಂಡು ಎಲ್ಮೋಜ್ ಮಾಡ್ಕೊಂಡು
ನಸೆ ಹಾಕ್ಕೊಂಡು ಕುಸಾಲ್ ಮಾಡ್ಕೊಂಡು
ಚಿಕ್ಕಣ್ಣ ಕರ್ಕೊಂಡು ಚಕ್ಕನೆ ಬಂದ್ರು........

೧೪೫. ಒಂದು ಎರಡು ಮೂರು
........ಳು ಬಲು ಜೋರು

೧೪೬. ಒಂದು ಮೊರ ಎಳ್ಳು
ಮೂರು ಮೊರ ಜೊಳ್ಳು
ಅವರು ಹೇಳೋದೆಲ್ಲ ಬರಿ ಸುಳ್ಳು........

೧೪೭. ಒಂದೇ ಮಾತಿನವರು
ಗಟ್ಟಿ ಮನಸಿನವರು
ದುಷ್ಟರಿಗೆ ಸೋಲದವರು
ಬ್ರಷ್ಟರನ್ನು ಕಂಡು ದೂರಿರುವವರು........

೧೪೮. ಒಡಕ ತಂಬಿಗಿ
ಆರಕ ಚಪ್ಪಲಿ
ಪುರುಸೊತ್ತಿಲ್ಲದೆ
ಹೊರಗಡಿಕೆ ಹೋಗತಾರ........

೧೪೯. ಓಣಿಯಲ್ಲಿರುವುದು ಕೆಸರು
ನೆಲ್ಲಿ ಮ್ಯಾಲಿರುವುದು ಮಸರು
ನಾ ಹೇಳುವುದು ಒಂದೇ ಹೆಸರು........

೧೫೦. ಓದುವುದು ಪ್ರಬಂಧ
ಬರೆಯುವುದು ನಿಬಂಧ
........ರಿಗೆ ಹಚ್ಚುವೆನು ಶ್ರೀಗಂಧ

೧೫೧. ಕೆಂಚಿನ ಕಪ್ಪು ಕಮಲದ ಹೂವು
ಮಂಚದ ಮೇಲೆ ಕೂತಗೊಂಡು
ಮಗುನ ಆಡುಸ್ತಾರೆ........

೧೫೨. ಕಟ್ಟಿನಲ್ಲಿ ಕಟ್ಟು ಕಂಕಣ ಕಟ್ಟು
ನಾನು ಹೆಸರು ಹೇಳುವೆನು
ಸರಿಯಿರಿ ದಾರಿಬಿಟ್ಟು........

೧೫೩. ಕಟ್ಟಿನಲ್ಲಿ ಕಟ್ಟು ಧರ್ಮದ ಕಟ್ಟು
ಲಗ್ನದಲ್ಲಿ ಕಂಕಣಕಟ್ಟು
........ರ ಹೆಸರು ಹೇಳುವೆ
ಸರಿಯಿರಿ ದಾರಿಬಿಟ್ಟು

೧೫೪. ಕಟ್ಟಿನಲ್ಲಿ ಕಟ್ಟು ಬಹ್ಮ ಕಟ್ಟು
ಲಗ್ನದಲ್ಲಿ ಕಂಕಣ ಕಟ್ಟು
........ರ ಹೆಸರು ಹೇಳುವುದು
ಬಹಳ ಬಿಕ್ಕಟ್ಟು

೧೫೫. ಕಟ್ಟಿರವಿ ಕಾಲರುಬಿ
ಕಾಲಾಗೆ ಬೂಟ ಮೆಟ್ಟಿರುವಿ
ದಡಿದೋತ್ರ ಹೊದ್ದಿರಲಿ
ಸಿಲ್ಕಿನಂಗಿ ಹುಟ್ಟಿರಲಿ
ಹರಿಹರದಾಕೀನ ಬಿಟ್ಟಿರಲಿ
ದಾವಣಗೆರೆಯಾಕೀನ ಇಟ್ಟಿರಲಿ
ಹುಬ್ಬಳ್ಳಿಯಾಕೀನ್ ಮೇಲೆ ಕಣ್ಣಿರಲಿ........

೧೫೬. ಕಟ್ಟಿರುವೆ ಸಾಲು ಕಟ್ಟಿರಬೇಕು
ಕೊಟ್ಟೂರಾಗೆ ಸೂಳೆ ಇಟ್ಟಿರಬೇಕು
ಕೂಡ್ಲಿಗಿ ಸೂಳೆ ಬಿಟ್ಟಿರಬೇಕು
ಕ್ಲಬ್‌ನಲ್ಲಿ ಇಸ್ಪೀಟ್ ಆಡ್ತಿರಬೇಕು
ಸೂಳೆರ ಮೇಲೆ ಕಣ್ಣಿಟ್ಟಿರಬೇಕು
ನಮ್ಮ ರಾಯರ ಮೇಲೆ ಪ್ರೀತಿ ಇರಬೇಕು........



೧೫೭. ಕಟ್ಟಿ ಮೇಗಳ ಕರ
ಉತ್ತುತ್ತಿ ಸರ
ನನ್ಗೆ ನನ್ಗಂಡ್ನೆ ವರ........

೧೫೮. ಕಡಕಲು ರೊಟ್ಟಿ
ಕುದುಕಲು ಪಲ್ಯ
ಇಕ್ಕಾಕೋದ್ರೆ ಕುಕ್ಕಾಕೆ ಬತ್ತಾರೆ............

೧೫೯. ಕಡಬು ತಿಂದು
ಎಡವಿಕಂಡು ಬೀಳ್ತರೆ............

೧೬೦. ಕಡಾಕಡಿ
ಕನಕದೇವರ ಗುಡಿ
ನಿಮ್ಮೆಸರ ಕೇಳಿದೋರ
ಕಣ್ಣಿಗೆ ಕಾರದ ಪುಡಿ............

೧೬೧. ಕಡಾಕಡಿ ಬಂಗಿಪುಡಿ
ಹೆಸರು ಕೇಳ್ದೋನ
ಬಾಯಿ ಮೇಲೆ ಬಡಿ............

೧೬೨. ಕಡೂರಿನತ್ತಾಗೆ ನಾನು
ಕಡುವಿನ ಸ್ವಾರೆನಾಗೆ ಅವ್ರು
ಕಡುಬಿಗೆ ಚಟ್ನಿ ಹಚ್ಚಿಲ್ಲ ಅಂತೇಳಿ
ಕೆಡಿಕೆಡಿಕೊಂಡು ಒದಿತಾರೆ................

೧೬೩. ಕಡ್ಲೆ ಚಟ್ನಿ ಕಟಿಗಂದು ಹೋಗು ಅಂದ್ರೆ
ಸೆಟಗಂಡು ಹೋಗ್ತಾರೆ............

೧೬೪. ಕಣದಾಗ್ಳ ಕರಿಕಿ
ಕೈಯಾಗ್ಳ ವಂಕಿ
ನನ್ನೋಡಿದ್ರೆ ನನ್ನೋರಿಗೆ ಬೆಂಕಿ............

೧೬೫. ಕಣ್ವ ಋಷಿಯ ತಪೋವನದಲ್ಲಿ
ದುಶ್ಯಂತ ರಾಜನಿಗೆ ಕಂಡಿತು ಶಕುಂತಲೆಯ ಕಣ್ಣೋಟ
............ರ ಹೆಸರು ಹೇಳುವೆನು ನಿಮ್ಮ ಒಡಾಟ

೧೬೬. ಕಣ್ಣಿಗೆ ಕಪ್ಪಿನ ಆಸೆ
ಹೆಣ್ಣಿಗೆ ತವರು ಮನೆ ಆಸೆ
ನಾ............ರ ಹೆಸರು ಹೇಳುವೆನು
ನಿಮ್ಮೆಲ್ಲರ ಆಸೆ

೧೬೭. ಕಣ್ಣಿಗೆ ಕಾಡಿಗೆ ಚಂದ
ಹಣೆಗೆ ಕುಂಕುಮ ಚಂದ
ಅರಳಿದ ಹೂವು ಚಂದ
ನಾ ಚಂದ ನಮ್ಮ...............ರಿಗೆ

೧೬೮. ಕಣ್ಣಿಗೆ ಹಾಕೋದು ಕಪ್ಪು
ಹಾಲಿಗೆ ಹಾಕೋದು ಹೆಪ್ಪು
ನನ್ನ ಗಂಡ್ನ ಹೆಸರು ಕೇಳ್ದವರಿಗೆ ತಪ್ಪು............

೧೬೯. ಕತೆ ಹೇಳೋಕೆ ಚಂದ
ಪದ ಕೇಳೋಕೆ ಚಂದ
ನಮ್ಮ ಮನೇರ ಹೆಸರು ಹೇಳೋಕೆ
ನನಗೆ ಬಲು ಆನಂದ............

೧೭೦. ಕತ್ತಿಗಿಗೂ ಜೀನಳ್ಳಿಗೂ ಸುತ್ತು ಬೇಲಿಕಟ್ಟಿ
ಪಾರಿಜಾತದ ಹೂತಗೆದು ಪವುಡದಲ್ಲಿ ಇಟ್ಟು
ನಮ್ಮ ರಾಯ್ರು............ನಾರಿ ನೋಡಿ ನಲಿದಾಡ್ತಾರೆ.

೧೭೧. ಕಮ್ಮನ್ ತುಪ್ಪ ಕರಿಬೇವಿನ ಚಟ್ನಿ
ಸುಮ್ಮನುಂಡು ಸೂಳೆ ಮನಿಗೋಗ್ತಾರೆ...........

೧೭೨. ಕಮ್ಮಹಿಂಡಿ ಕರಿಹರಿಬೆ ಸೊಪ್ಪು
ಸುಮ್ಮನುಂಡು ಸೂಳೇರ ಮನೆಗೋಗ್ತಾರೆ........

೧೭೩. ಕರುಂ ಕುರುಂ ಸಪ್ತಿ ಮಿಡಿ
ನಮ್ಮೋರ್ ಉಡ್ತಾರೆ ರೇಶ್ಮೆಮಡಿ
ಕುದುರಿಗೆ ಹಾಕ್ಯಾರು ಕುತಾನ್ ತಡಿ
ಕಚೇರಿಗೋಗ್ತಾರ್ ಗುರ್ತಾಹಿಡಿ............



೧೭೪. ಕರುಂಕರುಂ ಸೌತೇ ಕುಡಿ
ನಾನು ಉಡೋದು ರೇಶ್ಮೆ ಮಡಿ
ಅವರು ಉಡೋದು ನಾರುಮಡಿ
ನನ್ನ ಕೂಡಿದವರ ಹೆಸರು............

೧೭೫. ಕಲ್ನಾಗಿ ಹುಟ್ಟೋದು ಕಲ್ಲಿಬೇರು
ನೆಲ್ದಾಗ ಹುಟ್ಟೋದು ನೆಲ್ಲಿಬೇರು
ಎಲ್ಲಾರು ಮಾಡೋದು ಬಾಳೆಕಾಯಿ
ಬಲ್ಲೋರು ಮಾಡೋದು ಎಣ್ಗಾಯಿ
ಬಸ್ದ ಸ್ಯಾವ್ಗೆ ಕರ್ದ ಹೋಳ್ಗಿ
ಸಂದಿ ಕ್ವಾಣ್ಯಾಗೆ ಕುತಗಂದು
ಸರ್‌ಸರ್ದು ಹೊಡಿತಾರೆ............

೧೭೬. ಕಲ್ಲು ಸಕ್ರೆ ಕಳ್ಳು
ನಕ್ಷತ್ರದ ಬೆಳ್ಕು
ನಕ್ಷತ್ರುದ ಬೆಳಕಿನಾಗೆ
ಕೂತ್ಕೊಂಡು ಅಕ್ಷರ ಬರಿತರೆ............

೧೭೭. ಕಸ್ತೂರಿ ಕಪ್ಪು
ಹಾಲಿಗೆ ಹಾಕೋದು ಹೆಪ್ಪು
ವರನಿಗೂ ವಧುವಿಗು ಒಪ್ಪು
ನಮ್ಮ ಯಜಮಾನರ ಹೆಸ್ರು............ಪ್ಪ.

೧೭೮. ಕಾಗದ ಕತ್ತರಿಸುವುದು ಕತ್ರಿ
ದೇವರಿಗೇರಿಸುವುದು ಪತ್ರಿ
ನಮ್ಮ ರಾಯ್ರು............ರ
ಹೆಸ್ರು ಕೇಳುವವಳು ಬಲು ಬಿತ್ರಿ

೧೭೯. ಕಾಗದ ಕತ್ತರಿಸೊ ಕತ್ರಿ
ಮಳೆಗೆ ಹಿಡಿಯುವ ಛತ್ರಿ............
ಮದುವೆ ಆಗದವಳ ಹೆಸರು
ಕೇಳುವರು ಬಲು ಬಿತ್ರಿ............

೧೮೦. ಕಾಜಗ ಕತ್ರಸೋದು ಕತ್ರಿ
ದೇವರಿಗೆ ಹಾಕೋದು ಪತ್ರಿ
ಪುತ್ರನೆತ್ತಿಗೊಂಡು ಪತ್ರ ಬರಿತಾರೆ...........

೧೮೧. ಕಾಡಿನ ಜ್ವಾಳ* ಕಾಗೆ ಕಚ್ಗೆಂಡ್ ಹೋದ್ರೆ
ಏಳು ಹರಿದಾರಿ ದೂರ ಓಡಿ ಹೋಗಿದ್ರಂತೆ.......

೧೮೨. ಕಾದಂಬರಿಕಾರರಲ್ಲಿ ಹೆಸರಾದವನು ಬಂಕಿಮ
........ರಾಯರಿಗೆ ಹಚ್ಚುವೆನು ಕುಂಕುಮ

೧೮೩. ಕಾಪಿಕಾಗದ ಕನ್ನಡ ಮಾತು
ಕಚೇರೀಲಿ ಕುಂತು ವಿಚಾರ ಮಾಡ್ತಾರೆ........

೧೮೪. ಕಾಫಿ ಕಲ್ಸಕ್ರೆ
ಸೂರ್ಯ ಚಂದ್ರನ ಬೆಳಕು
ನಕ್ಷತ್ರುದ ಬೆಳಕಿನಾಗೆ
ಅಕ್ಷಾರ ಬರೀತಾರೆ........

೧೮೫. ಕಾಫಿ ಕುಡಿಯೋ ಕಪ್ಪ
ಬೇಲಿ ಮ್ಯಾಗ್ಲ ಸೊಪ್ಪ
ಕುರುಗೂರಿಗೆ ಹೆಣ್ಣು ಕೊಡಾದು ಬಲುತಪ್ಪ........

೧೮೬. ಕಾಫಿ ಕುಡ್ಯೋ ಕಪ್ಪು
ಸಾರಿಗಾಕೊ ಉಪ್ಪು
ನಮ್ಮನೇರ ಹೆಸರೇಳೋದು ಬಾಳತಪ್ಪು........

೧೮೭. ಕಾಮ್ ಬಂತು ಉಸ್ಯೋ
ಗಂಡನ ಹೆಸರು ಬಸ್ಯೋ

೧೮೮. ಕಾರೆ ಗಿಡದ ಮೇಲೆ ಕೋರಿ ಹಾಸ್ಕೊಂಡು
ಕೂರೆ ಕುಕ್ತರೆ........

---

೧೮೧* ಕರಿಜೋಳ



೧೮೯. ಕಾರೆ ಮಟ್ಯಾಗೆ ಕೂತ್ಕೊಂಡು
ಕೂರೆ ಕುಕ್ತರೆ........

೧೯೦. ಕಾರೆ ಮೆಳೆಮ್ಯಾಲೆ ಕೂತ್ಕೊಂಡು
ಕೂರೆ ಕುಕ್ತರೆ........

೧೯೧. ಕಾರ್ಬಾರ್ದಲ್ಲಿ ಕಂಡೆ ದಿನಸಿನ ಬಳೆ
ನಮ್ಮ ರಾಯರಲ್ಲಿ ಕಂಡೆ ಮುತ್ತೈದೆ ಬಳೆ
ಹಂಪೆಯಲ್ಲಿರುವುದೆ ಪಂಪಾಪತಿ ತೇರು
ಅದರ ಮುಂದೆ ಇರುವುದೇ ತುಂಗಾನದಿ
ಹತ್ತು ಮಂದಿ ಎದುರಿಗೆ ಹೇಳುವೆ
ಅತ್ತೆ ಮಾವರ ಹೆಸರು
ಸಾವಿರ ಸಭೆಯಲ್ಲಿ ಹೇಳುವೆ
ಪತಿದೇವರ ಹೆಸರು... ....

೧೯೨. ಕಾರ್ಯಾರಂಭಕ್ಕೆ ಮೊದಲು ಮಾಡುವುದು ಗಣಪತಿಯ ಪೂಜೆ
ಹೆಂಗಳೆಯರು ಮಾಡುವುದು ಮಂಗಳ ಗೌರಿ ಪೂಜೆ
ನಮ್ಮರಾಯರು........ಮಾಡುವುದು ಶಿವಪೂಜೆ.

೧೯೩. ಕಾಲಗೆ ಕೆಸರು
ನೆಲ್ಲಿ ಮ್ಯಾಲೆ ಮೊಸರು
ಊಟಕೆ ನೀಡೋದು ಕೆನೆ ಮೊಸರು
ಪತಿರಾಯ್ರು ಉಣ್ತಾರೆ ಸವಿಯುಸಿರು........

೧೯೪. ಕಾಲಲ್ಲಿರುವುದು ಬೂಟು
ತಲೆಯಲ್ಲಿರುವುದು ಹ್ಯಾಟು
ಕೈಯಲ್ಲಿರುವುದು ಬೆಳ್ಳಿ ನೋಟು
ಜೇಬಿನಲ್ಲಿರುವುದು ಹದಿನೆಂಟು ಸಿಗರೇಟು
ಸ್ನೇಹಿತರ ಕರ್ಕೊಂಡು ಸಿನಿಮಾಕ್ಕೆ ಹೋಗ್ತಾರೆ......

೧೯೫. ಕಾಲಾಗೆ ಕರ್ಪೂರ್ದ ಬೂಟು
ಕೈಯಾಗೆ ಹಸ್ರು ನೋಟು
ಕಾರ್ ತಗೊಂಡು ಕರಿಯಾಕೆ ಬತ್ತಾರೆ........

೧೯೬. ಕ್ಯಾಸಕ್ಕಿ ಕಿಚಡಿ
ಮೂಲಂಗಿ ಪಚಡಿ
ಬಚ್ಚಲಲ್ಲಿ ಕೂತ್ಕೊಂಡು
ಬಾಯಿ ಬಾಯಿ ಬುಡ್ತರೆ........

೧೯೭. ಕಾಸಿಕಾಗದದಾಗೆ ಕನ್ನಡ ಮಾತು
ಕಚೇರಿಗೆ ಕೂತ್ಕೊಂಡು ಇಚಾರ ಮಾಡ್ತಾರೆ........

೧೯೮. ಕಿಡಿ ಕಿಡಿ ಕೆಂಡ
ಪಡಕಿನ ಬಾಗಿಲು
ರನ್ನದ ಕೋಣೆ
ಚಿನ್ನದ ಕುರ್ಚಿ
ಕುರ್ಚಿ ಮೇಲೆ ಕೂತುಗೊಂಡು
ಅರ್ಜಿ ಬರೀತಾರೆ.......

೧೯೯. ಕಿತ್ತೂರ ಚನ್ನಮ್ಮನ ಮೂಗಿನಲ್ಲಿರುವುದು
ಹತ್ತರಳಿನ ನತ್ತು
ನಾ ಆರತಿ ಮಾಡಿ ಹೆಸರ ಹೇಳತೀನಿ
ಮೂರರ ಸಂಜಿ ಹೊತ್ತು........

೨೦೦. ಕಿತ್ತೂರು ರಾಣಿ ಚನ್ನಮ್ಮನ ಶೌರ್ಯ
ಬೆಳವಡಿ ಮಲ್ಲಮ್ಮನ ಧೈರ್ಯ
ನಮ್ಮ ರಾಯರು ಮಾಡುವರು ಸತ್ಕಾರ್ಯ........

೨೦೧. ಕಿತ್ತೂರು ಚನ್ನಮ್ಮ ಹೋರಾಡಿದುದು ಕನ್ನಡ ನಾಡಿಗಾಗಿ
ಸರಸ್ವತಿ ಹೋರಾಡಿದುದು ವಿದ್ಯೆಗಾಗಿ
ಲಕ್ಷ್ಮಿ ಹೋರಾಡಿದುದು ಹಣಕ್ಕಾಗಿ
ನಾವು ಹೆಸರು ಹೇಳುವುದು ನಿಮಗಾಗಿ........

೨೦೨. ಕುಂಬಾರ ಮಾಡಿದ ಮಣ್ಣಿನಲಿ ವಿಗ್ರಹ
ಬಡಿಗಾರ ಕೆತ್ತಿದ ಮರದಲ್ಲಿ ವಿಗ್ರಹ
ನನ್ನ ಹೃದಯ ಮಂದಿರದಲ್ಲಿ............ರ ವಿಗ್ರಹ



೨೦೩. ಕುಂಬೇನಳ್ಳುಗ್, ನಮ್ಮೂರ್ಗುಗ ಒಂದರಿದಾರಿ
ಹರ್‌ದಾರಿಯೊಳ್ಗೊಂದು ಕಾಲ್ದಾರಿ
ಕಾಲ್ದಾರಿಯೊಳ್ಗೊಂದು ಕಚೇರಿ
ಕಚೇರೀಲಿ ಕೂತ್ಕೊಂಡು ಇಚಾರ ಮಾಡ್ತಾರೆ....

೨೦೪. ಕುರ್ಚಿ ಮೇಲೆ ಕೂತ್ಕೊಂಡು ಅರ್ಜಿ ಬರಿತಾರೆ
ಮಲೆನಾಡ ಮಲ್ಲಪ್ಪಸ್ವಾಮಿ
ಈ ಊರ ....ಸ್ವಾಮಿ

೨೦೫. ಕುರ್ಚಿಮೇಲೆ ಕೂತ್ಗಂಡ್ ಪೇಪರ್ ಓತ್ತಾರೆ
ಹೋಟ್ಲಲ್ಲಿ ಕೂತ್ಗಂಡ್ ತಿಂಡಿ ತಿಂತಾರೆ....

೨೦೬. ಕುದುಕಲಂಬ್ರ ಕುದಿಯೊ ಮುದ್ದೆ
ಇಕ್ಕಾಕೋದ್ರೆ ಕುಕ್ಕಾಕ್ ಬತ್ತಾರೆ....

೨೦೭. ಕುದುರೆ ಕುದ್ರೆಮರಿ
ಕೈಯಾಗೆ ಕ್ಯಾಡ್ಗೆಗರಿ
ಫ್ಯಾಟ್ಯಾಗ್ ಅಪ್ರ್ ಬಲುದೊರೆ....

೨೦೮. ಕುದುರೆ ಮೇಲೆ ಅವ್ರು
ಚದುರದಲ್ಲಿ ನಾವು
ಆನೆ ಮೇಲೆ ಅವ್ರು
ಅಂದಲದಲ್ಲಿ ನಾವು
ಒಂಟೆಮ್ಯಾಲೆ ಅವ್ರು
ಮಂಟಪದಲ್ಲಿ ನಾವು

೨೦೯. ಕುರುಂಕುರುಂ ಸೌತೆಮಿಡಿ
ರಾಯರು ಬರ್ತಾರೆ ಸಂತೆಸೋಡಿ
ಅಂಗಳದಾಗೆ ನಿಂತ್ಕೊಂಡು ತಂಗಿ ಕರಿತಾರೆ....

೨೧೦. ಕುರೋವ್ಕ ಹೊನ್ನಾಳಿಗೂ ಹರ್ದಾರಿ
ಹರ್ದಾರ್ಯಾಗೆ ಗಿರ್ದಾರಿ
ಗಿರ್ದಾರ್ಯಾಗೆ ಕಚೇರಿ
ಕಚೇರ್ಯಾಗೆ ಕುತಗಂಡು
ವಿಚಾರ ಮಾಡ್ತಾರೆ....

೨೧೧. ಕುಲಜಾತಿ ನೆಲಕ್ಕಿಲ್ಲ
ಜಲಕ್ಕೆ ಮೈಲಿಗೆಯಿಲ್ಲ
ಹೊಲೆತನವು ಗುಣಕ್ಕಿಲ್ಲ
ಕಲಿಗೆ ಅಂಜಿಕೆ ಇಲ್ಲ
......ರ ಸಲಿಗೆ ನನಗಿಲ್ಲ

೨೧೨. ಕೃಷ್ಣ ಮಲಪ್ರಭಾ ಕೂಡಿ ಆಯಿತು ಕೂಡಲ ಸಂಗಮ
ಗಂಗಾ ಯಮುನಾ ಸರಸ್ವತಿ ಕೂಡಿ ಆಯಿತು ತ್ರಿವೇಣಿ ಸಂಗಮ
........ರೊಂದಿಗೆ ಆಯಿತು ನನ್ನ ಹೃದಯ ಸಂಗಮ

೨೧೩. ಕೆಂಪುಕ್ಯಾದಿಗೆ ಗುಂಪು ಮಲ್ಲಿಗೆ
ಕಂಪಿನಿಂದ ಮುಡುಸ್ತಾರೆ....

೨೧೪. ಕೆಂಪು ಕಿತ್ಲೆಹಣ್ಣು
ಡೊಂಕು ಬಾಳೆಹಣ್ಣು
ದೇಶ ತಿರುಗಿ ಪಾಸಾಗಿ ಬರ್ತಾರೆ*

೨೧೫. ಕೆರೆನೋಡು
ಕೆರೆಯೊಳ ನೀರು ನೋಡು
ನೀರ್‌ತರೊ ಬಾಲೇರ್ ನೋಡು
ಸಿಂಬಿಮ್ಯಾಲ್ ಕೊಡನೋಡು
ಕೊಡದ ಮ್ಯಾಲೆ ಕೈನೋಡು
ಕೈಯಾಳ ಹಚ್ಚೆ ನೋಡಿ
ಮೆಚ್ಚಿ ಬಂದ್ರು.........

೨೧೬. ಕೈಯಾಗೆ ಕೋಲು
ಕಂಕ್ಳದಾಗೆ ಕೋರಿ
ಅಂಗ್ಳದಾಗೆ ಕೂತುಕೊಂಡು
ಮಗಿನ್ ಆಡುಸ್ತಾರೆ....

---

೨೧೪* ಸೈಕಲ್ ಮ್ಯಾಲೆ ಕುತಗಂಡ್
ಸಲಾಮ್ ತೆಗಿತಾರೆ....



೨೧೭. ಕೈಯಾಗೆ ಕೋಲು
ಬಗಲಾಗೆ ಕೋರಿ
ಅಂಗಳದಾಗೆ ಕೂತ್ಕೊಂಡು
ಮಂಗನ ಆಡಿಸ್ತಾರೆ........

೨೧೮. ಕೈರದೂರಿನ ಹೊಳೆನೋಡು
ಹೊಳೆ ಮುಂದಿನ ತೆರೆನೋಡು
ತಲೆ ಮೇಲಿನ ಮುಸುಕುನೋಡು
ಮುಸುಕಿನ ಮೇಲೆ ಸಿಂಬೆ ನೋಡು
ಸಿಂಬೆ ಮೇಲಿನ ಕೊಡ ನೋಡು
ಕೈಯಾಗ್ನ ಹಚ್ಚೆನೋಡಿ
ಮೆಚ್ಚಿ ಮದುವೆಯಾದ್ರು........

೨೧೯. ಕೊಳ್ಳಾಗೆ ತಾಲಿ ಹೂವಿನ ಮಾಲಿ
ಹೂವಿನಂತ ಹುಡ್ಗಿ ಕಂಡು ಹುಬ್ಬಾರಿಸ್ತಾರೆ.......

೨೨೦. ಕೊರಳಲ್ಲಿ ತಾಳಿ
ಕಿವಿಯಲ್ಲಿ ವಾಲಿ
ದಾರೀಲಿ ಹೋಗ ಹುಡ್ಗೀರ ನೋಡಿ
ಅವರ ಮನಸ್ಸು ವಾಲಿ.......

೨೨೧. ಕೊರ್ಲ್ ಅನ್ನ ಕೊಕ್ಕನ್‌ಸಾರು
ಇಕ್ಕಾಕೆ ಹೋದ್ರೆ ಕುಕ್ಕಾಕೆ ಬರ್ತಾರೆ.......

೨೨೨. ಕೊಲ್ಲಾಪುರದ ಮಹಾಲಕ್ಷ್ಮಿಯ ಬಾಗಿಲಿಗೆ
ಇರುವುದು ತರತರದ ತೋರಣ
.......ರ ಹೆಸರು ಹೇಳುವುದು
ಆರತಿ ಮಾಡಿದ ಕಾರಣ

೨೨೩. ಕೋಗಿಲೆ ಕಂಠ ಚೆಂದ
ನವಿಲಿನ ನಾಟ್ಯ ಚಂದ
ನನಗೆ.......ರೆ ಚಂದ

3

೨೨೪. ಖಡೆಖಡೆ ಚಿನ್ನದ ಕೊಡೆ
ಬೆಳ್ಳಿ ದೌತಿ ಬಂಗಾರದ ಲೇಖನಿ
ಚಿನ್ನದ ಕುರ್ಚಿ ಮ್ಯಾಗೆ
ಕುತಗಂಡ್ ಅರ್ಜಿ ಬರಿತಾರೆ........

೨೨೫. ಗಂಗೆ ಗೌರಿಯಂತ ಮಡದಿನ ಬಿಟ್ಟು
ಹಿತಗೆಟ್ಟಳ ಮನೆಗೆ ಮಾನಗೆಟ್ಟನು ಹೋಗ್ತನೆ........

೨೨೬. ಗದಗದ ಹಳೆ
ಗಜನಿಂಬೆ ಹುಳಿ
ನಮ್ಮೋರ್........ನೋಡ್ತಾರೆ
ನನ್ನ ಹುಳಿ ಹುಳೀ

೨೨೭. ಗವಾಯಿಗಳು ಹಾಡುವಾಗ
ಸ್ವರ ಬದಲಿಸುವುದು ರೂಢಿ
ನಾ ತೆಗೆಯುವುದು ನಮ್ಮವರು
........ರ ಕೋಟಿನ ಬಿರಡಿ

೨೨೮. ಗರ್ಕೆ ಹೊಲ್ದೋರು
ನೆರ್ಕೆ ಮನೆಯೋರು
ಸರ್ಕಾರ್ಕೆಲ್ಲ ದಾರ್ಕಾಸ್ ಕೊಡೋರು........

೨೨೯. ಗಾಂಧಿ ಉಡುವುದು ಮೂರು ಮಳದ ಪಂಚೆ
ನಮ್ಮವರು ಉಡುವುದು ಆರುಮಳದ ಪಂಚೆ........

೨೩೦. ಗಾಂಧಿ ರಾಟೆ
ಭಾಗ್ಯದ ಕೋಟೆ
ಬೈಲಾಗೆ ನಿಂತ್ಕೊಂಡು
ಭಾಷಣ ಮಾಡ್ತಾರೆ........

೨೩೧. ಗಾಂಧೀಜಿ ಬಾಳಿದ್ದು ಸ್ವಾತಂತ್ರ್ಯಕ್ಕಾಗಿ
ನೆಹರು ಬಾಳಿದ್ದು ದೇಶಕ್ಕಾಗಿ
ನಾನು ಬಾಳಿದ್ದು........ರಿಗಾಗಿ



೨೩೨. ಗಾಳಿಗಂಟು
ನೀರಿನ ಮಟ್ಟಿ
ಮೆತ್ತನ್‌ಕಲ್ಲು........

೨೩೩. ಗಿಡದೊಳಗೆ ನುಡಿಯುವುದು ಹಾಲಕ್ಕಿ
ಹಾವೇರಿಯಿಂದ ಬರುವುದು ಯಾಲಕ್ಕಿ
ನಮ್ಮನೇರು........ಬೇಡುವುದು ಚಾ ಅವಲಕ್ಕಿ

೨೩೪. ಗೀಕಿ ಗೀಕಿನವರು
ಗೀಕಿನ ಮೆಟ್ಟಿನವರು
ಹತ್ತು ಕಟ್ಟಿನವರು
ಮುತ್ತಿನ ಚಪ್ಪರದವರು
ಚಾಕ್ರಿಗೆ ಹೋಗುವವರು
ಚುಕುರಿಗೆ ಹೋಗುವವರು
ಅತ್ತಮ್ಮನ ತೊಡೆ ಮೇಲೆ
ಎತ್ತಂಗ ಆಡುವವರು
ಮಾವಯ್ನ ತೊಡೆ ಮೇಲೆ
ಮಾಲಿಂಗ ಆಡುವವರು
ಮಾಳೂರು ಮಂಡಗದ್ದಿಗೆ
ಮದ್ದು ತರುವುದಕ್ಕೆ ಹೋಗ್ಯಾರೋ........

೨೩೫. ಗುಣದಲ್ಲಿ ಹೇಳುವೆ ಗುರುವಿನ ಹೆಸರು
ಮನದಲ್ಲಿ ಹೇಳುವೆ ಮೈದುನನ ಹೆಸರು
ನಗುತಾ ಹೇಳುವೆ ನಾದುನಿ ಹೆಸರು
ಹತ್ತು ಮಂದೀಲಿ ಹೇಳುವೆ ಅತ್ತೆ ಮಾವರ ಹೆಸರು
ನೂರು ಮಂದೀಲಿ ಹೇಳುವೆ ತಂದೆ ತಾಯಿಯರ ಹೆಸರು
ಸಾವ್ರ ಮಂದೀಲಿ ಹೇಳುವೆ ನಮ್ಮವರು........ರ ಹೆಸರು

೨೩೬. ಗುರು ಕೊಟ್ಟಿದ್ದು ಬ್ರಹ್ಮಾಸ್ತ್ರ
ಪತಿಯು ಕಟ್ಟಿದ್ದು ಮಂಗಳ ಸೂತ್ರ
ಮಾಯದಿಂದ ಮಾಲೆ ಹಾಕಿದ್ರು ನನ್ನರಾಯ........

೨೩೭. ಗುಲಾಬಿ ಗುಂಪು
ಮಲ್ಲಿಗೆ ತಂಪು
ನಮ್ಮ ರಾಜ ನಮಗಿಂತ ಕಪ್ಪು........

೨೩೮. ಗುಲಾಬಿ ಹೂವಿನ ಕೆಂಪು
ಮಲ್ಲಿಗೆ ಅರಳ ತನಿಗಂಪು
ಸೇವಂತಿಗೆಯ ಸೊಂಪು
ಸಂಪಿಗೆಯ ಕಂಪು
........ರ ಧ್ವನಿ ನನಗೆ ಬಲು ಇಂಪು

೨೩೯. ಗೋಟಡಿಕೆ ಗೋಣಿಚೀಲ
ಗೋಪುರ್ದಾಗೆ ಕುತಗಂದ್ ಗೋಲಿ ಆಡ್ತಾರೆ........

೨೪೦. ಗೋದಿ ಬಾಕ್ರಿ
ಹೊಸಪೇಟೆ ಸಕ್ರಿ
ಊಟುಕ್ ಸೂರು ಉಪ್ಪಿನಕಾಯಿ
ತ್ವಾಟುಕ್ ಸೂರು ಎಲಿ
ತಾಟಿಟ್ಟು ಊಟುಕ್ ಕರಿಯಾಕ್ ಹೋದ್ರೆ
ಬೂಡ್ಸ್ ಮೆಟಿಗೆಂದ್ ಪ್ಯಾಟಿಗೆ ಹೋಗ್ತಾರೆ........

೨೪೧. ಗೋದಿ ತರುವಳೌಡ್ರು
ರಾಗಿ ಉಣುವಳೌಡ್ರು
ಹರಗಾಕೆ ಹೋಗ್ರಿ ಅಂದ್ರೆ
ತಿರಗಾಕೆ ಹೋಗ್ತಾರೆ........

೨೪೨. ಗೋದ್ವೆ ತರನಾರ್ರು
ಜ್ವಾಳ ಬೀಸ್ನಾರ್ರು
ಉಂಡುಂಡು ಸೂಳೆ ಮನೆಗೋಯ್ತಾರೆ........

೨೪೩. ಗೋಪಾಲ ಕದ್ದದ್ದು ಮೊಸರು
........ರೆಂಬುದು ನನ್ನ ರಾಯರ ಹೆಸರು

೨೪೪. ಗೋಪಿಕಾ ಸ್ತ್ರೀಯರು ಜಲಕ್ರೀಡೆಯಾಡುವಾಗ
ಆಯಿತು ಯಮುನಾ ನದಿಯ ನೀರು ಕಲಕು
........ರ ಹೆಸರು ಹೇಳಿ ಮಾಡುವೆ ಬಲಕು

೨೪೫. ಗೋಪುರಕ್ಕೆ ಕಳಸ ಚಂದ
ಗಿಡಕ್ಕೆ ಹೂವು ಚಂದ
ನನ್ನವರು ನನಗೇ ಚಂದ........



೨೪೬. ಗೋಟಡಿಕೆ ಗೋಣಿ ಚೀಲ
ಗೋಪುರದ ಮೇಲೆ ಕುಳಿತು
ಗೋಲಿ ಆಡ್ತಾರೆ........

೨೪೭. ಚಕ್ಕಂ ಚೋಡಿ ಬೆಂಕಿ ಪುಡಿ
ಕಡೆ ಹೊಲದಲ್ಲಿ ಸೌತೆ ಕುಡಿ
ತಡಿಬ್ಯಾಡಿ ಬುಡಿ........

೨೪೮. ಚಡಂಪುಡಿ ಬೆಂಕಿಪುಡಿ
ಹೆಸ್ರು ಕೇಳ್ದೋರ ಕಣ್ಣಿಗೆ ಕಾರಾಪುಡಿ
ತಡಿಬ್ಯಾಡಿ ಬುಡಿ........

೨೪೯. ಚಾಂಗಣಾ ದೇವಿಯು ತನ್ನ ಮಗನ
ತಲೆಯನ್ನು ಕುಟ್ಟಿ ಹಾಕಿದಳು ಒರಳಲ್ಲಿ
........ರು ಕಟ್ಟಿದ ಮಾಂಗಲ್ಯ
ಶೋಭಿಸುತ್ತಿರುವುದು ನನ್ನ ಕೊರಳಲ್ಲಿ

೨೫೦. ಚಿಕ್ಕ ಚಿಕ್ಕ ಪೆಟ್ಗೆ
ಚಿನಾಲಿ ಪೆಟ್ಗೆ
ಚಿಪ್ಪಲ್ಲಿ ಅಡ್ಕೆ
ಚೀಟಿ ರವ್ಕೆ
ಚಿಕ್ಕ ಮನೇಲಿ ಕೂತ್ಕೊಂಡು
ಲೆಕ್ಕ ಬರೀತಾವ್ರೆ........

೨೫೧. ಚಿಕ್ಕ ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ
........ರಿಗೆ ಹಾಕುವೆ ನಾ ಹೂವಿನ ಮಾಲೆ

೨೫೨. ಚಿನ್ನದ ಒಲೆ ಮ್ಯಾಲೆ
ರನ್ನದ ತಪ್ಲಿ ಮಡ್ಗಿ
ಊದ್ಗಡ್ಡಿ ಒಲೆಗೊಟ್ಟಿ
ಯಾಲಕ್ಕಿ ಅನ್ನ ಮಾಡಿ
ಸಕ್ರೆ ಸಾರು ಮಾಡಿ
ಊಟ ಮಾಡು ಬನ್ನಿ ಅಂದ್ರೆ
ಸುಳಿದಾಡಿಕೊಂಡು ಸೂಳೆ ಮನೆಗೋಯ್ತಾರೆ........

೨೫೩. ಚಿನ್ನದ ತಪ್ಪಲೀಲಿ
ರನ್ನದ ಸೌಟು
ಊದುಗಡ್ಡಿ ಉರಿ
ಚಪ್ಪರದ ದ್ರಾಕ್ಷಿ ತಾಳ್ದ
ಸುಮ್ಮನೆ ಉಂಡು
ಸೂಳೆಮನೆಗೋಗು ಅನ್ನೊವತ್ಗೆ
ಬಾಕ್ಲಲ್ಲಿ ನಿಂತ್ಕೊಂಡು ಜಪ ಮಾಡ್ತಾರೆ........

೨೫೪. ಚೀಟಿ ಸೀರೆ
ಚಿಪ್ಪಲ್ಲಿ ಅಡಕೆ
ಚಿಕ್ಕ ಹುಡ್ಗಿ ಕುಟ್ಟಿ
ಚಕ್ಕಂದ ಆಡ್ತಾರೆ........

೨೫೫. ಚೂಜಿಯಾಗಾಸಿ
ಚೂಜಿ ಕಣ್ಣಾಗಾಸಿ
ದಾರ್ದಾಗಾಸಿ
ಧಾರವಾಡ್ದಾಗಾಸಿ
ಹುಬ್ಬಳ್ಳಿಗಾಸಿ
ಹುರ್ಕಲ್‌ನಾಗಾಸಿ
ಅಡ್ಕೆ ತಗಂದ್ ಕಡ್ಕಿಲ್ ಬರ್ತಾರೆ........

೨೫೬. ಜಗತ್ತಿದ್ದಲ್ಲಿ ನಡೆಯುವುದು ಬ್ರಹ್ಮನ ಸ್ತೋತ್ರ
ಅದಕ್ಕೆ ಬ್ರಹ್ಮನೇ ಪಾತ್ರ
ನನ್ನ ಕೊರಳಿಗೆ........ರು ಕಟ್ಟಿದ್ದು
ಮಾಂಗಲ್ಯ ಸೂತ್ರ

೨೫೭. ಜಟಾಯು ಪಕ್ಷಿ ರಾವಣನಿತ್ತ ಪೆಟ್ಟಿನ ಬಾಧೆಯನ್ನು
ತಾಳಲಾರದೆ ಕಾಯುತ್ತಿತ್ತು ಶ್ರೀರಾಮನ ಬರುವನ್ನು
ಶ್ರೀರಾಮನು ತನ್ನ ಅನುಜನೊಡನೆ ಬಂದನು ಬಹುನೊಂದು
........ರಾಯರ ಹೆಸರು ಹೇಳುವೆನು ಆಲಿಸಿರಿ ನೀವೆಲ್ಲ ಬಂದು

೨೫೮. ಜನಕರಾಜನು ಸೀತೆಯ ಸ್ವಯಂವರಕ್ಕೆ ಸಾರಿದ್ದು ಡಂಗುರ
........ರಿಗೆ ಹಾಕುವೆನು ವಜ್ರದ ಉಂಗುರ



೨೫೯. ಜನರು ಬೇಸಿಗೆಯ ಕಾಲದಲ್ಲಿ ಕುಡಿವರು ಬಹಳ ನೀರು
........ರಿಗೆ ಹಾಕುವೆನು ಪರಿಮಳದ ಪನ್ನೀರು

೨೬೦. ಜವಹರಲಾಲ್ ನೆಹರೂರವರ ಮನಿ
ಯಲ್ಲಿರುವುದು ಬಂಗಾರದ ಗಟ್ಟಿ
ನಮ್ಮ ಮಕ್ಕಳ ಕೈಯಲ್ಲಿ ಕೊಡುವುದು
ಮೊಸರು ರೊಟ್ಟಿ
ನಮ್ಮ ರಾಯರ ಕೈಯಲ್ಲಿ ಕೊಡುವುದು
ಪಾನ್ ಪಟ್ಟಿ

೨೬೧. ಜಾಜಿ ಮಲ್ಲಿಗಿ ಹೂವಿನಂಗ
ಯಾಲಕ್ಕಿ ಹೂವಿನಂಗ
ಬೇವಿನ ಎಸಲಿನಂಗ
ಗೊಂಜಾಳ ತೆನಿಹಂಗ
ನಮ್ಮ ಅತ್ತೆ ಹೊಟ್ಟೆಯಲ್ಲಿ ಹುಟ್ಯಾರ
............ರು ಮುತ್ತಿನಾಂಗ

೨೬೨. ಜಾಲಿ ಮರ ಜೋಲಿ ಹೊಡಿ
ಮುತ್ತಿನ ಕುದ್ರೆ ಮುಂದ್ಕೊಡಿ
ಶ್ರೀಮಂತ್ರ ಮಗ್ಳು ಬರ್ತಾಳೆ
ದಾರಿ ಬಿಡು ಅಂದ್ರೆ ಮಾರಿ ನೋಡ್ತಾರೆ.... ...

೨೬೩. ಜಾಲಿ ಮರ ಜೋಲಿ ಹೊಡಿ
ಮುತ್ತಿನ ಕುದುರೆ ಮುಂದುಕ್ಕೊಡಿ
ಸೆಟ್ರು ಮಗಳು ಪಟ್ಟಣಕೆ ಬರ್ತಾಳೆ
ದಾರಿಬಿಡ್ರಿ ದಾರಿ ಬಿಡ್ರಂತ ಮಾರಿ ನೋಡ್ತಾರೆ........

೨೬೪. ಜಾಲಿ ಮರ ಜೋಲಿ ಹೊಡಿ
ಮುತ್ತಿನ ತಡಿ ಮುಂದಕೆ ನಡಿ
ಅಚ್ಚೇರು ಕಡ್ಲೆ ಪಾವು ಕೊಬ್ಬರಿ
ರಥದಾಗೆ ಕುತ್ಗೊಂಡ್ ಫಲಾರ ಮಾಡ್ತಾರೆ........

೨೬೫. ಜಾಲಿ ಮರ ಲೋಲ್ ಹೊಡ್ದು
ಮುತ್ತಿನ್ ಕುದ್ರೆ ಮುಂದುಕೊಡ್ದು
ನತ್ ತಂಬಾಂದ್ರೆ ನಕ್ಕಂತ ಹೋತಾರೆ........

೨೬೬. **ಟೀ** ಕಾಸಿದಾರೆ
ಟಿಫನ್‌ಗಾಕಿದಾರೆ
ಟೀ ಕುಡಿ ಅಂದ್ರೆ
ತಡಿ ತಡಿ ಅಂತಾರೆ........

೨೬೭. ಟೀ ಕುಡಿಯೋರಲ್ಲ
ಸಿಗರೇಟ್ ಸೇದೋರಲ್ಲ
ಪರಸ್ತ್ರೀ ನೋಡೋರಲ್ಲ
ಪರಮೇಶ್ವರ ಕೊಟ್ಟ ಬುದ್ದೀಲಿ
ಪರ ಉಪಕಾರ ಮಾಡ್ತಾರೆ........

೨೬೮. **ಡೊಂಕ** ಬಾಳೆಹಣ್ಣು ತಿಂದು
ಕೆಂಪು ಕಿತ್ತಲೆ ಹಣ್ಣು ತಿಂದು
ಸಂಪಿಗೆ ಮರದಡಿ ಮಲಗಿ
ಸಂಪೂರ್ಣ ನಿದ್ದೆ ಮಾಡ್ತಾರೆ........

೨೬೯. ತಂತಿ ಮೇಲೆ ತಂತಿ
ಭದ್ರಾವತಿ ಸಂತಿ
ಸಂತೆ ಮಾಡಂದ್ರೆ
ಚಿಂತೆ ಮಾಡ್ತಾರೆ........

೨೭೦. ತಂದೆಯ ವಚನದಂತೆ ಪರಶುರಾಮ
ಹಾರಿಸಿದನು ತಾಯಿಯ ಕುತ್ತಿಗೆ
........ರಾಯರ ಹೆಸರು ಹೇಳುವೆನು........ರ ಅತ್ತಿಗೆ

೨೭೧. ತಗಿ ಬಿಗಿಯೆಂಬ ಸೀರೆ ತಂದಿಲ್ಲ
ತಗರಿಬ್ಯಾಳೆ ಕಾಳಿನಂಗೆ ಹಣ ಸುರ್ದಿಲ್ಲ
ಚಂದ್ರಮನಂತ ಕುದ್ರೆ ಆಯ್ಕಂಡು
ಚಂದುಕ್ಕೆ ಬತ್ತಾರೆ........

೨೭೨. ತಡಿ ಮೇಲೆ ತಡಿ ರಿಬ್ಬನ್‌ದಡಿ
ಸಿನಿಮಾಕೋಗೋಣ ನಡಿ........



೨೭೩. ತಡೆ ಮ್ಯಾಲ್ ತಡೆ
ಕೊತ್ತಂಬರಿ ಮಡೆ
ಏಟ್ ಹೊಡಿತಿ ಹೊಡಿ
ಗದ್ದಿಗೆ ಹೋಗಾನ ನಡಿ........

೨೭೪. ತಡೆ ಮ್ಯಾಲ್ ತಡೆ
ಕೊತ್ತಂಬ್ರಿ ಮಡೆ
ಸಾರಿಗಾಕೋದು ಉಪ್ಪು
ಕಾಫಿ ಕುಡಿಯೋದು ಕಪ್ಪು
ಎಷ್ಟ್ ಹೊಡಿತಿ ಹೊಡಿ
ಮಂದಿ ಕರಿತೇನ್ ತಡಿ........

೨೭೫. ತಡೆ ಮ್ಯಾಲ್ ತಡೆ ನಾಗರ ಹೆಡೆ
ಕಾಪಿಬುಕ್ಕು ಕನ್ನಡದ ಮಾತು
ಕತ್ಲಾಗೆ ಕೂತ್ಕೊಂಡು ಅಕ್ಷರ ಬರಿತರೆ........

೨೭೬. ತಣತಣ ಕುದುರೆ
ಮಿಣಿ ಮಿಣಿ ಮಾತು
ತಲುಕು ತಲಬಾಗಿಲಿಗೂ
ಶಿವನಿಗೂ ಶಿವಪೂಜೆಗೂ
ಅಣ್ಣ ಹನುಮಂತರ ಮನೆಗೆ
ಹೊನ್ನು ಅಳಸಾಕೆ ಬರ‍್ತಾರೆ........

೨೭೭. ತಪದಲ್ಲಿ ಮಗ್ನನಾದ ಧೃವಕುಮಾರನಿಗೆ
ಪರಮಾತ್ಮನು ಕಾಣುವ ಯಜ್ಞ ಬಿಕ್ಷಗಳು ಪ್ರಾಪ್ತವಾದವು
ಶ್ರೀ ನಾರಾಯಣನ ಕರಸ್ಪರ್ಶದಿಂದ
ಆಗ ಧೃವಕುಮಾರನು ಧನ್ಯನಾಗಿ
ಸ್ಥಿರ ಸ್ಥಾನವನ್ನು ಪಡೆದನು
ಪರಮಾತ್ಮನ ಅನುಗ್ರಹದಿಂದ
.... ...ರಾಮರ ಹೆಸರು ಹೇಳುವೆನು
ನಿಮ್ಮೆಲ್ಲರ ಅನುಗ್ರಹದಿಂದ

೨೭೮. ತರಿತರಿ ತೊಗರಿ ಕಡ್ಡಿ ಮುರಿ
ಮನೆ ಹೆಣ್ತಿನ ಮರ‍್ತು
ಕಂಡೋರ ಹೆಣ್ತಿನ ಕರಿತಾರೆ........

೨೭೯. ತಲೆ ಮ್ಯಾಲೆ ಕ್ರಾಪು
ಲಾಂದ್ರ ಸೋಪು
ನಮ್ಮವರಿಗೆ ಬೇಕು
ದಿನಾ ಪನ್ನಿಂಗ್ರಾಪು........

೨೮೦. ತವರು ಮನೆ ಬಿಟ್ಟು ಹೋಗುವಾಗ
ತಂದೆತಾಯಿ ಮನಸ್ಸು ಕಲಕಿತು
........ರ ಪಾದ ನನಿಗೆ ದೊರಕಿತು

೨೮೧. ತಾಟ್ ಮೇಲೆ ತಾಟು
ಹದ್ನಾರ್ ಬಿಸ್ಕೀಟು
ಗೆಳೆಯರ್ನ ಕರ್ಕೊಂಡು
ಪಳಾರ ಮಾಡ್ತಾರೆ........

೨೮೨. ತಾರಿನಲ್ಲಿರುವುದು ತಂತಿ
ಪಾಂಡವರ ತಾಯಿ ಕುಂತಿ
........ರ ಹೆಸರು ಹೇಳುವೆನು ವಿನಂತಿ

೨೮೩. ತಾಲ್ಯಾಗೆ ತಾಲಿ
ಹೂವಿನ ಮಾಲಿ
ಹೂವಿನಂತ ಹುಡ್ಗಿ ಕಂಡು
ಉಬ್ಬಾರಿಸ್ತಾರೆ........

೨೮೪. ತ್ವಾಟಕ್ಕೆ ನೂರು ಎಲೆ
ಊಟುಕ್ಕೆ ಸೇರು ತುಪ್ಪ
ಮಾತು ಮಾತ್ಗೆಲ್ಲ ಕ್ಯಾತೆ ತಗಿತಾರೆ....

೨೮೫. ತ್ವಾಟದಲ್ಲಿ ಸಪ್ಪು ಕಣ್ಕಪ್ಪು
ನಾನೊಪ್ಪಿದ್ದು ತಪ್ಪು........

೨೮೬. ತ್ರೀ × ತ್ರೀ = ನೈನ್
ಮೈ ಹಸ್‌ಬೆಂಡ್ ಈಸ್
ವೆರಿ ಫೈನ್........



೨೮೭. ತುಕಾರಾಮು ಪಂಡರಿ ರಾಯರ ಭಕ್ತ
ನನ್ನ ....ರಾಯರು ನನ್ನಲ್ಲಿ ಅನುರಕ್ತ

೨೮೮. ತುಪ್ಪದ ಬಟ್ಳು
ಮೆಂತೇವ್ದ ಹಿಟ್ಟು
ಏಂತೋರ ಮಗಾಂತ
ಸಂತೋಷಕ್ಕೆ ಕೇಳ್ತರೆ........

೨೮೯. ತೆಳ್ಳನ್‌ರೊಟ್ಟಿ ಗಟ್ಟಿನ್ ತುಪ್ಪ
ನೆಳ್ಳಾಗೆ ಕುತಗಂದ್ ನ್ಯಾಯ ಮಾಡ್ತಾರೆ........

೨೯೦. ತೋಟಕ್ಕೆ ಸಸಿ ಭೂಷಣ
ನಮ್ಮವರು........ರಿಗೆ ಹಚ್ಚುವೆನು ಅರಿಷಣ

೨೯೧. ತೋಟದಾಗೆ ತೋಟ
ಗುಲಾಬಿ ತೋಟ
ತೋಟದಾಗೆ ಕೂತ್ಗಂಡು
ಪೋಟ ಒಡಿತಾರೆ........

೨೯೨. ತೋಟದೊಳಗಿನ ಸೊಪ್ಪು
ಸಾರಿಗೆ ಹಾಕೋದು ಉಪ್ಪು
ನನ್ನ ರಾಜ ನನಿಗಿಂತ ಕಪ್ಪು........

೨೯೩. ತೋಲು ತಲುಬಾಗಿಲು
ಮಸ್ತು ಮಧ್ಯಾಹ್ನ
ಶಿಸ್ತು ಶಿವಪೂಜೆ
ಪರಂಗಿ ತ್ವಾಟದಾಗೆ ಕೂತ್ಗಂಡು
ಫಲಾರ ಹಂಚ್ತಾರೆ........

೨೯೪. ದಪ್ಪನ್‌ರೊಟ್ಟಿ ಕಟ್ಟನ್ ಮೆಣಸಿನಕಾಯಿ
ಕಟ್ಟನ್ ತಿಂದು ಕಟ್ಟೆಕೆಳಗೆ ಉಲ್ಟಾಡ್ತರೆ........

೨೯೫. ದಾರದಲ್ಲವ್ರೆ ದರ್ಬಾರ್ನಲ್ಲವ್ರೆ
ಕಣ್ಣಲ್ಲವ್ರೆ ಕಣ್ಕಪ್ಪಿನಲ್ಲವ್ರೆ
ಕಚೇರಿಲಿ ಕೂತ್ಕೊಂಡು ಇಚಾರ ಮಾಡ್ತಾರೆ........

೨೯೬. ದಾಸರು ಹೇಳುವರು ಹರಿಕಥಾಮೃತ
ವ್ಯಾಸರು ಬರೆದದ್ದು ಮಹಾಭಾರತ
........ರ ಸೇವೆಯಲ್ಲಿಯೇ ನನಗೆ ಪರಮಹಿತ

೨೯೭. ದ್ರಾಕ್ಷಿ ಬೆಳೆಯುವುದು ಕಾಬೂಲ
........ರಿಗೆ ಕೊಡುವೆನು ತಾಂಬೂಲ

೨೯೮. ದಿನನಿತ್ಯ ಬಂದ ಸುಂದರ
ಆಕಾಶದಲ್ಲಿ ಹುಣ್ಣಿಮೆ ಚಂದ್ರ
........ನನ್ನ ಹೃದಯೇಶ್ವರ

೨೯೯. ದುರ್ಗದಾವಣಗೆರೆ ಸುತ್ತ
ರಾಗಿಜೋಳ ಬತ್ತ
ನತ್ತು ಮಾಡ್ಸು ಅಂದ್ರ
ಇತ್ತ ಮುಸುಣಿ ತಿರುವುತಾರೆ........

೩೦೦. ದುಡುಮೆಯಲ್ಲಿ ಜರ್ಮನಿ ಮುಂದ
ಆರ್ಥಿಕದಲ್ಲಿ ಅಮೇರಿಕ ಮುಂದ
ಚಾಣಾಕ್ಷತನಕ್ಕೆ ಬ್ರಿಟೀಷ್ ಮುಂದ
ಹಿಂದೂಸ್ಥಾನ ಇಲ್ರೀ ಹಿಂದ
ಹಡೆಯೋದ್ರಲ್ಲಿ ಆಗೈತೆ ಬಾಳ ಮುಂದ

೩೦೧. ದುರ್ಯೋಧನನು ಬಿದ್ದದ್ದು ನೋಡಿ
ಪಾಂಚಾಲಿಯು ನಕ್ಕಳು ಬಿದ್ದು ಬಿದ್ದು
.... ..ರ ಹೆಸರು ಹೇಳುವೆನು ನಿಲ್ಲಿಸಿ ನಿಮಸದ್ದು

೩೦೨. ದುಶ್ಯಂತ ಶಕುಂತಲೆಯನ್ನು ವಿವಾಹವಾದದ್ದು
ವನದ ಮಧ್ಯದಲ್ಲಿ
........ರ ಹೆಸರು ಹೇಳುವೆನು
ನಿಮ್ಮೆಲ್ಲರ ಮಧ್ಯದಲ್ಲಿ

೩೦೩. ಧೃವಕುಮಾರನು ತಪಸ್ಸು ಮಾಡಿದ್ದು ಮದುವನದಲ್ಲಿ
........ರ ಹೆಸರು ಹೇಳುವೆನು ಸ್ತ್ರೀಯರ ಸಭೆಯಲ್ಲಿ



೩೦೪. ಧೃವನಿಗೆ ನಾರಾಯಣ ಪ್ರತ್ಯಕ್ಷನಾದುದು ಮದುವನದಲ್ಲಿ
........ರಾಯರ ಹೆಸರು ಹೇಳುವೆನು ಸ್ತ್ರೀಯರಮಧ್ಯದಲ್ಲಿ

೩೦೫. ದೊಡ್ಡಕ್ಕಿ ಉಣ್ಣಾರಲ್ಲ
ಸಣ್ಣಕ್ಕಿ ಕ್ಷೀರಾರಲ್ಲ
ಮಾತು ಕೇಳಾರಲ್ಲ
ಮನೆಯಾಗೆ ಇರಾರಲ್ಲ
ಹರಗಾಕೆ ಹೋಗಂದ್ರ
ತಿರಗಾಕೆ ಹೋಗ್ತಾರೆ........

೩೦೬. ನಗಬೇಡ ಅಂತಾರೆ
ನಗೆ ಚಾಟಿ ಹಾರಿಸ್ತಾರೆ
ಬಾಚ್ಕೊ ಅಂತಾರೆ
ಬಾಚಣಿಕೆ ತಿಸ್ತಾರೆ
ಬಣ್ಣದ ಮಾತಾಡ್ತಾರೆ
ಎಣ್ಣೆ ತರಕೆ ಅಳ್ತಾರೆ........

೩೦೭. ನಗಮುರ್ಕ
ಪಟ್ಕಣ್ಣರ್ಕ
ಎತ್ತು ಹೋಗಲ್ಲ ಅಂತ
ಎದೆದೆ ಬಡ್ಕತರೆ........

೩೦೮. ನಡೆಯುವುದಕ್ಕೆ ದಾರಿಚಂದ
ಮುಡಿಯುವುದಕ್ಕೆ ಹೂ ಚಂದ
ಬೆರಳಿಗೆ ಉಂಗ್ರ ಚಂದ
ನನ್ನವರಿಗೆ ನನ್ನ ಪ್ರೀತಿ ಚಂದ........

೩೦೯. ನನ್ನ ಕೈಯಾಗೆ ಬಂಗಾರದ ಬಳೆ
ನನ್ನ ಗೆಳ್ತಿ ಕೈಯಾಗೆ ಕುಪ್ಪೆಬಳೆ
ಹೊಳೆ ಹರಿಲಿಲ್ಲ ಮಕ ತೊಳಲಿಲ್ಲ
ಹುಲ್ಲೆ ಹಾಳಾರ ಮಾತು ನಂಬ್ಲಿಲ್ಲ........

೩೧೦. ನಮ್ ದೇವರಲ್ಲಿ ಹೆಚ್ಚು ಉಮಾಪತಿ
ಸ್ತ್ರೀಯರಲ್ಲಿ ಹೆಚ್ಚು ಆರುಂದತಿ
ಜನ್ಮಜನ್ಮಕ್ಕೂ ಸಿಗಲಿ ನನಗೆ
....... ........ರಂತ ಪತಿ

೩೧೧. ನಮ್ಮೂರಿಗೂ ನಿಮ್ಮೂರಿಗೂ ಹರದಾರಿ
ಹರದಾರಿಗೊಂದು ಕಿರುದಾರಿ
ಕಿರುದಾರಿಗೊಂದು ಕವಲುದಾರಿ
ಕವಲುದಾರಿಗೆ ಕೊತ್ತಂಡು
ಕೈಬೀಸಿ ಕರೀತಾರೆ........

೩೧೨. ನಲ್ಲಿ ಮ್ಯಾಲ್ ಮೊಸ್ರು
ಕೆಳಗ್ ಬಿದ್ರೆ ಕೆಸ್ರು
ಎಲ್ಲಿದ್ರು ಅವರ ಹೆಸ್ರು........

೩೧೩. ನಾಕು ತೋಳಿನ ಅಂಗಿ
ನಾನೂರು ರೂಪಾಯಿ ಸಂಬ್ಳ
ನಾನು ಅಡ್ಡಿಕೆ ಮಾಡಿಸಂದ್ರೆ
ನಾಳೆ ನಾಳೆ ಅಂತಾರೆ........

೩೧೪. ನಾ ತೋರಿದೆ ಪ್ರೀತಿ ಅಪಾರ
ನನ್ನ....ಈಗ ಮಾಡಿದರು ನಿಷ್ಟುರ

೩೧೫. ನಾಯ್ಕನಟ್ಟಿ ಅಡಿಕೆ
ರಾಂಪುರದ ಎಲೆ
ಬಾಯ್ತುಂಬ ಆಕ್ಕಂಡ್
ಕಾಲ್ಗಂಟೆ ಉಗುಳ್ತಳೆ........

೩೧೬. ನಾರಿಯರು ಹಾಕುವುದು ನಾಗರಜಡೆ
ಅದಕ್ಕೆ ಒಪ್ಪುವುದು ಮಲ್ಲಿಗೆ ದಂಡೆ
ನಮ್ಮ ರಾಯರಿಗೆ ಒಪ್ಪುವುದು ಕನ್ನಡ ನುಡಿ........

೩೧೭. ನಾಲ್ಕು ಕಾಲಿನ ಕತ್ತೆ
ನಡೆಯೋಕೆ ಆದತ್ತೆ
........ರಿಗಾಗಿ ನಾನತ್ತೆ



೩೧೮. ನಾವು ಹೋಗದು ನಾಟುಕ್ಕೆ
ಗೋಕಟ್ಟೋದು ಗೂಟುಕ್ಕೆ
ಹೆಸರೇಳೋದು ಜನರ ಕಾಟುಕ್ಕೆ........

೩೧೯. ನೀತಿಯಿಂದ ನಡೆದರೆ ಸಂಸಾರ
ನೀತಿಗೆಟ್ಟು ನಡೆದರೆ ಸಂಹಾರ
........ರ ಸೇವೆಯಲ್ಲಿ ನನ್ನ
ಮನವು ಯಾವಾಗಲೂ ನಿರ್ಧಾರ

೩೨೦. ನೀರಿಡಿದು ದಾರಿಯಾಯಿತು
ದಾರಿಹಿಡಿದು ಮೆರವಣಿಗೆಯಾಯಿತು
........ರ ಕೈಹಿಡಿದು ಮದುವೆಯಾಯಿತು

೩೨೧. ನುಡಿಯುವುದು ಸತ್ಯ
ನಡೆಯುವುದು ಸದಾಚಾರ
ಪತಿಯಲ್ಲಿ ಭಕ್ತಿ
ಪತಿಯಿಂದಲೇ ಮುಕ್ತಿ
........ರ ಹೆಸರು ನನಗೆ ಸರಸೋಕ್ತಿ

೩೨೨. ನುಚ್ಚು ಮುದ್ದೆ
ಕುಚ್ಚಿನ ಮೀನ್ ಸಾರು
ಅಂಬ್ರ ಇಕ್ಕಾಕೆ ಹೋದ್ರೆ
ಕುಕ್ಕಾಕೆ ಬತ್ತಾರೆ........

೩೨೩. ನೆರೆನೆರೆದು ಗಿಡ ಬೆಳೆಯಿತು
ಧಾರೆಯೆರೆದು ಮದುವೆಯಾಯಿತು
ಊರು ನೆರೆದು ಸಂಭ್ರಮವಾಯಿತು
ನಾನು ನಮ್ಮವರಿಗೆ ಬೆರೆತು
ನನ್ನ ಜನ್ಮ ಪವಿತ್ರವಾಯಿತು........

೩೨೪. ಪಂಪ ಬರೆದದ್ದು ಹಳಗನ್ನಡ ಕಾವ್ಯ
........ರಿಗೆ ಹಚ್ಚುವೆನು ಪರಿಮಳ ದ್ರವ್ಯ

೩೨೫. ಪಂಜಾಬಿನಲ್ಲಿ ಬಹಳ ಬೆಳೆಯುವರು ಗೋದಿ
........ರಾಯರ ಹೆಸರು ಹೇಳುವೆನು ಬಿಡಿರಿ ಹಾದಿ

೩೨೬. ಪಟ್ ಪಟ್ ಅಂಗಿ ಪಾವುಗಜ್ಜೆ
ಪಾತರ ಸೂಳೆ ಕರ್ಕಂಡು ಪೇಟೆಗೆ ಹೋಗ್ತರೆ........

೩೨೭. ಪರದೇಶದಲ್ಲಿ ಭಾರತದ ತತ್ವಜ್ಞಾನ ಬೀರಿಪವರು ವಿವೇಕಾನಂದ
ನನಗೆ........ರಿಂದಲೆ ಸರ್ವದಾನಂದ

೩೨೮. ಪರಮೇಶ್ವರನ ಪೂಜೆ ಮಾಡೋದು ಬಕುತಿಗೆ
ಸರಸತಿ ಪೂಜೆ ಮಾಡೋದು ವಿದ್ಯೆಗೆ
ಬಸವಣ್ಣನ ಪೂಜೆ ಮಾಡೋದು ಬುದ್ಧಿಗೆ
ನಾವು ನಮ್ಮ ರಾಯರ ಹೆಸರು ಹೇಳೋದು
ನಮ್ಮ ಮಾಂಗಲ್ಯಕ್ಕೆ........

೩೨೯. ಪರಪೂರ್ವದ ಪಂಚೆ ಉಡುವರಲ್ಲ
ಪರಸ್ತ್ರೀಯರನ್ನು ಕಣ್ಣೆತ್ತಿ ನೋಡುವರಲ್ಲ
ಪರಮಾತ್ಮ ಕೊಟ್ಟ ಬುದ್ಧಿ ಬುಡುವರಲ್ಲ........

೩೩೦. ಪರೀಕ್ಷಿತನಿಗೆ ಕಡಿದದು ತಕ್ಷಕನೆಂಬ ಹಾವು
........ರಿಗೆ ಕೊಡುವೆ ಗುಲಾಬಿ ಹೂವು

೩೩೧. ಪರ್ವತರಾಜನ ಮಗಳಾದ ಪಾರ್ವತಿಯು
ಪರಮೇಶ್ವರನೇ ಪತಿಯಾಗಬೇಕೆಂದು
ತಪಸ್ಸು ಮಾಡಿದಳು ಶಿವನಾಮ ಭಜಿಸಿ
........ರಾಯರನ್ನು ಪಾಣಿಗ್ರಹಣ ಮಾಡಿಕೊಂಡೆನು
ತವರು ಗೃಹ ತ್ಯಜಿಸಿ

೩೩೨. ಪಾಂಡವರಿಗೂ ಕೌರವರಿಗೂ ಮೊದಲಿನಿಂದಲೂ ಹಗೆ
ನನಗೆ ಸಂತೋಷ ಕೊಡುವುದು........ರ ಮುಗಳುನಗೆ

೩೩೩. ಪಾಂಡವರು ಅರಗಿನ ಮನೆಯಿಂದ ಪಾರಾದದ್ದು ಮುಕ್ತಿಯಿಂದ
ಹನುಮಂತನು ಸೇತುವೆ ಕಟ್ಟಿದ್ದು ಶಕ್ತಿಯಿಂದ
........ರ ಹೆಸರು ಹೇಳುವೆನು ಪ್ರೀತಿಯಿಂದ

೩೩೪. ಪಾಂಡವರು ಕೌರವರು ಆಡಿದ್ದು ಪಗಡೆಯಾಟ
ನಾನು ನಮ್ಮವರು ಆಡುವುದು ಸರಿಬೆಸದ ಆಟ........



೩೩೫. ಪಾದದಾಗೆ ಪಾರ್ವತಿ
ಊಟದಾಗೆ ಸರಸ್ವತಿ
ಏಕಾಂತದಾಗೆ ಕೂತ್ಗಂಡ್
ಶ್ರೀಕಾಂತ ಬತ್ತಾನೆ........

೩೩೬. ಪಾರ್ವತಿ ಮುಡಿವುದು ಮಲ್ಲಿಗೆ ಮುಡಿ
ಪರಮೇಶ್ವರನ ಕೊರಳಲ್ಲಿ ಇರುವುದು ನಾಗರಹೆಡಿ
ನಾನು ಹೆಸರ ಹೇಳುವುದು ಅವರ ಕಳಸಡಿ........

೩೩೭. ಪಾವು ಶೇಂಗಾ ಪಾವು ಬೆಲ್ಲ
ಪಯ್ಯಾನಿಯಲ್ಲಿ ಕೂತು ಫಳಾರ ಮಾಡ್ತಾರೆ........

೩೩೮. ಪುಟ್ಟದ್ಲಿ ತಟ್ಟಬ್ಣ
ಅಕ್ಕತಂಗೇರ್ಗೆ ಪಟ್ಟಿ ಮಾಡ್ಸಕೋಗವ್ರೆ........

೩೩೯. ಪೈಗಂಬರ್ ವಾಸವಾಗಿರುವುದು ಮಕ್ಕ
........ಗೌಡರ ಹೆಸರೇಳುವೆನು........ರ ಅಕ್ಕ

೩೪೦. ಬಂಗಾರದ ಒಲೆ ಮೇಲೆ
ಬೆಳ್ಳಿ ತಪ್ಲಿ ಮಡ್ಗಿ
ಊದ್ಗಡ್ಡಿ ಉರಿ ಮಾಡಿ
ಯಾಲಕ್ಕಿ ಅನ್ನ ಮಾಡಿ
ಸಕ್ರೆ ಸಾರು ಮಾಡಿ
ಊಟುಕ್ಕೆ ಕರೆಯೋಕೋದ್ರೆ
ಸುಳಿದಾಡ್ಕೊಂಡು ಸೂಳೆ ಮನೆಗೋಯ್ತಾರೆ........

೩೪೧. ಬಂಗಾರ್ದ ಒಲೆ ಹೂಡಿ
ಬೆಳ್ಳಿ ತಪ್ಲೆ ಇಟ್ಟು
ಊದ್ಗಡ್ಡಿ ಉರಿ ಮಾಡಿ
ಕರ್ಪೂರ್ದ ಚಟ್ನಿ ಮಾಡಿ
ಬಾದಾಮಿ ಸಾರ್ಮಾಡಿ
ಊಟಕ್ಕೆ ಬರ್ರಿ ಅಂದ್ರೆ
ಹುಬ್ಬಳ್ಳಿ ನಾಟುಕೋಯ್ತಾರೆ.......

೩೪೨. ಬಂಗಾರದ ಕೊರಿಗೆ
ಬೆಳ್ಳಿ ತಲುವು
ಎರೆ ಬತ್ತಿ ದೊರೆ ಬರ್ತ್ರೆ........

೩೪೩. ಬಂಗಾರದ ಬದನೆಕಾಯಿ
ಸಿಂಗಾರದ ಜವಳಿಕಾಯಿ
ಗಲ್ಗಲ್ಲಿ ನೀಡ್ತಿದಂಗೆ
ಮೆಲ್ಮೆಲ್ಗೆ ನ್ಯಾಯ ತಗೀತಾರೆ........

೩೪೪. ಬಂಗಾರದ ಮೇಲೆ ಇಷ್ಟವಿಲ್ಲ
ಶೃಂಗಾರದ ಮೇಲೆ ಇಷ್ಟವಿಲ್ಲ
ರಂಗಾಗಿ ನನ್ನ ರಾಯ ಮಾತಾಡುವಾಗ
ನನ್ನ ಅವರ ಪ್ರೇಮ ಅಮರ........

೩೪೫. ಬಂದನು ಬಂದನು ಸರದಾರ
ಐನೂರು ಹುಡುಗರ ನೆಚ್ಚಿನಕಾರ
........... ನನ್ನ ಪ್ರಿಯಕರ

೩೪೬. ಬಟ್ಟನ್‌ರೊಟ್ಟಿ ನೆಟ್ಟನ್ ಮೆಣಸಿನಕಾಯಿ
ಕಟ್ಟನೆ ಕಡಿದು ಕಟ್ಟಿ ಕೆಳಗೆ ಬಿದ್ರು........

೩೪೭. ಬದ್ನೇಕಾಯಿ ಬರ್ತ
ಉಳ್ಳಾಗಡ್ಡಿ ಕೊರ್ತ
ಅರ್ಕಟ್ಟು ಮರ್ಕಟ್ಟು
ಮರಕ್ಕೆ ಮೂವತ್ತು ಕಟ್ಟು
ನನ್ನ ಹೆಸರು ಕೇಳ್ದೋರ ಎಡಮುರಗಿಕಟ್ಟು........

೩೪೮. ಬನಕ್ಕೆ ಗಿಡಗಳು ಚೆಂದ
ಬಳ್ಳಿ ವೃಕ್ಷಕ್ಕೆ ಚೆಂದ
ಶೀಲ ನಾರಿಗೆ ಚೆಂದ
ತಾಳ ಹಾಡಿಗೆ ಚೆಂದ
ನಾ ಚೆಂದ ನಮ್ಮ...........ರಿಗೆ

೩೪೯. ಬರಿ ಆಡಂಬರಕೆ ತಿರಸ್ಕಾರ
..........ರಿಗೆ ಮಾಡುವೆ ನಮಸ್ಕಾರ.



೩೫೦. ಬಲಕ್ಕೆ ಬಂಗಾರದ ದೀವಟಿಗೆ
ಎಡಕ್ಕೆ ತುಪ್ಪದ ದೀವಟಿಗೆ
ಬಂಗಾರದ ಕೋಣೇಲಿ ಕೂತ್ಕೊಂಡು
ಶಿವಪೂಜೆ ಮಾಡ್ತಾರೆ........

೩೫೧. ಬಸವಣ್ಣನವರು ಹುಟ್ಟಿದ್ದು ಕಲ್ಯಾಣಕ್ಕಾಗಿ
ಗಾಂಧೀಜಿ ಹುಟ್ಟಿದ್ದು ಸತ್ಯಕ್ಕಾಗಿ
...........ರು ಹುಟ್ಟಿದ್ದು ವರದಕ್ಷಿಣೆಗಾಗಿ

೩೫೨. ಬಸವಣ್ಣ ಮಾಡಿದ್ದು ದೇಶೋದ್ಧಾರ
ಗಾಂಧೀಜಿ ಮಾಡಿದ್ದು ಹರಿಜನೋದ್ಧಾರ
...........ರು ಮಾಡಿದ್ದು ನನ್ನ ಜನ್ಮೋದ್ಧಾರ

೩೫೩. ಬಸವಣ್ಣ ಹುಟ್ಟಿದ್ದು ಬಾಗೇವಾಡಿ
ಗಾಂಧಿ ಹುಟ್ಟಿದ್ದು ಸರೋಜವಾಡಿ
ಸುಭಾಷ್ಚಂದ್ರ ಹುಟ್ಟಿದ್ದು ಕ್ರಾಂತಿವಾಡಿ
ನೆಹರು ಹುಟ್ಟಿದ್ದು ಕಾಂತಿವಾಡಿ
ನಾನು ಹುಟ್ಟಿದ್ದು...........ರಿಗೆ ಜೋಡಿ

೩೫೪. ಬ್ರಹ್ಮಚಾರಿ ಎನ್ನಬೇಕು
ಸೋಲೋರಿಪುರದ ರುದ್ರಮ್ಮಗೆ
ಶಿವಾಚಾರಿ ಎನ್ನಬೇಕು
ದಾವಣಗೆರೆ ಶಿವಪಾರ್ವತಮ್ಮಗೆ
ಸದಾಚಾರಿ ಎನ್ನಬೇಕು
ನಮ್ಮ ರಾಯರಿಗೆ........

೩೫೫. ಬ್ರಹ್ಮ ವಿಷ್ಣು ಮಹೇಶ್ವರರು ಬಾಲರೂಪ ಪಡೆದದ್ದು
ಅನಸೂಯಾದೇವಿಯ ಸತ್ಯಕ್ಕಾಗಿ
...........ರ ಹೆಸರು ಹೇಳುವೆನು
ನಿಮ್ಮೆಲ್ಲರ ಅಪೇಕ್ಷೆಗಾಗಿ

೩೫೬. ಬಳ್ಳಾರಿ ಅಂಬೋದು ಬಲು ಸಿತ್ತಾರ
ಮುತ್ತಿನ ಬಜಾರ
ಒಂಟಿ ಮ್ಯಾಲೆ ಕುಂತಾರೆ

ಕಂಠಿಹಾರ ಹಿಡದಾರೆ
ಬಾಗ್ಲಲ್ಲಿ ನಿಂತಾರೆ
ಬಾಳೆಗೊನೆ ಹಿಡುದಾರೆ
ಬಲವಂತರ ಮಗ ಬರ್‍ತಾರೆ
ಬಾಗಿಲು ಬಿಡ್ರಿ........

೩೫೭. ಬಳ್ಳಾರಿ ಎಂಬೋದು ಬಡಿವಾರ
ಮುತ್ತಿನ ಬಜಾರ
ಅಂಗಡಿಯಾಗೆ ನಿಂತಿದಾರೆ
ಅಡ್ಕೆಗೊನೆ ಹಿಡ್ದಿದಾರೆ
ಬಾಗ್ಲಾಗೆ ನಿಂತಿದಾರೆ
ಬಾಳೆಗೊನೆ ಹಿಡ್ದಿದಾರೆ
ಒಂಟೆ ಹತ್ತಿದಾರೆ
ಕಂಟಿ ಸರ ಹಾಕಿದಾರೆ
ಭಾಗ್ಯವಂತ ಮಗಳು
ಬರುತಾರಂತ ಬಾಗ್ಲು ಬುಡ್ತರೆ........

೩೫೮. ಬಳ್ಳಾರಿ ತನ್ಕ ಬೆಳ್ಳಗಿರಬೇಕು
ಮೈಸೂರು ತನ್ಕ ಮಾತಿರಬೇಕು
ಕುರ್ಚಿ ಮೇಲೆ ಕುಂತಿರಬೇಕು
ಸೂಳೇರ ಮೇಲೆ ಕಣ್ಣಿರಬೇಕು
ನಮ್ಮ ಮೇಲೆ ಪ್ರೀತಿ ಇರಬೇಕು........

೩೫೯. ಬಳ್ಳಿಕಟ್ಟಿಗು ದಂಡಿನ ಶಿವರಕ್ಕೂ ಒಂದು ಹರ್ದಾರಿ
ಹರ್ದಾರಿಲೊಂದು ಕಿರ್ದಾರಿ
ಕಿರ್ದಾರಿಲೊಂದು ಕಚೇರಿ
ಕಚೇರಿ ಒಳ್ಗೆ ಇಚಾರ್ಣೆ ಮಾಡ್ತಾರೆ........

೩೬೦. ಬಾಗಿಲಲ್ಲಿ ನಿಂತಾರ
ಬಾಳಿಗೊನಿ ಹಿಡಿದಾರ
ಸರಿರಿ ಎಂದರೆ ಸೆರಗ ಹಿಡಿದಾರ........

೩೬೧. ಬಾಯಿ ತುಂಬ ಇಳ್ಳೀವು ಹಾಕಿರಬೇಕು
ಬಂಗಾರ ಕುರ್ಚಿ ಮೇಲೆ ಕುಂತಿರಬೇಕು
ಇಂಗ್ಲಿಷ್ ಪುಸ್ಕ ಓತ್ತಿರಬೇಕು
ನಮ್ಮ ಮೇಲೆ ಮನಸಿರಬೇಕು
ಸೂಳೆ ಮೇಲೆ ಕಣ್ಣಿರಬೇಕು........



೩೬೨. ಬಾಯಿ ಬಂಗಾರ
ತುಟಿ ಸಿಂಗಾರ
ಹಲ್ಲು ಯಾಲಕ್ಕಿ
ಮಾತು ಮದ್ರಾಸು
ಗಲ್ಲ ಕಮಲದ ಹೂವು
ಅಕ್ಕನ ಜೋಡೀಲಿ ಲೆಕ್ಕಲ್ದೆ ಮಾತಾಡ್ತರೆ
ತಂಗಿ ಜೋಡೀಲಿ ರಂಗಿನಿಂದ ಮಾತಾಡ್ತರೆ
ತಕ್ಕಂತ ಮಡದಿ ಜೋಡೀಲಿ ಕೆಕ್ಕರಸ್ತ ಮಾತಾಡ್ತರೆ....

೩೬೩. ಬಾವಿ ಕಟ್ಟೆ ಮೇಲೆ
ಬಂಗಾರದ ಒಲೆಗುಂಡೂಡಿ
ಬೆಳ್ಳಿ ತಪಾಲೆ ಇಕ್ಕಿ
ಊದಿನ್ ಕಡ್ಡಿ ಉರೆ ಮಾಡಿ
ಅವಲಕ್ಕಿ ಅನ್ನ ಮಾಡಿ
ಸಬ್ಬಸ್ಗೆ ಸಾರ್ ಮಾಡಿ
ಉತ್ತುತ್ತೆ ಹುಳಿ ಮಾಡಿ
ಸಬ್ಬಕ್ಕಿ ಹುಗ್ಗಿ ಮಾಡಿ
ಉಟುಕ್ಕೆ ಬಾ ಅಂದ್ರೆ
ಹುಬ್ಬಳ್ಳಿ ನಾಟುಕ್ಕೋಕ್ತಾರೆ....

೩೬೪. ಬಾಳು ಉಳ್ಳವರ ಮಗಳು
ಭಾಗ್ಯವಂತರ ಸೊಸೆ
ಭಾಗ್ಯಲಕ್ಷ್ಮಿ ಬಂದಳೆಂದು
ಬಲಗೈಹಿಡಿದು ಭಾಷಣ ಮಾಡ್ತಾರೆ....

೩೬೫. ಬಾಳುಳ್ಳೋರ ಮಗ್ಳು ಬಾಳ್ತಾರೆ
ಉತ್ತಮರ ಮಗ್ಳು ಉತ್ತುತ್ತೆತಾರೆ
ಹೆಸರು ಕೇಳೋಳು ಮುಂದಕ್ಕೆ ಬಾರೆ....

೩೬೬. ಬಿಂದು ನಾದಗಳೆಂಬ ನಂದನವನವುಂಟು
ವನದಲ್ಲಿ ಹೂವಿನ ಬನವುಂಟು

ಬನದಲ್ಲಿ ಪ್ರಶಾಂತ ದೇಗುಲವುಂಟು
ನನಗೂ ನನ್ನ........ರಾಯರಿಗೂ
ಜನ್ಮಜನ್ಮದ ನಂಟುಂಟು.

೩೬೭. ಬಿಸ್ಲು ಬಿಸ್ಲು ಕಾಯ್ತಿರಬೇಕು
ಪಾತುರ್ ಪಂಚೆ ಉಟ್ಟಿರಬೇಕು
ಹುಬ್ಬಳ್ಳಿ ಸೂಳೆ ಇಟ್ಟಿರಬೇಕು
ಧಾರವಾಡದ ಸೂಳೆ ಬಿಟ್ಟಿರಬೇಕು
ದಾವಣಗೆರೆ ಸಂತೆ ನೆರ್ದಿರಬೇಕು
ಪಾವಕ್ಕಿ ಅವುಸ್ತಿರಬೇಕು
ಲೆಕ್ಕ ತಿಳೀಲಿಲ್ಲ ಅಂತ
ಅವ್ರಕ್ಕ ತಂಗೇರ ಕರೀತಾರೆ....

೩೬೮. ಬೀಜ ಬಿನ್ನಾರ ಹೂ ಚಿತ್ತಾರ
ನಮ್ಮ ಮನೆಯವರ ಹೆಸರು ಬಂಗಾರ....

೩೬೯. ಬುಗುಡಿಗೆ ಮುತ್ತೆ ಚಂದ
ಹುತ್ತಕ್ಕೆ ಹಾವೆ ಚಂದ
ನಮ್ಮ ರಾಯ್ರು........ನಮಗೆ ಚಂದ

೩೭೦. ಬೂಟ್ ಕಾಲಲ್ಲಿ
ಹ್ಯಾಟ್ ಮೈಯಲ್ಲಿ
ಊಟಕ್ಕೆ ಬರ್‍ರಿ ಅಂದ್ರೆ
ಬೂಟ್ ಹಾಕ್ಕಂಡ್ ಪ್ಯಾಟ್ಯಾಕೆ ಹೋಗ್ತಾರೆ....

೩೭೧. ಬೂರೆ ನನ್ನ ಗಂಡ ಬುಗುಡಿ ಮಾಡಿಸಂದ್ರೆ
ಕಠಾರಿ ತಾರೆ ಖಡ್ಗ ಮಾಡುಸ್ತೀನಿ ಅಂತಾರೆ....

೩೭೨. ಬೃಂದಾವನದಲ್ಲಿ ನಲಿದ ಮೋಹನ ಮೂರುತಿ
ಉಡುಪಿಯಲ್ಲಿ ನಿಂದ ಕೃಷ್ಣಮೂರುತಿ
ನನ್ನ ಹೃದಯದಲ್ಲಿ ನೆಲೆಸಿರುವ........ಮೂರುತಿ

೩೭೩. ಬೆಂಗ್ಳೂರಂಬಾದು ಬಲು ಸಿತ್ತಾರ
ಮುತ್ತಿನ ಬಜಾರ



ಬಜಾರದಾಗೆ ಒಂದು ಬಾವಿ
ಬಾವಿಗೋಗ ಹುಡ್ಗಿ ನೋಡಿ
ಹುಡ್ಗಿ ಕೈಯಾಗ್ಳ ಕೊಡ ನೋಡಿ
ಕೊಡ್ದ ಮೇಗ್ಳ ಕೈ ನೋಡಿ
ಕೈ ಮೇಗ್ಳ ಹಚ್ಚೆ ನೋಡಿ
ಹಚ್ಚೆ ನೋಡಿ ಮೆಚ್ಚಿ ಬಂದ್ರು........

೩೭೪. ಬೆಂಗಳೂರು ಸ್ಟೇಷನ್
ಬೊಂಬಾಯಿ ಜಂಕ್ಷನ್
........ರು ಮೆಟ್ರಿಕುಲೇಷನ್

೩೭೫. ಬೆಳದಿಂಗಳ ಬೆಳಕು
ಕಲ್ಲುಸಕ್ಕರೆ ಥಳಕು
ನಕ್ಷತ್ರದ ಬೆಳಕಲ್ಲಿ ಅಕ್ಷರ ಬರಿತಾರೆ........

೩೭೬. ಬೆಳದಿಂಗಳ ಬೆಳಕು
ಕಲ್ಲುಸಕ್ಕರೆ ಹಳಕು
ನಮ್ಮ........ರ ಮುಖ ಥಳಕು

೩೭೭. ಬೆಳ್ಳಿ ತಲುವು
ಬಂಗಾರದ ಕೂರಿಗೆ
ಎರೆ ಹೊಲ್ದ ಮೇಲೆ
ದೊರೆ ಮಗನಂಗೆ ಬರ್‍ತರೆ........

೩೭೮. ಬೆಳ್ಳಿ ಪಾತ್ರೇಲಿ
ಅವಲಕ್ಕಿ ಅನ್ನ ಮಾಡಿ
ದ್ರಾಕ್ಷಿ ಪಲ್ಯೆ ಮಾಡಿ
ಬಾದಾಮಿ ಚಟ್ನಿ ಅರೆದು
ಊಟಕ್ಕೆ ಕರೆಯಕ್ಕೆ ಹೋದ್ರೆ
ಹುಬ್ಬಳ್ಳಿ ಜಾತ್ರೆಗೆ ಹೋಗ್ತಾರೆ........

೩೭೯. ಬೆಳ್ಳಿ ಪೆನ್ನು ಬಿಳಿ ಕಾಗದ
ಹಳ್ಳಿ ಹಳ್ಳಿ ತಿರುಗಿ
ಒಳ್ಳೇರು ಅನಿಸಿಕೊಳ್ತಾರೆ........

೩೮೦. ಬೆಳ್ಳಿ ಸೀರೆ ಬಂಗಾರದ ಪಟ್ಟಿ
.......ರು ತರಲಿಲ್ಲ
ನಾನು ಉಡಲಿಲ್ಲ

೩೮೧. ಬೆಳ್ಳಿ ಹಗ್ಗ
ಬಂಗಾರ್ದ ತೊಟ್ಲು
ಕಂದನ್ ತೂಗಿ
ಮುಂದಕೆ ಬರ್ತ್ತರೆ........

೩೮೨. ಬೇಲಿ ಮ್ಯಾಲ್ ಚಿತ್ತ
ಬಾವನ ಮ್ಯಾಲೆ ಗ್ಯಾನ
........ರ ಮ್ಯಾಲೆ ನನ ಗ್ಯಾನ

೩೮೩. ಭಕ್ತಿ ಇರುವುದು ಮನದಲ್ಲಿ
ದೇವರು ಇರುವುದು ನೆನೆದಲ್ಲಿ
ತಾಳಿ ಇರುವುದು ಕೊರಳಲ್ಲಿ
ಕುಂಕುಮ ಇರುವುದು ಹಣೆಯಲ್ಲಿ
ನಾನು............ರ ಹೆಸರು ಹೇಳುವುದು ಮನೆಯಲ್ಲಿ

೩೮೪. ಭಕ್ತಿಯಿಂದ ಹೇಳುವೆನು ಗುರುಗಳ ಹೆಸರು
ಸತ್ಯದಿಂದ ಹೇಳುವೆನು ಅತ್ತೆ ಮಾವರ ಹೆಸರು
ಮನದಿಂದ ಹೇಳುವೆನು ಮೈದುನರ ಹೆಸರು
ಪ್ರೀತಿಯಿಂದ ಹೇಳುವೆನು ಪತಿರಾಯರ ಹೆಸರು........

೩೮೫. ಭಾರತಕ್ಕೆ ಸ್ವಾತಂತ್ರ ಸಿಕ್ಕಿದ್ದು
ಹದಿನೈದನೆ ಆಗಸ್ಟ್
.......ರ ಹೆಸರು ಹೇಳುವೆನು
ಕನ್ನಡದಲ್ಲಿ ಸ್ಪಷ್ಟ

೩೮೬. ಭಾರತ ಜಾಗೃತವಾಯಿತು ವಿವೇಕಾನಂದರಿಂದ
ಸ್ವಾತಂತ್ರ್ಯ ಪಡೆಯಿತು ಗಾಂಧೀಜಿಯವರಿಂದ
ಆಧ್ಯಾತ್ಮ ಜಾಗೃತವಾಯಿತು ಶ್ರೀ ಅರವಿಂದರಿಂದ
ಅಭಿವೃದ್ಧಿ ಪಡೆಯಿತು ನೆಹರೂಜಿಯವರಿಂದ



ಹಸಿರು ಕ್ರಾಂತಿಯಾಯಿತು ಶಾಸ್ತ್ರೀಜಿಯವರಿಂದ
ನನಗೆ ಸಕಲ ಸಂಪತ್ತು ದೊರಕಿತು............ರಿಂದ

೩೮೭. ಭಾರತಮಾತೆಯ ಕೊರಳಲ್ಲಿ
ಝಗಝಗಿಸಿದ್ದು ನವರತ್ನದ ಪಲಕ
........ರಿಗೆ ಕೊಡುವುದು ತಾಂಬೂಲ ತಬಕ

೩೮೮. ಭೀಮಸೇನನಿಂದ ಮಡಿದನು ಜರಾಸಂಧ
............ರಿಗೆ ಹಚ್ಚುವೆನು ಶ್ರೀಗಂಧ

೩೮೯. ಭೂಮಿಗೆ ಸಸಿಯೇ ಚಂದ
ಸರ್ವರಿಗೆ ಕಮಲವೇ ಚಂದ
ರಾಮನಿಗೆ ಸೀತೆಯೇ ಚಂದ
ನಮಗೆ ನಮ್ಮ ರಾಯರೇ ಚಂದ........

೩೯೦. ಭೂಮಿಗೆ ಹಸಿರೇ ಚಂದ
ನಾರಿಗೆ ಬಸಿರೇ ಚಂದ
ಬಾಳೆಗೆ ಗೊನೆಯೇ ಚಂದ
ಊಟಕ್ಕೆ ಎಲೆಯೇ ಚಂದ
ನನಗೆ...........ರೇ ಚಂದ

೩೯೧. ಮಂಚದ ಮ್ಯಾಲೆ ಕೂತ್ಕೊಂಡು
ಮೊಮ್ಮಕ್ಳ ಆಡಿಸ್ತಾರೆ........

೩೯೨. ಮಂಜಿನ ಅಂಗಿ
ಮದುರೆ ರುಮಾಲು
ಸಂಜೆ ಬೆಳಕಿನಾಗೆ
ಚಂದ್ರುನಂಗೆ ಹೊಳಿತಾರೆ.......

೩೯೩. ಮಂತ್ರಾಲಯದಲ್ಲಿ ಪಠಿಸುವುದು
ರಾಘವೇಂದ್ರ ಸ್ತೋತ್ರ
........ರು ತಮ್ಮ ಕರಗಳಿಂದ ಕಟ್ಟಿದುದು
ಸೌಭಾಗ್ಯ ಪ್ರದವಾದ ಮಂಗಳ ಸೂತ್ರ.

೩೯೪. ಮಕ್ಕಳ ಆಟವು ಚಂದ
ಮೈಸೂರು ನೋಡಲು ಚಂದ
ಎಲ್ಲಕ್ಕೂ ಮಿಗಿಲು ನನ್ನವರ ಅಂದ........

೩೯೫. ಮಡಕೆ ಇದ್ದರೆ ಮೊಸರು
ಕೆಳಗೆ ಬಿದ್ದರೆ ಕೆಸರು
........ಅವರ ಹೆಸರು*

೩೯೬. ಮನಸ್ಸು ಮಾಣಿಕ್ಯ
ತುಟಿ ರುದ್ರಾಕ್ಷಿ
ಗೆಳೆಯರ ಕೂಡ ನಕ್ಕೋಂತ ಬರುತಾರ........

೩೯೭. ಮರಸೈಜ್ ಪಂಚೆ ಉಡೋರಲ್ಲ
ಬಿನ್ನಿ ಬಟ್ಟೆ ತೊಡೋರಲ್ಲ
ಅಡ್ಕೆ ಆಕ್ಕೊಂಡ್ ಕಿಡ್ಕ್ಯಾಗೆ ನೋಡ್ತಾರೆ........

೩೯೮. ಮಲ್ ಮಲ್ಲಂಗಿ ತೊಟ್ಟಿರಬೇಕು
ತೂತ್ಕಲ್ ಚಪ್ಲಿ ಮೆಟ್ಟಿರಬೇಕು
ಹುಬ್ಬಳ್ಳಿಯೊಳ ಇಟ್ಟಿರಬೇಕು
ಧಾರವಾಡದೊಳ ಬಿಟ್ಟಿರಬೇಕು
ಕುಪೆಲೂರ............ನ ಮ್ಯಾಲೆ ಮನಸಿರಬೇಕು

೩೯೯. ಮಲ್ ಮಲ್ಲಂಗಿ ಮೈಯಾಗೆ
ಮದ್ರಾಸ್‌ಕೋಟು ಹೆಗಲಾಗೆ
ಬಂಗಾರದ ವಾಚು ಕೈಯಾಗೆ
ಮಲ್ಲಮ್ಮನಂತ ಮಡದಿ ಕರ್ಕಂಡು
ಮಲ್ಲಿಕಾರ್ಜುನನ ಪೂಜೆಗೆ ಹೋಗ್ತಾರೆ........

೪೦೦. ಮಲ್ಲಮ್ಮ ಶಿವಾಜಿಯ ಕೂಡ
ಯುದ್ಧ ಮಾಡಿದ್ದು ದೇಶಕ್ಕಾಗಿ
ನಾನು........ರ ಹೆಸರು ಹೇಳುವೆನು
ಈ ಕಳಸದ ಸಲುವಾಗಿ

೩೯೫. * ಕೆಸರಿನಲ್ಲಿ ಇದ್ದವರೆ........



೪೦೧. ಮಲ್ಲಿಗೆ ಹೂವಿನಂತ ಮನಸಿನವರು
ಸೇವಂತಿಗೆ ಹೂವಿನಂತ ತೂಕದವರು
ಸತಿಯಲ್ಲಿ ಅತೀ ಪ್ರೀತಿಯುಳ್ಳವರು........

೪೦೨. ಮಲ್ಲಿಗೆ ಹೂವಿನ ಮಂದಾರ
ಶ್ರೀಗಂಧದ ಬಜಾರ
ಕಂಪನಿ ಕಾರಬಾರ
ಹೋಟೇಲ್‌ನಲ್ಲಿ ದರಬಾರ.......

೪೦೩. ಮಲ್ಲಿಗೆ ಹೂವು ಬೆಳ್ಳಗೆ
ಚೆಂಡು ಹೂವು ಕೆಂಪಗೆ
ನನಗಿಂತ ನನ್ನ ರಾಜ ಕೆಂಪಗೆ........

೪೦೪. ಮಹಾತ್ಮಗಾಂಧಿ ಉಡುವುದು ಐದು ಮಳದ ಪಂಚೆ
ಬದರಿನಾಥನು ಬೇಡುವುದು ಬರ್ಪಿನ ಮಂಜಿ
ನಾ ನಡೆಯುವೆನು ಅತ್ತೆ ಮಾವರಿಗಂಜಿ
........ರ ಹೆಸರು ಹೇಳುವೆನು ಸಭೆಗಂಜಿ

೪೦೫. ಮಹಾತ್ಮಗಾಂಧಿ ಹುಟ್ಟಿದ್ದು ಪೋರ್‌ಬಂದರಿನಲ್ಲಿ
ಜವಾಹರ್‌ಲಾಲ್ ನೆಹರು ಹುಟ್ಟಿದ್ದು ಅಲಹಾಬಾದ್‌ನಲ್ಲಿ
ಬಸವಣ್ಣ ಹುಟ್ಟಿದ್ದು ಬಾಗೇವಾಡಿಯಲ್ಲಿ
ಸೀತಾದೇವಿ ಹುಟ್ಟಿದ್ದು ಜನಕರಾಜನ ಮನೆಯಲ್ಲಿ
........ಹುಟ್ಟಿದ್ದು............ಲ್ಲಿ

೪೦೬. ಮಳೆಗಾಲದಲ್ಲಿ ಆಗುವುದು ಕೆಸರು
ಹೊಲದಲ್ಲಿ ಆಗುವುದು ಹಸಿರು
ನಾನು ಊಟಕ್ಕೆ ನೀಡುವುದು ಕೆನೆ ಮೊಸರು
ತಣ್ಣಗೆ ಉಂಡು ಹೋಗ್ತಾರೆ ಪತಿರಾಯ........ರು

೪೦೭. ಮಳೆ ಬಂತು ಘಳ ಘಳ
ಕಳಸ ಹೊಳೆಯಿತು ಥಳ ಥಳ
ನಾನು ಆರತಿ ಮಾಡಿ
ಹೆಸರು ಹೇಳುವೆನು ಜಳ ಜಳ........

೪೦೮. ಮಾಡಿಕೊಂಡೆ ಸಿಂಗಾರ
ಮನದಲ್ಲಿ ಶೃಂಗಾರ
ಕೊಡಿಸ್ತಾರೆ........ಬಂಗಾರ

೪೦೯. ಮಾತು ಬಿತ್ತಿ ರತ್ನ ಬೆಳೆದು
ರತಿದೇವಿಗೆ ಬಿತ್ತು ಒಂದು ಕನಸು
ಅವರೆಲ್ಲಿದ್ದರೂ ಕಲ್ಯಾಣವಾಯಿತು
ನನ್ನ ಮನಸು....

೪೧೦. ಮಾತು ಮದ್ರಾಕ್ಷಿ
ತುಟಿ ರುದ್ರಾಕ್ಷಿ
ಹಲ್ಲು ಯಾಲಕ್ಕಿ
ಗಲ್ಲ ಕಮಲದ ಹೂವು
ರೀತುಳ್ಳರಾಯರು....
ಮಾತಾಡಿ ಬರುವಾಗ
ಸೂರ್ಯ ಚಂದ್ರರ ಬೆಳಕು ಮೂಡ್ತು

೪೧೧. ಮಾದೇವಿ ಮಾರೆನೋಡು
ಈರುಳ್ಳಿ ಕಾರನೋಡು
........ರು ನಿಂತಿರುವ ಚಲುವ ನೋಡು

೪೧೨. ಮಾವನ ಮಗ
ಮಾತಿನ ಗಿಣಿ
ನನ್ನ ಅರಸು
ಪಟ್ಟದ ಅರಸು....
ಮುದ್ದು ಮುಖ ತನ್ನಿರಿ
ಅರಿಸುಣ ಹಚ್ಚುವೆನು

೪೧೩. ಮಾವನ ಮಗನೆ
ಮಲ್ಲಿಗೆ ಹರಳೆ
ನನ್ನ ಸದರ ಬಿಟ್ಟು
ನಿಮ್ಮ ಸದರಕ್ಕೆ ಹೋಗಿ....



೪೧೪. ಮಾವನ ಮಗನೆ
ಮಲ್ಲಿಗೆ ಹರಳೆ
ನಮ್ಮ ಜಾಗ ಬಿಟ್ಟು *
ನಿಮ್ಮ ಜಾಗಕ್ಕೆ ಹೋಗಿ....**

೪೧೫. ಮಾವನ ಹೆಸರು ಮಲ್ಲಿಗೆ ಹೂವು
ಅತ್ತೆಯ ಹೆಸರು ಸಂಪಿಗೆ ಹೂವು
ನನ್ನ ಹೆಸರು ಸುಗಂಧದ ಹೂವು
ಸುಗಂಧದೂವಿನ ಕೂಟ ಸರಸ ಆಡ್ತಾರೆ....

೪೧೬. ಮಾವ ಮಾಡ್ಯಾನೆ ಮನೆ ಸಾಲ
ಅತ್ತೆ ಮಾಡ್ಯಾಳೆ ಕಿಡಕಿ ಸಾಲ
ರಾಯರು ಮಾಡ್ಯಾರೆ ಸೂಳೆ ಸಾಲ....

೪೧೭. ಮಾವಯ್ಯ ಕಟ್ಸಿದ ಮಾಳ್ಗೆ ಮನೆ
ಅತ್ತೆಮ್ಮ ಕಟ್ಸಿದ ಕಿಟ್ಕಿಬಾಗ್ಲು
ಮೈದ್ನ ಬಿತ್ತಿದ ಮೆಂತೆ ಸಾಲು
........ರು ಸೂಳೆ ಪಾಲು

೪೧೮. ಮಾವುನ್ನ ಮೋರೆ ನೋಡು
ಈರುಳ್ಳಿ ಕಾರನೋಡು
ಕೂತಿರೊ ಜಾಗ ನೋಡು
ಇಕ್ಕಿರೋ ನಾಮ ನೋಡು

೪೧೯. ಮಾಲಕ್ಷ್ಮಿ ಮೂಗಿನಲ್ಲಿರುವುದು ಹತ್ತು ವರದ ನತ್ತು
ನಾನು....ರ ಹೆಸರು ಹೇಳುವುದು ಮೂರು ಸಂಜೆ ಹೊತ್ತು

೪೨೦. ಮಾಲು ಮಾಲು ಜೀರಂಗಿ ಮಾಲು
ರಾಯರು ಕಟ್ಟಿದ್ದು ರಂಗಿ ಮಾಲು
ನಮ್ಮ ರಾಯ್ರು........ಮಾಡ್ತಾರ್ ಸೂಳೇರ್ ಪಾಲು

---

೪೧೪ * ಮಣೆ ಬಿಟ್ಟು ಮಣೆಗೋಗಿ
** ನಿಮ್ಮ ಹಳೇ ಚಾಪೆಗೆ ಎದ್ದೋಗಿ
** ನಿಮ್ಮ ಹಳೇ ಚಾಪ್ಗಿಗೆ ಎದ್ದೋಗಿ

೪೨೧. ಮಾಲು ಮಾಲು ಮುತ್ತಿನ ಮಾಲು
ಮಾವಾರು ಕುಂದ್ರದು ಪಗಡೆ ಸಾಲು
ಮೈದುನ್ರು ಹೋಗೋದು ಮುಡ್ಕಿಸಾಲು
ಯಜಮಾನ್ರು ಹೋಗೋದು ಸೂಳೇರ ಸಾಲು....

೪೨೨. ಮಾಲು ಮಾಲು ಮೂರು ಕಿಟಕಿ ಮಾಲು
ಮಾವಯ್ಯ ಮಾಡಿಸಿದ್ದು ಮೂರು ಹೊನ್ನಿನ ಮಾಲು
... ಸ್ವಾಮೇರು ಮಾಡಿಸಿದ್ದೆಲ್ಲ ಸೂಳೆ ಪಾಲು

೪೨೩. ಮಾಸೂರು ಮಾವಿನಕಾಯಿ
ಈಸೂರು ಉಪ್ಪಿನಕಾಯಿ
ಉಪ್ಪಿಲ್ದ ಹಪ್ಪಳ
ತುಪ್ಪಿಲ್ದ ಊಟ ಮಾಡ್ತಾರೆ....

೪೨೪. ಮುಖ ಮೋಡಿ ಮಾಡಿದವರು
ಮುತ್ತಿನ ತುರಾಯಿದವರು
ಹತ್ತು ಮಂದಿಯೊಳಗೆ ಕುತ್ತುಗೊಂಡು
ಪಗಡೆ ಆಡುತಾರೆ........ಮನೆ ಸ್ವಾಮಿ

೪೨೫. ಮುತ್ತೈದೆ ಕಿವಿಗೆ ಚಂದ ಮುತ್ತಿನ ವಾಲೆ
... ....ರ ಕೊರಳಿಗೆ ಹಾಕುವೆ ಪುಷ್ಪಮಾಲೆ

೪೨೬. ಮುತ್ತೈದೇರು ಮುಡಿಯುವುದು ಹೂವಿನ ದಂಡೆ
ನಾ ತೆಗೆಯುವುದು ನಮ್ಮವರು........ರ ಅಂಗಿಯ ಗುಂಡಿ

೪೨೭. ಮುನ್ನೂರು ರೂಪಾಯಿನ ಸೈಕಲ್ಲು
ಇನ್ನೂರು ರೂಪಾಯ್ನ ಪುಸ್ತಕ
ಹನ್ನೊಂದು ವರ್ಷ ನೆನಪಾಗಿ
ಇನ್ನೊಂದು ವರ್ಷ ನೋಡ್ತೀವಿ ಅಂತಾರೆ....

೪೨೮. ಮುರುಕು ನೊಗ ಅರಕು ಕಣ್ಣೆ
ಎಳಿಲಾರದ ಎತ್ತು ಕಟ್ಕಂಡು
ಎದೆದೆ ಗುದಿಕಂತಾರೆ....



೪೨೯. ಮುರಿಮುರಿ ಮುಂಡಾಸ
ಮುತ್ತಿನ ತುರಾಯಿ
ಹತ್ತು ಮಂದೀಲಿ ಕೂತ್ಕೊಂಡು
ಲತ್ ಪಗಡೆ ಆಡ್ತಾರೆ....

೪೩೦. ಮುಳ್ಳಿರೋದು ಗುಲಾಬಿ
ಕಂಪಿರೋದು ಸಂಪಿಗೆ
ಸುಂದರಿರೋದು ಪುಷ್ಪ
........ರು ನನಗಿಂತ ಜಾಣ ಅಲ್ವೆ

೪೩೧. ಮೂರು ಗಂಗಾಳ ಮಲ್ಲಿಗೆ ಹೂವು
ಆರು ಗಂಗಾಳ ಬಿಲ್‌ಪತ್ರೆ
ಸಿಂಹಾಸನದ ಮೇಲೆ ಕೂತು
ಶಿವಪೂಜೆ ಮಾಡ್ತಾರೆ........

೪೩೨. ಮೆಂತ್ಯದ ಹಿಟ್ಟು ತುಪ್ಪದ ಬಟ್ಟು
ಎಂತೋರ ಮಗಳೂಂತ
ಸಂತೋಷ ಪಡ್ತಾರೆ....

೪೩೩. ಮೋಟು ತೋಳಿನ ಅಂಗಿ
ಮುನ್ನೂರುಪಾಯಿ ಸಂಬ್ಳ
ನಾಗರ ಮಾಡ್ಸು ಅಂದ್ರೆ
ನಾಳೆ ನಾಳೆ ಅಂತಾರೆ....

೪೩೪. ಮೋಡ ತೇಲುವುದು ಆಕಾಶದಲ್ಲಿ
ಮುತ್ತು ಸಿಗುವುದು ಕಡಲಲ್ಲಿ
ದೋಣಿ ಸಾಗುವುದು ನೀರಿನಲ್ಲಿ
........ರು ಇರುವುದು ನನ್ನ ಪಕ್ಕದಲ್ಲಿ

೪೩೫, ಮೈಸೂರು ಎಲೆ
ಬೀರೂರು ಅಡಿಕೆ
ಬಂಗಾರ್ದ ತಟ್ಯಾಗೆ
ಸಿಂಗಾರ ಮಾಡ್ಕೊಂಡ್ ಹೋದ್ರೆ
ಸಿಗರೇಟೆಲ್ಲಾಂತ ಸಿಟ್ಟಾಗಿ ಬರ್ತಾರೆ....

೪೩೬. ಯಮುನಾ ತೀರದಲ್ಲಿ ಅಪ್ಸರೆಯರಾಡುತ್ತಿದ್ದರು ವಿನೋದ
ಆಕಾಶದಲ್ಲಿ ಅರ್ಜುನ ಗಂಧರ್ವರಿಗೆ ನಡೆಯಿತು ವಾದ
..........ರಾಯರ ಹೆಸರು ಹೇಳುವೆನು ನಿಮ್ಮೆಲ್ಲರ ಆಶೀರ್ವಾದ

೪೩೭. ಯಾಲಕ್ಕಿ ಬೆಣ್ಣೆ ಮಾಡಿ
ಮೂಲಂಗಿ ಪಲ್ಲೆ ಮಾಡಿ
ಊಟಕ್ಕೆ ಬಲ್ಲಿ ಅಂದ್ರೆ
ಆಟ ಆಡ್ತಾರೆ........ಮನೆಸ್ವಾಮಿ

೪೩೮. ರಂಗಯ್ಯನ ಬಾಗಿಲು
ರಾಜಣ್ಣನ ಸಿನಿಮಾ
ಬಯಲು ನಾಟಕಂದ್ರೆ
ಬಾಯಿ ತಕ್ಕೊಂಡು ನೋಡ್ತರೆ....

೪೩೯. ರಘುರಾಜನ ಪತ್ನಿಯು ಸ್ನಾನ ಮಾಡುವಾಗ
ಆಕೆಯ ಭಕ್ತಿಯನ್ನು ಪರೀಕ್ಷಿಸಲೆಂದು
ಕುಂಟ ಬ್ರಾಹ್ಮಣನಾಗಿ ಬಂದವನೇ ಶ್ರೀಮನ್ ನಾರಾಯಣ
........ಹೆಸರು ಹೇಳುವೆನು ನೀವೆಲ್ಲ ಕೇಳಿದ ಕಾರಣ

೪೪೦. ರತ್ನದ ಪೇಟೆಯಲ್ಲಿ ಕುಳಿತು
ಮುತ್ತಿನ ವ್ಯಾಪಾರ ಮಾಡ್ತಾರೆ....

೪೪೧. ರನ್ನದ ಒಲೆಗುಂಡೂಡಿ
ಚಿನ್ನದ ತಪಾಲಿ ಇಟ್ಟು
ಊದಿನ ಕಡ್ಡಿ ಒಲೆ ಹೊತ್ತಿಕ್ಕಿ
ಬುಕ್ಕಿ ಹಿಟ್ಟಿನ ರೊಟ್ಟಿ ಸುಟ್ಟು
ದಾಲ್ಚಿನ್ನಿ ಪಲ್ಲೀವ ಮಾಡಿ
ಅತ್ತೆ ಮಾಡಿದ್ದಾಳವ್ವ
ರಾಯರು ಉಂಡುದ್ದಾರವ್ವ
ನಾನೇನು ಬಲ್ಲೆ ನೆರ್ಮನೆ ಮಗಳು
ಕುರ್ಚಿ ಮೇಲೆ ಕೂತ್ಕೊಂಡು ಅರ್ಜಿ ಬರೀತಾರೆ....

೪೪೨. ರವೆ ಹಿಟ್ಟಿನ ದ್ವಾಸೆ ಸೀಯಂಗೆ ಬೇಸಿ
ಟೀಕಾಸಿ ಕೆತ್ಲ್ಯಾಗೆ ಸೋಸಿ
ಕುಡಿಕುಡಿ ಅಂದ್ರೆ ಹೊಡೆಯಾಕೆ ಬರ್‍ತಾರೆ....



೪೪೩. ರಸ್ತೆರೋಡು ಶಿಸ್ತಿನ ನಡಿಗೆ
ಭಕ್ತೀಲಿ ಹೋಕ್ತಾರ್ ಬಸವಣ್ಣ ದೇವರ ಗುಡಿಗೆ........

೪೪೪. ರಾಗಿ ಉಣವಲ್ಲ
ಗೋದಿ ತರುವಲ್ಲ
ಇದ್ದದ್ದು ನೀಡಿದ್ರೆ
ಎದ್ದೆದ್ದು ಹೋಗ್ತನೆ........

೪೪೫. ರಾಘವೇಂದ್ರರಾಯರ ಜಾಗೃತ ಸ್ಥಳವೇ ಮಂತ್ರಾಲಯ
ಅದುವೆ ಈಗಾಗಿರುವುದು ಜಗತ್ ಪ್ರಸಿದ್ಧಾಲಯ
........ರಾಯರ ಮನೆಯೇ ನನಗೆ ಸಂಪತ್ಭರಿತಾಲಯ

೪೪೬. ರಾಜಕಾರಣಿಗಳು ಮಾಡುವರು ಭಾಷಣ
........ಗೆ ಹಚ್ಚುವೆನು ಅರಿಷಿಣ

೪೪೭. ರಾಜಮಹಾರಾಜರಿರುವುದು ಅರಮನೆಯಲ್ಲಿ
ದೇವರಿರುವುದು ಗುಡಿ ದೇವಾಲಯದಲ್ಲಿ
........ರಾಯರ ಹೆಸರು ಹೇಳುವುದು
ನೂತನ ದಂಪತಿಗಳ ಎದುರಿನಲ್ಲಿ

೪೪೮. ರಾಮನು ವನವಾಸಕ್ಕೆ ಹೋಗಿದ್ದು ಸತ್ಯಕ್ಕಾಗಿ
ನಾನು ಹೆಸರು ಹೇಳುವೆನು...........ರ ಪ್ರೇಮಕ್ಕಾಗಿ

೪೪೯. ರಾಯರ ವೃಂದಾವನ ನೋಡಲು ಬಲು ಚೆಂದ
ಅದಕ್ಕೆ ಅಧಿಕ ಕಳೆಬಂದಿರುವುದು ಕಾವೇರಮ್ಮನ ವಿಗ್ರಹದಿಂದ
.... .......ರಾಯರ ಹೆಸರು ಹೇಳುವೆನು ನಿಮ್ಮೆಲ್ಲರ ಆಗ್ರಹದಿಂದ

೪೫೦. ರೂಪದಲ್ಲಿ ಕಾಮ
ಮಡದಿಯ ಮೇಲೆ ಪ್ರೇಮ
ನಾ ಹೇಳೋದು..............ರ ನಾಮ

೪೫೧. ರೂಪದಲ್ಲಿ ಮಕರಧ್ವಜ
ಕಾರ್ಯದಲ್ಲಿ ಕಪಿಧ್ವಜ
ರಕ್ಷಣೆಯಲ್ಲಿ ಗರುಡಧ್ವಜ

ಭಾರತದಲ್ಲಿ ತ್ರಿವರ್ಣಧ್ವಜ
…………ರ ಕೈಯಲ್ಲಿ ರಾಷ್ಟ್ರಧ್ವಜ

೪೫೨. ರವೆ ಹಿಟ್ಟಿನ ದೋಸೆ
ಒತ್ತಾಗ ಬೀಸಿ
ಟ್ರಿಬಲ್ ಚಾ ಕಾಸಿ
ಕ್ಯಾಟ್ಲಲ್ಲಿ ಸೋಸಿ
ಕುಡಿ ಬಾ ಅಂದ್ರೆ
ನೆಡಮ್ಮನೆ ಹೋಗ್ತಾರೆ……..

೪೫೩. ರೈತರಿಗೆ ಪ್ರೀತಿ ಕಣದ ಸುಗ್ಗಿ
ನಮಗೆ ಪ್ರೀತಿ ಸ್ಯಾವ್ಗೆ ಹುಗ್ಗಿ
ನಮ್ಮ ರಾಮ……..ರಿಗೆ ಪ್ರೀತಿ ಗೋದಿ ಹುಗ್ಗಿ

೪೫೪. ಲಕ್ಷ್ಮಿ ಇರುವದು ಕಮಲದಲ್ಲಿ
ಕಮಲ ಇರುವುದು ಸರೋವರದಲ್ಲಿ
…. …ರ ತೇಜಸ್ಸು ಇರುವದು ನನ್ನ ಕುಂಕುಮದಲ್ಲಿ

೪೫೫. ಲಕ್ಷ್ಮಿ ಇರೋದು ಕಮಲದಲ್ಲಿ
ಕಮಲ ಇರೋದು ಕೆಸರಿನಲ್ಲಿ
……..ರ ಹೆಸರು ಹೇಳೋದು ಲಗ್ನ ಮಂಟಪದಲ್ಲಿ

೪೫೬. ಲಕ್ಷ್ಮಿ ಪೂಜಿಸೋದು ಭಾಗ್ಯಕ್ಕಾಗಿ
ಸರಸ್ವತಿ ಪೂಜಿಸೋದು ವಿದ್ಯೆಗಾಗಿ
……..ರ ಪಾದ ಪೂಜಿಸೋದು ಮಾಂಗಲ್ಯ ಸೂತ್ರಕ್ಕಾಗಿ

೪೫೭. ಲಕ್ಷ್ಮಿಯ ಮನಸ್ಸು ಯಾವಾಗಲೂ ಚಂಚಲ
……..ರಾಯರಿಗೆ ಕೊಡುವೆನು ಹೂವಿನ ಗೊಂಚಲ

೪೫೮. ಲಗ್ನಕ್ಕೆ ಮೊದಲು ಮಾಡುವರು ಯಾದಿ
……..ರಾಯರ ಹೆಸರು ಹೇಳುವೆನು ಬಿಡಿರಿ ಹಾದಿ

೪೫೯. ಲಗ್ನಕ್ಕೆ ಮೊದಲು ನೋಡುವರು ಗೋತ್ರ
……..ರು ಈ ಹೊತ್ತು ನನಗೆ ಕಟ್ಟಿದರು ಮಂಗಲ ಸೂತ್ರ



೪೬೦. ಲವಂಗ ಹಾಕ್ಕಂಡ್ ಲೋಲ್ ಮಾಡ್ತಾರೆ
ಸೈಕಲ್ ಹತ್ಗಂಡ್ ಶರಣು ಮಾಡ್ತಾರೆ
ಪುಂಡು ಹುಡ್ಗೀರ್ ಕಂಡು ಕಣ್ಣುಬ್ಬು ಹಾರಿಸ್ತಾರೆ……..

೪೬೧. ಲಿಂಗಕ್ಕೆ ಏರಿಸುವುದು ಬಿಲ್ವಪತ್ರೆ
ಶ್ರೀಕೃಷ್ಣನಿಗೆ ಏರಿಸುವುದು ತುಳಸಿಪತ್ರೆ
……..ರ ಹೆಸರು ಹೇಳುವೆನು……..ರ ಪುತ್ರೆ

೪೬೨. ವಡ್ರಳ್ಳಿಗು ಬೀಚನಳ್ಳಿಗೂ ಹರ್ದಾರಿ
ಹರ್ದಾರಿ ಒಳಗೊಂದು ಗಿರ್ದಾರಿ
ಗಿರ್ದಾರಿ ಒಳಗೊಂದು ಕಚೇರಿ
ಕಚೇರೀಲಿ ಕೂತ್ಕೊಂಡು ಲಚ್ಚರ್ ಮಾಡ್ತಾರೆ……..

೪೬೩. ವನದೇವತೆಯು ತನ್ನ ರಮಣೀಯವಾದ
ಲಾವಣ್ಯವನ್ನು ತೋರಿಸಿದ್ದು ಕ್ರೌಂಚ ಪಕ್ಷಿಯ ಕಾಲಕೂಟದಿಂದ
……..ರಾಯರ ಹೆಸರು ಹೇಳುವೆನು
ನಿಮ್ಮೆಲ್ಲರ ಆಶಿರ್ವಾದದಿಂದ

೪೬೪. ವನವನವೇ
ವನದಲ್ಲಿ ಇರುವ ರಾಜ ಪುತ್ರ
ಮಾವನ ಮಗ
ಮಾತಿನ ಗಿಣಿ
ನನ್ನ ಅರಸು
ಪಟ್ಟದ ಅರಸು
ಪರರ ಅರಸು
ಶೆಟ್ಟರ ಮಕ್ಕಳು ಸದರಿ ಬರ್ತಾರೆ
ಸೆರಗು ಬಿಡಿ……..

೪೬೫. ವನವೆಲ್ಲ ಹಸಿರು
ಹೊಸದಾಗಿ ಬಸಿರು
ಬಸಿರು ಮಾಡ್ದೋರು……..

೪೬೬. ವನ್ನನಾರಿ ವನ ಶೃಂಗಾರಿ
ಅಂಗಾರುಳ್ಳ ಬಂಗಾರ್ಗೆಜ್ಜೆ
ಸಾಲು ಮುತ್ತೈದೆಯರು

ಸೆರಗಿಡಿದು ಕೇಳ್ವಾಗ
ನಾನೇನೇಳಲಿ ನಮ್ಮ ರಾಯ್ರ ಹೆಸರು
ಕಣ್ಣಾಗಿರುವರು ಕಣ್ಣವಾರ್ಗೆಗಿರುವರು
ದಾರೆಗಿರುವರು ದರ್ಬಾರ್ದಗಿರುವರು
ದಸವಿಕಟ್ಟೆ ಮೇಲೆ ಹಸಿರು ಇಳ್ಕೀವು ಹಂಚ್ತಾರೆ........

೪೬೭. ವಸಂತ ಕಾಲದಲ್ಲಿ ಚಿಗುರಿದ ಮಾವಿನ ಮುಗಳು
........ರ ಹೆಸ್ರೇಳ್ತೀನ್ ಕೇಳ್ರಿ ........ರ ಮಗಳು

೪೬೮. ವಸಿಷ್ಟ ವಿಶ್ವಾಮಿತ್ರರು ವಾದಿಸಿದ್ದು
ಹರಿಶ್ಚಂದ್ರನ ಸತ್ಯ ಪರೀಕ್ಷೆಗಾಗಿ
........ರ ಹೆಸರು ಹೇಳುವೆನು
ನಿಮ್ಮೆಲ್ಲರ ಅಪೇಕ್ಷೆಗಾಗಿ

೪೬೯. ವಸುದೇವನು ಶ್ರೀಕೃಷ್ಣನನ್ನು ಗೋಕುಲಕ್ಕೆ ಒಯ್ಯುವಾಗ
ಯಮುನೆಯು ಹಾದಿ ಬಿಟ್ಟಳು ಪರಮಾತ್ಮನ ಪಾದ ತಾಕಿ
ಆಗ ಅಪ್ಸರಾ ಸ್ತ್ರೀಯರು ಪಾಡಿದರು ತಾಳಹಾಕಿ
ನಮ್ಮ ತಾಯಿಯವರು ಈ ದೇಹವನ್ನು........ರಿಗೆ
ಒಪ್ಪಿಸಿದರು ಇಷ್ಟು ದಿನ ಸಾಕಿ

೪೭೦. ವಾದಿರಾಜ ಸ್ವಾಮಿಗಳು ವಾದದಲ್ಲಿ ಬೇತಾಳನನ್ನು
ಜಯಿಸಿ ವಾಸ ಮಾಡಿದ್ದೆ ಸ್ವಾದಿ
........ರ ಹೆಸರು ಹೇಳಿದೆ ಬಿಡಿರಿ ಹಾದಿ

೪೭೧. ವಿಘ್ನನಿವಾರಕ ಗಣಪತಿ
ಭಾಷಾದೇವಿ ಸರಸ್ವತಿ
ಕೈಲಾಸದೊಡೆಯ ಉಮಾಪತಿ
........ರಾಯರೇ ನನ್ನ ಸೌಭಾಗ್ಯದ ಅಧಿಪತಿ

೪೭೨. ವಿಘ್ನೇಶ್ವರನಿಗೆ ನಮಿಸಿ ಬೇಡುವೆನು
ಕೊಡು ಎಂದು ಮತಿ
ಲಗ್ನವಾಗಿ ನಾನಾದೆ........ರಾಯರ ಸತಿ



೪೭೩. ವಿಜಯನಗರ ರಾಜ್ಯ ಸ್ಥಾಪಿಸಿದ್ದು ಯತಿ ವಿದ್ಯಾರಣ್ಯ
........ರು ಪತಿಯಾಗಿ ದೊರೆತದ್ದೆ ನನ್ನ ಪೂರ್ವಜನ್ಮದ ಪುಣ್ಯ

೪೭೪. ವಿದ್ಯಾರಣ್ಯರು ಕನ್ನಡ ರಾಜ್ಯ ಕಟ್ಟಿದರು
........ರು ನನ್ನ ಕೊರಳಿಗೆ ಮಾಂಗಲ್ಯ ಕಟ್ಟಿದರು

೪೭೫. ವಿದ್ಯಾರಣ್ಯರು ಸ್ಥಾಪಿಸಿದ್ದು ವಿಜಯನಗರ ಸಾಮ್ರಾಜ್ಯ
ನನಗೆ ಯಾವಾಗಲೂ...........ರು ಪೂಜ್ಯ

೪೭೬. ವಿವಾಹಕ್ಕೆ ಮೊದಲು ಕೇಳುವುದು ಗೋತ್ರ
........ರು ಕಟ್ಟಿದರು ನನಗೆ ಮಂಗಳ ಸೂತ್ರ

೪೭೭. ವಿಶ್ವಾಮಿತ್ರನ ತಪಸ್ಸನ್ನು ಭಂಗ ಮಾಡಿದಳು
ಮೇನಕೆಯೆಂಬ ವಾರಾಂಗಿನಿ
........ರಿಗೆ ನಾನೇ ಅರ್ಧಾಂಗಿನಿ

೪೭೮. ವೀರಾಧಿವೀರರಿಂದ ಆಳಲ್ಪಟ್ಟ ರಾಜ್ಯವೆ ವಿಜಯನಗರ
........ರಾಯರೇ ನನಗಿನ್ನು ಸೌಭಾಗ್ಯ ಸಾಗರ

೪೭೯. ವೃಂದಾವನ ಶೋಭಿಸುವುದು ಬಲು ಅಂದ
ಅದಕ್ಕೆ ಕಳೆ ಬಂದಿರುವುದು ಗುರುರಾಯರಿಂದ
ನಾನು ಸೌಭಾಗ್ಯವತಿಯಾದೆ........ರಾಯರಿಂದ

೪೮೦. ಶಕುಂತಲೆಯು ಅತ್ತೆ ಮನೆಗೆ ಹೋಗುವಾಗ
ಸಖಿಯರಿಗೆ ಆದದ್ದು ಚಡಪಡಿಕೆ
........ರಿಗೆ ಕೊಡುವೆ ಎಲೆ ಅಡಿಕೆ

೪೮೧. ಶಾಸ್ತ್ರದಲ್ಲಿ ಸಂವಾದ
ಮಾತಿನಲ್ಲಿ ವಿನೋದ
ಭಕ್ತಿಯಲ್ಲಿ ಪ್ರಹ್ಲಾದ
ನನಗೆ ದೊರೆತಿದ್ದು........ರ ಶ್ರೀಪಾದ

೪೮೨. ಶ್ಯಾವಂತಿಗೆ ಹೂವಿನ ಸಂಪು
ಗುಲಾಬಿ ಹೂವಿನ ಗುಂಪು

ಕೋಗಿಲೆ ಧ್ವನಿ ಬಲು ಇಂಪು
ನನಗಿಂತ ರಾಯ ಕೆಂಪು........

೪೮೩. ಶಿವಗೆ ಪಾರ್ವತಿ ಶೋಭೆ
ಹರಿಗೆ ಲಕ್ಷ್ಮಿ ಶೋಭೆ
ವಿಧಿಗೆ ಸರಸ್ವತಿ ಶೋಭೆ
ಸಸಿಗೆ ನೀರಿನ ಶೋಭೆ
ನಾ ಶೋಭೆ ನಮ್ಮ........ರಿಗೆ

೪೮೪. ಶಿವನ ಜಡೆಯೊಳಗಿರುವುದು ನಾಗರ ಹೆಡೆ
ನಾಗರ ಹೆಡೆಯೊಳಗಿರುವುದು ರತ್ನದ ಮಣಿ
ನಾರಿಗೊಪ್ಪುವುದು ಬಳಲ್ಮುಡಿ
ಬಳಲ್ಮುಡಿಗೊಪ್ಪುವುದು ಮಲ್ಲಿಗೆ ಮಾಲೆ
........ರ ಹೆಸರು ಹೇಳುವೆನು........ರ ಬಾಲೆ

೪೮೫. ಶಿವನ ಶಿರದಲ್ಲಿ ಚಂದ್ರಶೇಖರ
ಶಂಕರನ ಮುಡಿಯಲ್ಲಿ ರಾಜಶೇಖರ
ನನ್ನ ಮನವೆಂಬ ಮಂದಿರದಲ್ಲಿ........

೪೮೬. ಶಿವನ ಸೆದರು
ಶಿವಭಕ್ತರ ಸೆದರು
ನಾವು ನೀವು ಕುಂದ್ರೊ ಸೆದರು
ನಮ್ಮ ಬೆಳ್ಳಿ ಸದ್ರು ಬಿಟ್ಟು
ನಿಮ್ಮ ಚಿನ್ನದ ಸದ್ರಿಗೆ ದಯಮಾಡಿ........

೪೮೭. ಶಿವ ಶಿವ ಅಂಬೋರು ನಮ್ಮ ಮಾವೋರು
ಶೀಲವಂತರೆ ನಮ್ಮ ಅತ್ತೇರು
ಸಜ್ಜನರೇ ನಮ್ಮ ನಾದಿನೋರು
ಶ್ರೀಕೃಷ್ಣನಂತೋರೆ ನಮ್ಮ ಮೈದುನರು
ತುಂಬಿದ ಸಭಯಲ್ಲಿರುವರೇ ನಮ್ಮೋರು........

೪೮೮. ಶ್ರೀಕೃಷ್ಣ ಉಳಿಸಿದ ದ್ರೌಪತಿಯ ಮಾನ
ತಂದೆಯವರು ಮಾಡಿಕೊಟ್ಟರು
...........ವರಿಗೆ ಕನ್ಯಾದಾನ



೪೮೯. ಶ್ರೀಕೃಷ್ಣನನ್ನು ಬರಮಾಡಿಕೊಳ್ಳಲು ಪ್ರಾರ್ಥಿಸಿದ್ದೆ ವೃಂದಾವನ
ಆ ವೇಳೆಗೆ ಶ್ರೀಕೃಷ್ಣ ಏರಿಬಂದನು ಖಗವಾಹನ
........ರಾಯರ ಹೆಸರೇ ನನಗೆ ಪರಮಪಾವನ

೪೯೦. ಶ್ರೀಕೃಷ್ಣನಿಗೆ ಸುಧಾಮನು ಭಕ್ತಿಯಿಂದ
ಕೊಟ್ಟಿದ್ದು ಮುಷ್ಟಿ ಅವಲಕ್ಕಿ
........ರಿಗೆ ಹಾಕುವೆ ಕರಿದ ಅವಲಕ್ಕಿ

೪೯೧. ಶ್ರೀಕೃಷ್ಣನು ಆಲದ ಎಲೆಯ ಮೇಲೆ
ಮಲಗಿದ್ದು ಚಮತ್ಕಾರ
........ರಿಗೆ ಮಾಡುವೆನು ನಮಸ್ಕಾರ

೪೯೨. ಶ್ರೀಕೃಷ್ಣನು ಜನಿಸುವ ಕಾಲಕ್ಕೆ
ಸಮೃದ್ಧಿಯಾಗಿತ್ತು ದನದಾನ್ಯಗಳ ಬೆಳೆ
ಆಗ ದೇವತೆಗಳು ಸುರಿಸಿದರು
ಪುಷ್ಪ ವೃಷ್ಟಿಯ ಮಳೆ
........ರ ದಯದಿಂದಲೇ ನನಗೆ
ಐದೈದು ಬಳೆ

೪೯೩. ಶ್ರೀಕೃಷ್ಣನು ಬೆರಳನ್ನು ಕಚ್ಚಿಕೊಂಡಿದ್ದು
ಸುಬದ್ರೆಯ ಪರೀಕ್ಷೆಗಾಗಿ
........ರಾಯರ ಹೆಸರು ಹೇಳುವೆನು
ನಿಮ್ಮೆಲ್ಲರ ಆಗ್ರಹಕ್ಕಾಗಿ

೪೯೪. ಶ್ರೀಕೃಷ್ಣನು ಹುಟ್ಟಿದ್ದು ಗೋಕುಲದಲ್ಲಿ
ಬೆಳೆದದ್ದು ಮದುರೆಯಲ್ಲಿ
ರಾಜ್ಯವಾಳಿದ್ದು ದ್ವಾರಕೆಯಲ್ಲಿ
ನಾನು........ರ ಹೆಸರು ಹೇಳುವೆನು
ಮದುವೆ ಮಂಟಪದಲ್ಲಿ

೪೯೫. ಶ್ರೀ ವಿಷ್ಣು ಆದಿಶೇಶನ ಮೇಲೆ ಮಲಗಿರಲು
ಭೃಂಗ ಮುನಿಯು ತಾಡನ ಮಾಡಿದ್ದು ವೃಕ್ಷಸ್ಥಳ
........ರಾಯರ ಚರಣ ಸೇವೆಯಿಂದಲೇ
ನನಗೆ ಮೋಕ್ಷ ಸ್ಥಳ

೪೯೬. ಶ್ರೀರಾಮಚಂದ್ರನು ವನವಾಸಕ್ಕೆ ಹೋದದ್ದು
ಕೈಕೇಯ ವಚನಕ್ಕಾಗಿ
........ರ ಹೆಸರು ಹೇಳುವೆನು ನಿಮ್ಮೆಲ್ಲರ ಪ್ರೇಮಕ್ಕಾಗಿ

೪೯೭. ಶ್ರೀರಾಮಧೂತನು ಸೀತಾದೇವಿಗೆ ರಾಮಮುದ್ರಿಕೆಯನ್ನು
ಒಪ್ಪಿಸಿ ಹಾಳು ಮಾಡಿದನು ಲಂಕೆಯನ್ನಷ್ಟೆ
ನೀವು ಹಾದಿಕಟ್ಟಿ ದಣಿದುಕೊಳ್ಳುವದು........ರ ಹೆಸರಿಗಷ್ಟೆ

೪೯೮. ಶ್ರೀ ರಾಮ ಲಕ್ಷ್ಮಣರು ವಾಸವಾಗಿದ್ದು ದಂಡಕಾರಣ್ಯದಲ್ಲಿ
........ರ ಜೊತೆ ವಿವಾಹವಾದದ್ದು........ಮಂಟಪದಲ್ಲಿ

೪೯೯. ಶ್ರೀ ಶಂಕರನಿರುವುದು ಕೈಲಾಸ
ಅವರ ತೊಡೆಯ ಮೇಲೆ ಶ್ರೀ ಗೌರಿಯ ವಾಸ
ನಮ್ಮ ರಾಯ .......ರಿಗೂ ನನಗೂ ಹೊಸ ಸವಾಸ

೫೦೦. ಸಂತೇಲಿ ಮಾರೋದು ಸೊಪ್ಪು
ಅಂಗ್ಡೀಲಿ ಮಾರೋದು ಉಪ್ಪು
ಅವರು ನೋಡಿದ್ರೆ ಕಪ್ಪು
ನಾನು ಒಪ್ಪಿದ್ದು ತಪ್ಪು .......

೫೦೧. ಸಂಸಾರ ಸುಂದರವಾದ ತೋಟ
ಅಲ್ಲಿ ಅರಳಿದೆ ಭಗವಾನ್ ಕೃಪೆಯ ನೋಟ
ಆ ನೋಟದಲ್ಲಿ ಸಾಗಿತೆಮ್ಮ ಆಟ........

೫೦೨. ಸಕಲ ಮಂಗಲ ಕಾರ್ಯಕ್ಕೂ ಗಜಾನನನೇ ಪೂಜ್ಯ
ಭಕ್ತರು ಪೂಜೆ ಮಾಡಲು ಒಲಿದು ಕೊಡುವ ಇಷ್ಟ ಸ್ವರಾಜ್ಯ
........ರ ಪಾದ ಸೇವೆಯೇ ಎನಗೆ ಪರಮ ಪೂಜ್ಯ

೫೦೩. ಸಕಲ ವಿಘ್ನಗಳನ್ನು ದೂರ ಮಾಡುವವನೆ ಗಜಾನನ
........ರಾಯರ ಪ್ರೇಮವೆ ನನ್ನ ಜೀವನ

೫೦೪. ಸಕಲ ಸೃಷ್ಟಿಕರ್ತನು ಸಂಕರ್ಷಣ
........ರಾಯರಿಗೆ ಹಚ್ಚುವೆನು ಅರಿಷಿಣ

೫೦೫. ಸಕ್ರೆ ಒಳಕು
ಸೂರ್ಯ ಚಂದ್ರನ ಬೆಳಕು
ನಕ್ಷತ್ರ ನೋಡಿ ಅಕ್ಷರ ಬರಿತಾರೆ........



೫೦೬. ಸಕ್ರೆ ಸಕ್ರೆ ಸೌಟು
ಉತ್ತುತ್ತೆ ಬೋಟು
ರಸಬಾಳೆ ಹಣ್ಣು
ರಾಜರ ಹುಡುಗಿ ಕೊಟ
ಪಗಡೆ ಆಡ್ತಾರೆ........

೫೦೭. ಸಖಿಯೊರೊಳು ಸುಖಿಯಾದೆ
........ತಂದೆಯವರ ಮಗಳಾದೆ
........ರ ಕೈಹಿಡಿದು ಮಾವನವರ ಸೊಸೆಯಾದೆ.

೫೦೮. ಸರ್ಜನ್ ಫಾರ್ಸಿ ಕೋಟು
ಬುರ್ ಬುರ್ ಹೊಸ ಟೈ
ಕಾಲಲ್ಲಿ ಬೂಟು
ಟೇಬಲ್ ಮೇಲೆ ತಾಟು
ಅದರಲ್ಲಿ ಎಂಟು ಬಿಸ್ಕೀಟು
ಸೇದತಾರೆ ಸಿಗರೇಟು........

೫೦೯. ಸಣ್ಣಕ್ಕಿ ಅನ್ನ
ಉದ್ದಿನ ಬ್ಯಾಳೆ ಸಾರು
ಗಮ್ಮನೆ ತುಪ್ಪ
ಸುಮ್ಮನೆ ಉಂಡೆದ್ರು
ನಮ್ಮ........

೫೧೦. ಸಣ್ಣಕ್ಕಿ ಅನ್ನ ಬೆಣ್ಣೆಕಾಸಿದ ತುಪ್ಪ
ಸುಮ್ಮುಂಡ್ ಸೂಳೆ ಮನಿಗೆ ಹೋಗ್ತಾರೆ........

೫೧೧. ಸಣ್ಣಕ್ಕಿ ಅನ್ನ ವಗ್ಗರಣೆ ಬಣ್ಣ
ಬಗ್ಗಿ ಬಗ್ಗಿ ಉಣ್ತಾರೆ
ಹಿಗ್ಗಿ ಹಿಗ್ಗಿ ನೋಡ್ತರೆ........

೫೧೨. ಸಣ್ಣಕ್ಕಿ ತರೊರಲ್ಲ
ದಪ್ಪಕ್ಕಿ ಉಣ್ಣೋರಲ್ಲ
ಮನಿಯಾಗೆ ಇರೊಲ್ಲ
ಮಾತು ಕೇಳೊಲ್ಲ

ಇದ್ದುದ್ ಉಣ್ಣೊಂದ್ರೆ
ಎದ್ದೆದ್ ಹೋಗ್ತಾರೆ........

೫೧೩. ಸಣ್ಣಕ್ಕಿ ಸಣ್ಣ ಗುಲಗಂಜಿ ಬಣ್ಣ
ತರೀಕೆರೆಣ್ಣ ತರಬಹುದಣ್ಣ
ಮುತ್ತಿನ ಕುದುರೆ ಮುಂದೋಗುತ್ತೆ
ಜಾಲಿಮರ ಜೋಲಾಡುತ್ತೆ
ಸೆಟ್ಟರ ಮಗಳು ಪಟ್ಣಕ್ಕೆ ಹೋಗ್ತಾಳೆ
ದಾರಿ ಬಿಡಿರಿ........

೫೧೪. ಸಣ್ಣನ್ ಸ್ಯಾವ್ಗೆ ನುಣ್ಣನ್ ತುಪ್ಪ
ಸುಮ್ನುಂಡ್ ಸೂಳೆ ಮನೆಗೋಯ್ತಾರೆ........

೫೧೫. ಸತ್ಯದಲ್ಲಿ ರಾಮ
ವಚನದಲ್ಲಿ ಭೀಮ
ನನ್ನ ಮೇಲೆ ಪ್ರೇಮ
ನನ್ನ ಗಂಡನ ನಾಮ........

೫೧೬. ಸತ್ಯದಲ್ಲಿ ಸಾವಿತ್ರಿ
ನಿತ್ತಲ್ಲಿ ಪಾರ್ವತಿ
ನಾನು ಏಕಾಂತದಲ್ಲಿ ನಿಂತು ಹೇಳುವೆನು
ನಮ್ಮವರ ಹೆಸರು........

೫೧೭. ಸತ್ಯಧರ್ಮದ ಮೂಲ
ನೀತಿ ನಡತೆಯು ಮೂಲ
ಶೀಲ ಶಾಂತಿಯು ಮೂಲ
ಸ್ವಾರ್ಥ ಪಾಪದ ಮೂಲ
ನಮ್ಮ........ರು ನನಗೆ ಬಲು ಅನುಕೂಲ

೫೧೮. ಸತಿಗೆ ಪತಿಯೇ ಮೇಲು
ಪತಿಗೆ ಸತಿಯೇ ಮೇಲು
ನಮ್ಮರಾಯ್ರು........ನಮಗೆ ಮೇಲು

೫೧೯. ಸತಿಪತಿಯರ ನೌಕೆ ಈಜಾಡುವುದು
ಸಂಸಾರವೆಂಬ ಸಾಗರದಲ್ಲಿ



........ರಾಯರ ಹೆಸರು ಹೇಳುವೆನು
ಬಂದು ಬಳಗದ ಮಧ್ಯದಲ್ಲಿ

೫೨೦. ಸಪ್ತ ಋಷಿ ಮಂಡಲವು ಶೋಭಿಸುವುದು ಆಕಾಶದಲ್ಲಿ
ಅದರ ಬದಲಾವಣೆಯಾಗುವುದು ಕಾಲಕ್ರಮದಲ್ಲಿ
.. ....ರ ವಿವಾಹವಾದದ್ದು........ತಿಂಗಳಲ್ಲಿ

೫೨೧. ಸಮುದ್ರದ ಕೆಳಗೆ
ಸುರಹೊನ್ನೆ ಮರಹುಟ್ಟಿ
ಆನೆ ಮೇಲೆ ಅವ್ರು
ಒಂಟೆ ಮೇಲೆ ನಾನು
ವಜ್ರದ ಮಣೆ ಮೇಲೆ
ಚಿನ್ನದ ಮಣಿ ಹಾಯ್ಕೊಂಡು
ಹೊನ್ನ ಏಣಿಸ್ತ ಕೂತವ್ರೆ........

೫೨೨. ಸಮುದ್ರ ದಂಡೆ ಮ್ಯಾಲೆ
ಸಾಲೆಕಂಚಿ ಮರನುಟ್ಟಿ
ಸಾಲೆ ಮುತ್ತೈದೇರು ಹೆಸರು ಕೇಳ್ತಾರೆ
ನಮ್ಮರಾಯ್ರು ಹೆಸ್ರ ನಾನೆಂಗೇಳ್ಳಿ
ಅವ್ರಿರೋದು ಆನೆಮ್ಯಾಲೆ
ನಾನಿರೋದು ಒಂಟೆಮ್ಯಾಲೆ
ಅವ್ರ ಕೈಯಾಗೆ ಕಂಟಿಸರ
ನಮ್ಮ ಕೈಯಾಗೆ ಕಾಶಿಚೆಂಬು
ನಮ್ರಾಯ್ರ ಹೆಸ್ರು........

೫೨೩. ಸಮುದ್ರ ದಂಡೇಲಿ
ಐಗಂಚಿ ಮರಹುಟ್ಟಿ
ಆನೆ ಮೇಲೆ ಅವ್ರು
ಅಂದಲದಲ್ಲಿ ನಾನು
ಒಂಟ್ಮುತ್ತು ವಾಲಾಡ್ತ
ಕಂಟಿಸರ ತೂಗಾಡ್ತ
ಚಿನ್ನದ ಮಣೆಮ್ಯಾಲೆ ಕೂತ್ಕೊಂಡು

೫೩೮. ಸಿಕ್ಕಿದ ಸಂತೇಲಿ ಸಿಕ್ದ ಕಾಣಣ್ಣ
ಸಿಕ್ಕಿದರೇನು ಅವ್ನು ಮುದ್ಕಕಾಣಣ್ಣ
ಅರವಿಕೊಂಡು ಬರಲೇನಣ್ಣ........

೫೩೯. ಸಿಲ್ಕಿನ ಶರ್ಟು ಮಲ್ಕಿನ ಜಂಪಾರ್
ತಕ್ಕೊಂಡೋಗ್ರಿ ಅಂದ್ರೆ
ಸಿಟ್ಕೊಂಡ್ ಹೋಗ್ತಾರೆ........

೫೪೦. ಸೀಟಿ ಚೀಲ ಸಿಗಣಿ ಅಡಿಕೆ
ಸಿಕ್ಕ ಸಿಕ್ಕ ಸೂಳೆ ಮನ್ಗೆ *
ಲತ್ತೇವು ಅಡಾಕೆ ಹೋಗ್ತಾರೆ........

೫೪೧. ಸೀತೆಯ ಶೋಧ ಮಾಡಿದವ ಹನುಮ
........ರಲ್ಲಿ ಬೇಡುವೆ ಸದಾ ಪ್ರೇಮ

೫೪೨. ಸೀತೆಯು ಪರ್ಣಕುಟೀರದಲ್ಲಿ ಇಲ್ಲದ್ದನ್ನು ಕಂಡು
ಶೋಕ ಮಾಡಿದನು ಶ್ರೀರಾಮ
........ರಾಯರಿಗೆ ಹಚ್ಚುವೆನು ಕುಂಕುಮ

೫೪೩–೧ ಸುಗ್ಗೀಲಿ ಹುಟ್ಟಿ
ಸಕ್ಕರೇಲಿ ಕಟ್ಟಿ
ನನ್ನ ಮೇಲೆ ಸಿಟ್ಟು
ಸೂಳೆ ಮೇಲೆ ಪ್ರೀತಿ........

೫೪೩–೨ ಸುತ್ತಲ ಬಳಗಕ್ಕೆ ಪತ್ರ ಬರೆಯುವದು
ಬಂಗಾರದ ಮಸಿ
ನಾನು ಆರತಿ ಮಾಡಿ ಹೆಸರು ಹೇಳುತ್ತೇನೆ
ಸದರ ಬಿಟ್ಟು ಸರಿ........

೫೪೪. ಸುದೇಷ್ಣೆಯು ಸೈರಂಧ್ರಿಯನ್ನು
ಪೀಡಿಸಿದುದು ಅನೇಕ ಬಗೆಯಾಗಿ
........ರ ಹೆಸರು ಹೇಳುವೆನು ಇಂದು
........ರವರ ಸೊಸೆಯಾಗಿ

---

೫೪೦. *ಸೂಳೆ ಮನೆಯಾಗ್ ಕೂತ್ಕೊಂಡು ಸೂರೆ ಆಡ್ತರೆ....



೫೪೫. ಸುಧಾ ಪರಿಮಳ ಗ್ರಂಥವನ್ನು ರಚಿಸಿದವರು
ರಾಘವೇಂದ್ರ ಯತಿಗಳು
........ರಾಯರ ಹೆಸರು ಹೇಳುವೆನು
........ರ ಮಗಳು

೫೪೬. ಸುಭದ್ರೆಯನ್ನು ಧುರ್ಯೋದನನಿಗೆ
ಕೊಡಬೇಕೆಂಬುದೆ ಬಲರಾಮನ ಮನಸ್ಸು
ಆಗ ಸುಭದ್ರೆಯು ಶ್ರೀಕೃಷ್ಣನ ಅಪ್ಪಣೆಯಂತೆ
ಅರ್ಜುನನಿಗೆ ಮಾಲೆ ಹಾಕಿ ಪಡೆದಳು ಯಶಸ್ಸು
.. ....ರ ಹೆಸರು ಹೇಳುವೆನು
ಇತ್ತ ಕಡೆ ಇಡಿರಿ ನಿಮ್ಮ ಮನಸ್ಸು

೫೪೭. ಸುವಾಸನೆ ಸಿಗುವುದು ಮಲ್ಲಿಗೆಯಲ್ಲಿ
ಸೇಬುಹಣ್ಣು ಸಿಗುವುದು ಕಾಶ್ಮೀರದಲ್ಲಿ
ಮಾತಿನ ಸಿಹಿ ಸಿಗುವುದು ಜಾಣರಲ್ಲಿ
ಹೃದಯ ತಲ್ಲಣಿಸುವುದು ಸಂಗೀತದಲ್ಲಿ
ನಾನು........ರ ಹೆಸರು ಹೇಳುವೆನು ಮನೆಯಲ್ಲಿ

೫೪೮. ಸ್ತುತಿಗೆ ಮೊದಲು ಗಣಪತಿ
ಮತಿಗೆ ಮೊದಲು ಸರಸ್ವತಿ
ಸಂಕಟ ಬಂದಾಗ ವೆಂಕಟ ಪತಿ
ನಮ್ಮವರೆನಗೆ ಸದ್ಗತಿ........

೫೪೯. ಸೂಜಿ ಕಲ್ಲಿನ ಮೇಲೆ ನಿಂತು
ತಪಸ್ಸು ಮಾಡಿದ್ದು ನಮ್ಮವರ ಸಲುವಾಗಿ
ನಾನು ಕನ್ಯಾಕುಮಾರಿಯಾಗಿ ಜನಿಸಿ ಬಂದದ್ದು
ಮನೆತನದ ಸಲುವಾಗಿ........

೫೫೦. ಸೂಟು ದಾರಿ ಸ್ಕೂಟರ್ ಏರಿ
ದಾರಿ ಬಿಡದವರ ಮಾರಿ ನೋಡ್ತಾರೆ........

೫೫೧. ಸೂರ್ಯನಾರಾಯಣನಿಂದಲೆ ಲೋಕಕ್ಕೆ ಆರೋಗ್ಯ
........ರೆ ನನಗೆ ಸಕಲ ಸೌಭಾಗ್ಯ

೫೫೨. ಸೂಳೆಗೆ ಸುಳ್ಳನಾಗಿ
ಹೆಣ್ತಿಗೆ ಕಳ್ಳನಾಗಿ
ತಪ್ಪಿತಪ್ಪಿಸಿಗೊಂಡ್ ಹೋಗ್ತರೆ........

೫೫೩. ಸೆರಗ ಹಿಡಿಬೇಡಿರಿ ಸೆರೆ ಮುತ್ತು ಸರಿದಾವು
ಮುಸುಗ ಹಿಡಿಬೇಡಿರಿ ಸೂರೆಮುತ್ತು ಸರಿದಾವು
ನೂರು ಮಂದಿಯೊಳಗೆ ನಮ್ಮ ತಂದೆತಾಯಿ ಹೆಸರು ಹೇಳುತ್ತೇನೆ
ಹತ್ತು ಮಂದಿಯೊಳಗೆ........ರ ಹೆಸರು ಹೇಳುತ್ತೇನೆ.

೫೫೪. ಸೇರು ಹಾಲು
ಸಕ್ಕರೆ ಪಟ್ಣ
ಜಟ್ಟನೆ ತರದೇ ಇದ್ದರೆ
ಸಿಟ್ಟು ಮಾಡ್ತಾರೆ........

೫೫೫. ಸೊಂಟಕ್ಕೆ ಪಟ್ಟಿ ಚಂದ
ಊಟಕ್ಕೆ ಎಲೆ ಚಂದ
ಗಿಣಿಗೆ ಹಸ್ರು ಚಂದ
ನವಿಲಿಗೆ ಗರಿ ಚಂದ
ನಮಗೆ ನಮ್ಮ ರಾಯರು........ಚಂದ

೫೫೬. ಸೊಲಗದಲ್ಲಿ ಇರುವವನು ಸೋಮೇಶ್ವರ
ಕೂಡಲದಲ್ಲಿರುವವನು ಸಂಗಮೇಶ್ವರ
ಸೊಲ್ಲಾಪುರದಲ್ಲಿರುವವನು ಸಿದ್ಧರಾಮೇಶ್ವರ
ಶಿವಗಂಗೆಯಲ್ಲಿರುವವನು ಗಂಗಾಧರೇಶ್ವರ
ಎಡೆಯೂರಿನಲ್ಲಿರುವವನು ಸಿದ್ಧಲಿಂಗೇಶ್ವರ
ಕಾಶಿಯಲ್ಲಿರುವವನು ವಿಶ್ವೇಶ್ವರ
ಗೋಕರ್ಣದಲ್ಲಿರುವವನು ಮಹಾಬಲೇಶ್ವರ
........ಇರುವರು ನನ್ನ ಹೃದಯೇಶ್ವರ

೫೫೭. ಹಂಚಿಗೆ ರೊಟ್ಟಿ ಚಂದ
ಹಚ್ಚೆ ಹಣೆಗೆ ಚಂದ
ಪಂಚೆ ಪೇಟ ಗಂಡಿಗೆ ಚಂದ
ಕೆಂಚ ಪುರುಷಗೆ ನಾ ಚಂದ........



೫೫೮. ಹಗ್ಗ ಹರಿತು
ನಗ್ಗು ಮುರಿತು
ಎತ್ತು ಎಳಿಯದಿಲ್ಲ ಅಂತ
ಅಳ್ಳತನೆಯು ಬಂದ್ರು........

೫೫೯. ಹಚ್ಮಲ್ಗೆ ನುಚ್ಮಲ್ಗೆ
ಕಾಮಜೇನು ಕರ್ಜೂರ್ದಣ್ಣು
ವಜ್ರದ ವಾಲೇಕಾರ
ಗೆಜ್ಜೇನಳ್ಳಿ ದಬೇದಾರ........

೫೬೦. ಹಡದಿರೋದು ಆನೆಕಲ್ಲು
ಪಡದಿರೋದು ಪಾಣೆಚೂರು
ಮಾತು ಕೊಟ್ಟಿದ್ದು ಮೈಸೂರು
ನನ್ನ ಕೊಟ್ಟಿರಾದು ಪುರುನೂರು
ಮಾಂಗಲ್ಯ ಕಟ್ಟಿರೋದು........

೫೬೧. ಹಣವಂತ ಮಾವ
ಗುಣವಂತ ಅತ್ತೆ
ಪುಣ್ಯವಂತ........ರು

೫೬೨. ಹಣೆಗೆ ಕುಂಕುಮ ಶೋಭೆ
ಕಣ್ಣಿಗೆ ಕಾಡಿಗೆ ಶೋಭೆ
ಪದಕ ಕೊರಳಿಗೆ ಶೋಭೆ
ಹೂವು ಹೆರಳಿಗೆ ಶೋಭೆ
ನಾ ಶೋಭೆ ನಮ್ಮ ....ರಿಗೆ

೫೬೩. ಹಣೆಗೆ ಹಚ್ಚೆ ಚೆಂದ
ಕೈಗೆ ಬಳೆ ಚೆಂದ
ನಮ್ಮವರಿಗೆ ನಾನೇ ಚೆಂದ........

೫೬೪. ಹಣೇಗೆ ಇಕ್ಕೋದು ಚಂದ್ರ
ಸಂತೆಗೆ ಹೋದೋರು ಬಂದ್ರ
ನಮ್ಮನೇರು ಏನಾದ್ರು ಅಂದ್ರ........

೫೬೫. ಹತ್ತಿ ಹೂವಿನ ಸೀರೆ
ಮುತ್ತಿನ ಮಡ್ಲಕ್ಕಿ
ಅತ್ತೆ ನಾಗವ್ವನ ಮಗ........

೫೬೬. ಹತ್ತು ಕಟ್ಟಿನವರು
ಮುತ್ತಿನ ತುರಾಯಿನವರು
ಕುರ್ಚಿ ಮೇಲೆ ಕೂತುಕೊಂಡು
ಅರ್ಜಿ ಬರಿತಾರೆ.......

೫೬೭. ಹತ್ತು ಬೆರಳಿಗೆ ಹತ್ತು ಉಂಗ್ರ
ಮತ್ತೊಂದು ಬೆರಳಿಗೆ ಮುತ್ತಿನುಂಗ್ರ
ಹತ್ತು ಮಂದಿ ಒಳಗೆ ಹೌದಂತಾರೆ........

೫೬೮. ಹತ್ತು ಬೆಳ್ಗೆ ಹತ್ತು ಉಂಗ್ರ
ಮ್ಯಾಲೆ ಮುತ್ತಿನುಂಗ್ರ
ಅತ್ತೆ ಹೊಟ್ಟೇಲಿ ಹುಟ್ಟಿದ್ದಾರೆ
ಮುತ್ತಿನಂತೋರು........

೫೬೯. ಹತ್ತು ಬೆಳ್ಳಿಗೆ ಹತ್ತುಂಗ್ರ
ಮತ್ತೊಂದ್ ಬೆಳ್ಳಿಗೆ ಮುತ್ತಿನುಂಗ್ರ
ರತ್ನದ ಅಂಗ್ಡೇಲಿ ಕೂತುಗೊಂಡ್
ಮುತ್ತಿನ ವ್ಯಾಪಾರ ಮಾಡ್ತಾರೆ........

೫೭೦. ಹತ್ತು ರೂಪಾಯಿ ಹಸಿರು ಅಂಗಿ
ಮೂವತ್ತು ರೂಪಾಯಿ ಮುತ್ತಿನಂಗಿ
ಉಟ್ಕಂಡ್ ಹೋಗಂದ್ರೆ ಸೆಟ್ಕಂಡ್ ಹೋಗ್ತರೆ ....

೫೭೧. ಹತ್ತು ವರದ ಶಾಲು
ಮುತ್ತಿನ ಕೋಲು
ಹತ್ ಮಂದೀಲ್ ಕುಂತ್
ಹೌದ್ ಹೌದ್ ಅನ್ಸೆಗೆಂತಾರೆ........

೫೭೨. ಹತ್ತು ವರದ ಹಸಿರು ಅಂಗಿ
ಸರಿಕರ ಕಟ್ಟೆ ಮ್ಯಾಲೆ ಕುಳಿತುಕೊಂಡು
ವ್ಯಾಪಾರ ಮಾಡ್ತಾರೆ........



೫೭೩. ಹರಕು ಅಂಗೇರು
ನೆರಕೆ ಮನೆಯೋರು
ಕರಿಕೆ ಹೊಲ್ದವರು
ಕರ್ಕೆ ಹೊಲಕ್ಕೋಗಿ
ದಾರ್ಖಾಸು ಕೊಡ್ತರೆ........

೫೭೪. ಹರಕ್ ಮಚ್ಚೆ
ಮುರುಕ್ ಚಂಬು
ಮಸೂತಿ ಮ್ಯಾಲೆ ಕೂತ್ಕೊಂಡು
ಮಂಗ್ಯನಾಡುಸ್ತರೆ........

೫೭೫. ಹರ್ಕಗ್ಗ ಮುರುಕ್‌ನೊಗ
ಎತ್ತು ಎಳಯಲ್ಲ ಅಂತ
ಎದೆಎದೆ ಬಡ್ಕೊಂತಾರೆ........

೫೭೬. ಹರ್ಕಿ ಪಟಗಣ್ಣೆ, ಮುಕ್ಕ ನೇಗಿಲು
ಎಳಿಲಾರ್ದ ಎತ್‌ಕಟಿಗೆಂಡ್
ಎದಿಎದಿ ಗುದ್ಕೆಂತಾರೆ........

೫೭೭. ಹರಿಗೆ ಹುಡುಗಿ*
ಚೆಲುವಿನ ಬೆಡಗಿ
ಬೆಳ್ಳಿ ಕೊಡದಾಗೆ
ಪನ್ನೀರು ತರ್ತಳೆ........

೫೭೮. ಹರಿಶ್ಚಂದ್ರನನ್ನು ಕಾಡಿದವ ವಿಶ್ವಾಮಿತ್ರ
........ರ ಹೆಸರು ನನ್ನ ನಾಲಿಗೆಗೆ ಪರಮ ಪವಿತ್ರ

೫೭೯. ಹರಿಶ್ಚಂದ್ರ ಹೆಂಡ್ತಿ ಮಾರಿದುದು ಸತ್ಯಕ್ಕಾಗಿ
ನಮರಾಯರು........ರ ಹೆಸರು
ಹೇಳುವುದು ಪ್ರೀತಿಗಾಗಿ

೫೮೦. ಹಲ್ ಯಾಲಕ್ಕಿ
ಗಲ್ ಕಸ್ತೂರಿ
ಮಾತ್ ಮದ್ರಾಕ್ಷಿ

---

೫೭೮ * ಇದು ಗಂಡಸರು ಹೇಳುವ ಒಡಪು.

ಕಣ್ ರುದ್ರಾಕ್ಷಿ
ಅಪ್ಪರ ಕೂಟೆ ಒಪ್ಪುದ ಮಾತಾಡಿ
ಅಣ್ಣರ ಕೂಟೆ ಬಣ್ಣದ ಮಾತಾಡಿ
ತಮ್ಮರ ಕೂಟೆ ತಕ್ಕಂತ ಮಾತಾಡಿ
ತಕ್ಕಂತ ರಾಯರ್‌ಕೂಟೆ ನಕ್ಕಂತ ಮಾತಾಡ್ತನೆ........

೫೮೧. ಹಲಿಗ್ಯು ತೊಲಿಗ್ಯು
ತಾಲಿಗು ತಲೆಬಾಗಿಲಿಗು
ತೊಲಿಗು ಲೋಬಾನ್ಸು
ಹಸ್ತುಕು ಶಿಸ್ತುಕು
ಕಮಲದ ಹೂವಿನ ತ್ವಾಟದಾಗೆ
ತುಂಬೆ ಹೂವು ಎತ್ತಾರೆ........

೫೮೨. ಹಲ್ಲು ಅವಲಕ್ಕಿ
ತುಟಿ ರುದ್ರಾಕ್ಷಿ
ತಕ್ಕಂತ ನಾರಿಕೂಟೆ
ನಕ್ಕಂತ ಬರ್ತಾರೆ........

೫೮೩. ಹಲ್ಲು ಏಲಕ್ಕಿ
ಬಾಯಿ ಬಂಗಾರ
ತುಟಿ ರುದ್ರಾಕ್ಷಿ
ಮಾತು ಮದ್ರಾಸು
ತಕ್ಕಂತ ನಾರಿಕುಟ್ಟಾಗ
ನಕ್ಕಂತ ಬರುತಾರ........

೫೮೪. ಹಲ್ಲು ನೆಲ್ಲಕ್ಕಿ
ತುಟಿ ರುದ್ರಾಕ್ಷಿ
ಮಾತು ಮಲ್ಲಿಗೆ
ಹೆಣ್ಮಕ್ಳು ಹುಟ್ಟೋದು
ನೆರಮನೆ ಸಲುವಾಗಿ
ಗಂಡ್ಮಕ್ಳು ಹುಟ್ಟೋದು
ಮನೆ ಸಲುವಾಗಿ
ನಾವು ಹೆಸರು ಹೇಳೋದು
ಆರತಿ ಸಲುವಾಗಿ



೫೮೫. ಹಸರು ಹಾಗಲಕಾಯಿ
ಕುಸುರು ಬದ್ನೆಕಾಯಿ*
ಹಸುಮಕ್ಳ ಎತ್ಕೊಂಡು**
ಹಸ್ಕೊಂಡ್ ಬರ್ತಾರೆ........

೫೮೬. ಹಸಿರುದಟ್ಟಿ ಬೆಳ್ಳಿ ಪಟ್ಟಿ
ನನ್ನ ಗಂಡ್ನ ಹೆಸರು ಕೇಳಿದೋರ್ಗೆ
ಸ್ವಾಟ್ಗೆ ಎಟ್ಟಿ........

೫೮೭. ಹಸಿರು ಭೂಮಿಗೆ ಚೆಂದ
ಬಸಿರು ನಾರಿಗೆ ಚೆಂದ
ಕಮಲಕ್ಕೆ ಕೆಸರೇ ಚೆಂದ
ನಮ್ಮ ಪತಿಗೆ ನಾನೇ ಚೆಂದ........

೫೮೮. ಹಸಿರು ಸೀರೆ ಬಂಗಾರದ ಪಟ್ಟಿ
ಎಷ್ಟು ಹೊಡಿತಿಯ ಹೊಡಿ
ಹೊಲಕ್ಕೆ ಹೋಗೋಣ ನಡಿ........

೫೮೯. ಹಸರುದಟ್ಟಿ ಬಂಗಾರದ ಪಟ್ಟಿ
ಕುರ್ಚಿ ಮ್ಯಾಗೆ ಕುತಗಂಡ್
ಅರ್ಜಿ ಬರಿತಾರೆ........

೫೯೦. ಹಸುರು ಬಳ್ಳಿ ಹಂದ್ರ ಚೆಂದ
ದ್ರಾಕ್ಷಿ ಬಳ್ಳಿ ಗೊಂಚಲು ಚೆಂದ
ನಗಿಮುಖದವ್ರು........ನಕ್ರೆ ಚೆಂದ

೫೯೧. ಹಸುರು ಸೀರೆ ಉಟ್ಟುಕೊಂಡು
ಬಂಗಾರ ಪಟ್ಟಿ ಇಟ್ಟುಕೊಂಡು
ನೆಟ್ಟುಗೆ ನಿತಗಂಡ್ರೆ
ಸೆಟಗಂಡ್ ಹೋಗ್ತಾರೆ........

---

೫೮೫. *ಬಿಸಿಲು ತೊಂಡೆಕಾಯಿ/ಬೆಂಡೆಕಾಯಿ
**ಹಸುಮಗ್ನ ಎತ್ತಿಕೊಂಡು
ಬಿಸಿಲಾಗೆ ಬರ್ತಾರೆ........

೯೨. ಹಸುರು ಹಾಗಲ್ಕಾಯಿ
ಕುಸುರು ಕುಂಬಳಕಾಯಿ
ಚಂದ್ರಮತಿ ಜವಳಿಕಾಯಿ
ಮುಗುಲು ಮೋತಿ ಮುಳಗಾಯಿ
ವರಾಕೊಟ್ಟ ಹುಣಸೆಹಣ್ಣು
ಗುಂಬ್ಳಗಾಳು ಗೋದಿ ಹುಗ್ಗಿ
ಕೈಲಾಡ್ದ ಖರ್ಜಿಕಾಯಿ
ಕೈಲಾಡ್ದ ಸುರಂಗದೊಳಗೆ
ಅಂಪಿಗೆ ಬಾನ
ಸಂಪಿಗೆ ತುಪ್ಪ
ರಸ ಮಾಡಿ ತುಸ ಉಣ್ತಾರೆ........

೯೩. ಹಸುರು ಹಾಗಲ್ಕಾಯಿ
ಕುಸುರು ಬೆಂಡೆಕಾಯಿ
ಹಸುಮಕ್ಳಂಗ್ ಹಸುಗಂಡ್ ಬರ್ತಾರೆ........

೯೪.೧ ಹಳ್ಳದಾಗೆ ನಿಂತ್ಗಂಡ್
ಅಳ್ಳುದುಂಗ್ರ ಇಟ್ಕಂಡ್
ಒಳ್ಳೊಳ್ಳೇರ್ನ ಬೇಡ್ತಾರೆ........

೯೪.೨ ಹಳ್ಳಳ್ಳಿ ತೇರು
ನೋಡಾಕೆ ಬಲು ಜೋರು
ಮಾಡ್ತಾರೆ ದರ್ಬಾರು
ಅವರೆ ನನ್ನ ಸರ್ದಾರ್ರು........

೯೫. ಹಳೆ ಜನರ ತಲೆ ಕೆಡಿಸಿದ್ದು ವರದಕ್ಷಿಣೆ
ನಾನು ಮಾಡಿದ್ದು........ರ ರಕ್ಷಣೆ

೯೬. ಹಾಕಿದ್ರೆ ಮೂರಕ್ಕಿ ರೊಟ್ಟಿ
ಮಜ್ಗಿದ್ರೆ ಮೂರು ರಾಗಿರೊಟ್ಟಿ
ಅಕ್ಕ ತಂಗೇರ ಕತ್ತೆ ಗೂಟಕ್ಕೆ ಕಟ್ಟಿ
ಬುಡ್ಸೊಕ್ಕೋಗವ್ರೆ........



೯೭. ಹಾ ಜಾಣೆ ಓ ಜಾಣೆ
ಕಾಲು ಎಲೆ
ಸಟಪಟ........ಮಲ್ಲಯ್ಯನಿಗೆ

೯೮. ಹಾದಿಗೆ ಹಂದ್ರವೇ ಚಂದ
ನಮ್ಮೊರು........ರಿಗೆ ನಾನೇ ಚಂದ

೯೯. ಹಾಲ ಮೇಲಿನ ಕೆನಿ
ಜೇನುತುಪ್ಪದ ಹನಿ
ನಾ ಮಾಡೇನಿ........ರ
ಹೃದಯದೊಳಗೆ ಮನಿ

೧೦೦. ಹಾಲಿಗೆ ಹಾಕೋದ್ ಹೆಪ್ಪ
ಸಾರಿಗೆ ಹಾಕೋದ್ ಉಪ್ಪ
ನಾನು ಮದುವ್ಯಾಗಿದ್ದು ಬಲುತಪ್ಪ*

೧೦೧. ಹಾವಿಗೆ ಹುತ್ತೇ ಚಂದ
ಕೊರಳಿಗೆ ಮುತ್ತೇ ಚಂದ
ಆಕಾಶಕ್ಕೆ ಚಂದ್ರ ಚಂದ
ನನಗೆ ನನ್ನ ಪತಿ........ಚಂದ

೧೦೨. ಹಾವಿಗೆ ಹೆಡೆ ಚಂದ
ಹೂವಿಗೆ ಮಿಡಿ ಚಂದ
ಹಾರಾಡಿ ಬರುವ ಗಾಳಿ ಚಂದ
........ರು ನನ್ನ ಕರೆಯೋದನಿ ಚಂದ

೧೦೩. ಹಾಸ್ಗೆ ಮಂಚ ರೇಷ್ಮೆ ಕುಂಚ
ದೇಶ್ ದೇಶಕ್ಕೆಲ್ಲ ಅಧಿಕಾರಸ್ತರು........

---

೧೦೦. *ಬೇಲಿ ಮ್ಯಾಗಳ ಸೊಪ್ಪು
ನಾನು ಮಾಡುವ ಕೆಲಸ
ರಾಯರಿಗೆ ಒಪ್ಪು........

*ಬಂದ್ ಬಂದೋರ್ನೆಲ್ಲ ಬಿಟ್ರು
ನನ್ ಮೇಲೆ ಕಣ್ಣಿಟ್ರು........

೬೦೪. ಹಾಸ್ಗೆ ಹಾಸಿರ್ಬೇಕು
ಕೂಸು ಮನಗಿರಬೇಕು
ಲೋಬಾನದ ಹೊಗೆ ಆಡ್ತಿರಬೇಕು.
ಸಿಂಗಾರ ಮಣೆಮ್ಯಾಲೆ ಕೂತಗಂಡ್
ಶಿವಪೂಜೆ ಮಾಡ್ತಾರೆ........

೬೦೫. ಹಾಳಾದದ್ದು ಹೈದರಾಬಾದ್
ಗೋಳಾಡಿದ್ದು ಮುನಿರಾಬಾದ್
ಹೋರಾಡಿದ್ದು ಸಿಕಂದರಾಬಾದ್
ನಮ್ಮವರ ಮಾತು ಎಲ್ಲಾ ಬಾದ್........

೬೦೬. ಹಿಂದಿನವರು ಪುರಾಣಪ್ರಿಯರು
ಇಂದಿನವರು ಸಿನಿಮಾ ಪ್ರಿಯರು
ನನ್ನ........ರಾಯರು ಸಾಹಿತ್ಯ ಪ್ರಿಯರು

೬೦೭. ಹಿಡಿ ಉಂಗರದೋರು
ಮಡಿ ಜೋತ್ರದೋರು
ನಡುಗೇರಿಲಿ ನಿಂತ್ಕೊಂಡು
ಸ್ನಾನ ಮಾಡ್ತಾರೆ........

೬೦೮. ಹಿರಣ್ಯಾಕ್ಷ ಹಿರಣ್ಯಕಶ್ಪರ ತಪ ಪ್ರಭಾವಕ್ಕೆ ಮೆಚ್ಚಿ
ಬ್ರಹ್ಮದೇವನು ಅವರಿಗಿತ್ತನು ವರ
ಆಗ ದೇವತೆಗಳು ಅವರ ಮೇಲೆ
ಹಲ್ಲು ತಿನ್ನುತ್ತಿದ್ದರು ಕರಕರ
........ರ ಪಾದಸೇವೆಯೇ ನಮಗೆ ಪ್ರಿಯಕರ

೬೦೯. ಹೀರೆ ಕಾಯಿ ಇರ್ತ
ಉಳ್ಳಗಡ್ಡೆ ಕೊರ್ತ
ಮನೆ ಹೆಣ್ಣಿನ ಮರ್ತ........

೬೧೦. ಹಿರೇ ಮಠದ ಚನ್ನಪ್ಪಸ್ವಾಮಿ ಶ್ರೇಷ್ಠ
ಶಿಕಾರಿಪುರದ ಹುಚ್ಚರಾಯನ ಮಠವೇ ಶ್ರೇಷ್ಠ
ನಮಗೆ ನಮ್ಮ ಗುರುವೇ ಶ್ರೇಷ್ಠ........

೬೧೧. ಹುಚ್ಚೆಳ್ಳು ಎಣ್ಣೆ
ಉದುರುಗಂಟ ಅನ್ನ



ಪನ್ನೀರಿನ ಗಿಂಡಿ
ಸುಮ್ಮನೆ ಉಂಡು
ಸೂಳೆ ಮನೆಗೆ ಹೋಯ್ತಾರೆ........

೬೧೨. ಹುಟ್ಟಿ ಬಂದಾಗ ಇರಲಿಲ್ಲ
ಆವಳಿ ಬಂದಾಗ ತೆಗೆಯಲಿಲ್ಲ
ವಿದ್ಯಾಭ್ಯಾಸದವರಾಗಿ ಮದುವೆ ಮಾಡಿಕೊಂಡು
ನನ್ನ ಸಂಬಾಳಿಸುತ್ತಾರೆ........

೬೧೩. ಹುಡುಗಿ ಅಂತ ಕರಿತಾರ
ಹುಡುಗಾಟ್ಕ ಮಾಡ್ತಾರ
ಅತ್ತೆ ಮಾತು ಕೇಳ್ತಾರ
ಲತ್ತೆ ಏಟು ಹಾಕ್ತಾರ........

೬೧೪. ಹುತ್ತಕ್ಕೆ ಹಾವು ಚಂದ
ಕೊರಳಿಗೆ ಮಾಂಗಲ್ಯ ಚಂದ
ನಮ್ಮೋರು........ಗೆ ನಾವೆ ಚಂದ

೬೧೫. ಹುಬ್ ನೋಡು ಹುಬ್ಬಳ್ಳಿ ನೋಡು
ತಿದ್ದಿ ನೋಡು ತಿಮ್ಮಾಪುರದ ಕೆರೆನೋಡು
ಕೆರೆ ಮೇಲ್ ಬರೊ ನಾರಿ ನೋಡು
ನಾರೀ ತಲೆ ಮೇಲೆ ಸಿಂಬೆ ನೋಡು
ಸಿಂಬೆಮ್ಯಾಲೆ ಕೊಡನೋಡು
ಕೊಡದ ಮೇಲೆ ಕೈನೋಡು
ಕೈ ಮೇಲೆ ಹಚ್ಚೆ ನೋಡು
ಹಚ್ಚೆ ನೋಡಿ ಮೆಚ್ಚಿ ಬಂದ್ರು........

೬೧೬. ಹುಬ್ ನೋಡು ಹುಬ್ಬಳ್ಳಿ ನೋಡು
ಹುಬ್ಬಳ್ಳಿ ಕೆರೆ ನೋಡು
ಕೆರ್ಯಾಗ್ಳು ಮಬ್ ನೋಡು
ಮಬ್ಬಿನ್ ಮ್ಯಾಲ್ ಬಲೆನೋಡು
ಬಲೆ ಮ್ಯಾಲಿನ ಸಿಂಬೆನೋಡು
ಸಿಂಬೆ ಮ್ಯಾಲ್ ಕೊಡನೋಡು
ಕೊಡದ ಮ್ಯಾಲ್ ಕೈನೋಡು

ಕೈ ಮ್ಯಾಲ ಹಚ್ಚೆ ನೋಡು
ಹಚ್ಚೆ ನೋಡಿದ್ರೆ ಮೆಚ್ಚಿ ಬರ್ತಾರೆ........

೬೧೭. ಹುಗ್ಗಿ ಅಂದ್ರೆ ಬಲು ಹಿಗ್ಗು
ಸಿಗ್ಗು ಅಂದ್ರೆ ನಮ್ಮವರ ಮುಖ ಪೆಗ್ಗು

೬೧೮. ಹೂವಿನಲ್ಲಿ ಮಲ್ಲಿಗೆ ಹೂವು ಚೆಂದ
ಊಟದಲ್ಲಿ ಸಿಹಿ ಊಟ ಚೆಂದ
ಕೂಟದಲ್ಲಿ.........ರು ಚೆಂದ

೬೧೯. ಹೆಂಚಿನ ಮನೆಬಿಟ್ಟು
ಕಂಚಿನ ಕದಬಿಟ್ಟು
ಉಣ್ಣೋ ಊಟ ಬಿಟ್ಟು
ಮಲಗೋ ಮಂಚಬಿಟ್ಟು
ಮುತ್ತಿನಂಥ ಮೂರು ಮಕ್ಕಳ ಬಿಟ್ಟು
ಗತಿಗೆಟ್ಟಳ ಮನೆಗೆ ಮತಿಗೆಟ್ಟು ಹೋಗ್ತರೆ........

೬೨೦. ಹೆಗ್ಣ ಹೊಡ್ಕೊಂಡು
ಹೆಗಲಿಗೆ ಹಾಕ್ಕೊಂಡು
ನುಗ್ಗೇಹಳ್ಳಿ ಸಂತೆಗೆ*
ಯಾಪಾರ್ಕ್ಕೋಗವ್ರೆ........

೬೨೧. ಹೆಣ್ಮಕ್ಳು ಹುಟ್ಟೋದು ನೆರಮನೆ ಸಲುವಾಗಿ
ಗಂಡ್ಮಕ್ಳು ಹುಟ್ಟೋದು ಮನೆ ಸಲುವಾಗಿ
ನಾನು ಹೇಳದು ಆರತಿ ಸಲುವಾಗಿ........

೬೨೨. ಹೆಣ್ಣು ಹುಟ್ಟೋದು ಹೆರವರಿಗಾಗಿ
ಗಂಡು ಹುಟ್ಟೋದು ಮನೆಯ ಕೀರ್ತಿಗಾಗಿ
ಮಕ್ಕಳು ಹುಟ್ಟೋದು ಮನೆಯ ಶೋಭೆಗಾಗಿ
........ರ ಹೆಸರು ಹೇಳುವೆನು ನಿಮ್ಮೆಲ್ಲರ ಪ್ರೀತಿಗಾಗಿ

೬೨೩. ಹೆಸರು ಹಾಗಲಕಾಯಿ
ಕೆಸರು ನೆಲ್ಲಿಕಾಯಿ

---

೬೨೦. *ನುಗ್ಗೇ ಮರದಾಗೆ ಬಗ್ಗಿ ಬಗ್ಗಿ ನೋಡ್ತರೆ........



ಮೊಸರಲ್ಲಿ ನಿತ್ಕೊಂಡು
ಹೆಸರು ಹೇಳ್ತಾರೆ........

೬೨೪. ಹೆಸರು ಹೇಳಕೆ ಚಂದ
ಕತೆ ಕೇಳಕೆ ಚಂದ
ನೋಡಕೆ ನಾ ಚಂದ
ನಮ್ಮ.... ..ರಿಗೆ

೬೨೫. ಹೆಸ್ರು ಮಸ್ರು ಪಜ್ಜ
ಮಾಡ್ದೋರತ್ತೆ ಉಂಡೋರು ಗೌಡ್ರು
ನಾವೇನ್ ಬಲ್ಲೊ ನೆರ್ಮನೆ ಮಕ್ಳು
ತಡಿಬ್ಯಾಡಿ ಬುಡಿ........

೬೨೬. ಹೇಳಲಿಕ್ಕೆ ಹೆಸರು ಚಂದ
ಕೇಳಲಿಕ್ಕೆ ಕತೆ ಚಂದ
ರಾಮನಿಗೆ ಸೀತೆ ಚಂದ
........ರಿಗೆ ನಾನೆ ಚಂದ

೬೨೭. ಹೊತ್ತು ಮುಳುಗುವುದು ಬಾನಿನಲ್ಲಿ
ಮುತ್ತು ಇರುವುದು ಮಾತಿನ ಕಡಲಲ್ಲಿ
ಸ್ನೇಹ ಸಂಬಂಧ ಇರುವುದು........ರಲ್ಲಿ

೬೨೮. ಹೊನ್ನುಂಗ್ರ ಇಟ್ಟಾರೆ
ಹೊಟ್ಟಿನ ಬಣವೆ ಮುಂದಿಟ್ಟಾರೆ
ಮುತ್ತಿನಂತ ಮಕ್ಳು ಕಂಡ್ ಮುದ್ದಾಡ್ತಾರೆ........

೬೨೯. ಹೊನ್ನೂರ ಅರಸನ ಮಗ ಬಂದಾನು
ನಾರಿ ಒಬ್ಬಳ ಕಂಡಾನು
ಸಾರಿ ಕಣ್ಣಿಟ್ಟಾನು
ನೋಡಿ ಕಣ್ಣಿಟ್ಟಾನು
ಕಣ್ಣಾ ಇಟ್ಟು ಕೈಯಾ ಹಿಡಿದು
ಹ್ಯಾಗೆ ಸಾಕಲೆಂದನು
ಹ್ಯಾಗೆ ಸಲುಹಲೆಂದನು
ಗೆದ್ದ ಕಾಣೊ ಮದುವಳಿಗ
............ಗೆದ್ದ ಕಾಣೊ

೬೩೦. ಹೊರಗಡೆ ಕೂತ್ಕೊಂಡು
ಹುರ್ಗಡ್ಲೆ ತಿಂತಾರೆ........

೬೩೧. ಹೊಸ ಅಂಡೆಯಾಗೆ ಬಿಸಿನೀರು ಕಾದವೆ
ಬಸವನ ಪಾದದ ಹೂವು ಅರಳ್ಯಾವೆ
ಜಳ್ಕ ಮಾಡು ಅಂದ್ರೆ ಜಗಳ ಮಾಡ್ತಾರೆ
ಊಟ ಮಾಡು ಅಂದ್ರೆ ಹಟ ಮಾಡ್ತಾರೆ
ನೀಲಿ ಅಂಗಡಿಯಾಗೆ ನಿದ್ರೆ ಮಾಡ್ತಾರೆ
ಯಾಲಕ್ಕಿ ಅಂಗಡಿಯಾಗೆ ಯಾಪಾರ ಮಾಡ್ತಾರೆ........

೬೩೨. ಹೊಸ ತಪ್ಲ್ಯಾಗ್ ಬಿಸ್ನೀರ್ ಕಾದ್ದಾವ್
ಬಸವನ ಪಾದ ಹೂವು ಅಳ್ಳಾಕ್ ಬಂದಾವ್
ಜರ್ತಾರಿ ಮಡಿ ತಗಂದ್ ಜಳಕಕ್ ಹೋಗ್ತಾರೆ........

೬೩೩. ಹೊಸ ಮರ್ಕೆ
ಮೂರು ಹೆಸ್ರು ಕಾಳಾಕ್ಕೊಂಡು
ಕೊಸರಾಡ್ತರೆ........

೬೩೪. ಹೊಳೆಗೆ ನೀರು ಚಂದ
ಪೇಟೆಗೆ ಲೈಟು ಚಂದ
ಬುಗುಡಿಗೆ ಮುತ್ತು ಚಂದ
........ರು ನಮಗೆ ಚಂದ

೬೩೫. ಹೋತನ ಮ್ಯಾಲೆ ಕೂತ್ಕೊಂಡು
ಹೊನ್ನಿನುಂಗ್ರ ಇಕ್ಕೊಂಡು
ಮಾತು ಮಾತ್ಗೆಲ್ಲ ಕ್ಯಾತೆ ತಗಿತಾರೆ........

೬೩೬. ಹೋರಿಗೆ ಹಾಕುವುದು ಹೊಟ್ಟು
ಈಗಿನವರು ಜರತಾರು ಕಟ್ಟು
........ಅವರ್ದು ನಮ್ದು ಒಂದೆ ಗುಟ್ಟು

## ಗಂಡಸರು ಹೇಳುವ ಒಡಪುಗಳು

೬೩೭. ಅಂಕೆ ತೋಳ್ಳೋಳು
ತಂಕೆ ಕುಬುಸ್ತೋಳು
ನನ್ನಂಕೆಯಲ್ಲಿ ಇರೋಳು........

೬೩೮. ಅಂಚಿನಾಗ್ಳ ರೊಟ್ಟಿ
ಅರರ್ಕ್ಕಂಡು ತಿಂತಾಳೆ........

೬೩೯. ಅಂಡೇವ್ ಮೆಣಸಿನಕಾಯಿ
ಕುಂಡೀಲರಿತಾಳೆ........

೬೪೦. ಅಂಡೇವು ಸಂದೀಲಿ
ಉಂಡೆ ತಿಂತಾಳೆ........

೬೪೧. ಅತ್ತೆ ಮಗಳು ಮುತ್ತಿನ ಚಂಡು
ಮಾವನ ಮಗಳು ಮಾತಿನಗಿಣಿ
ನನ್ನರಸಿ ಪಟ್ಟದರಸಿ
ಮುದ್ದು ಮುಖ ತಾರೆ
ಅರಸುಣ ಹಚ್ಚುವೆನು........

೬೪೨. ಅತ್ತೆ ಮಗಳೆ ಕೊತ್ತಿ ಮರಿಯೆ
ನನ್ನ ಚಿನ್ನದ ಸದರ ಬಿಟ್ಟು
ನಿನ್ನ ಬೆಳ್ಳಿ ಸದರಕ್ಕೋಗೆ........

೬೪೩. ಅರಗಿನ ಕೊಡ ಸೆರಗಿನ ಸಿಂಬೆ
ಶೀಲವಂತರ ಮಗಳು ಸೀತಾದೇವಿ
ದಾರಿಬಿಡು ಅಂದ್ರೆ ಮೋರೆ ನೋಡ್ತಾಳೆ........

೬೪೪. ಅರನಾರಿ ಪರನಾರಿ
ನನ್ನರಸಿ ಪಟ್ಟದರಸಿ........

೬೪೫. ಆಲುಕ್ ಮಲುಕ್ ಚಿಲುಕ್ ಚಿತ್ತಾರ
ನಿಲುಕಲಾರ್ದ್ದ ಹೂವ ನಿಗನಿಗರಿ ಹರಿತಾಳೆ........

೬೪೬. ಆಕಾಶಕೆ ಚಂದ್ರ ಚಂದ
ಹಣೆಗೆ ಕುಂಕುಮ ಚಂದ
ನನಗೆ ನನ್ನ ಹೆಂಡತಿಯೇ ಚಂದ........

೬೪೭. ಆರ್ಮರ ಎಳ್ಳು
ಮೂರ್ಮರ ಜಳ್ಳು
ಹದ ಮಾಡಂದ್ರೆ
ಕದ ಹಿಡ್ಕಂಡ್ ನಿತಗಂತಾಳೆ........

೬೪೮. ಆರು ಮಣ ಹಿಟ್ಟು
ಮೂರು ಮಣ ಸಕ್ರೆ
ಹದ ಹಿಡಿ ಅಂದ್ರೆ ಕದ ಹಿಡಿತಳೆ........

೬೪೯. ಆರು ಮೂರು ಬಕ್ರಿ ತಿಂದು
ಬಾಳೆಗೆಡ್ಡೆ ನೀರು ಕುಡಿದು
ಹಗ್ಗದಲ್ಲಿ ಹೊಡೆದರೆ ಬಗ್ಗಿ ಬರುತಾಳೆ........

೬೫೦. ಉಪ್ಪಿಟ್ಟು ನೀಡ್ತಾಳೆ
ತುಪ್ಪ ಹಾಕ್ತಾಳೆ
ತವರ ಮನೆಗೆ ಹೋಗ್ತಾಳೆ........

೬೫೧. ಊರಿಗಿಂತ ಉದ್ದನೋಳು
ಊರಾಳ ಬಾವಿ ನೀರಿಗೆ ಹೋಗೋಳು
ಜೋಡು ಕೊಡುವ ಹೊತ್ತು
ಜೋತಾಡುತ್ತ ಬರುವೋಳು........

೬೫೨. ಎನ್ನರಸಿ
ಚೆನ್ನರಸಿ
ಪಟ್ಟದರಸಿ
ಪ್ರಾಣಕಾಂತೆ
ನಿನ್ನ ರೂಪು
ಮೋಹವುಕ್ಕಿ
ನಿನ್ನ ಲಾವಣ್ಯ
ನಾನು ಮೆಚ್ಚಿ



ನೋಡಿ ಬೆರಗಾದೆ
ನವರತ್ನ ಮೋಹನಾಂಗಿ
ನನ್ನ ಮೆಚ್ಚಿ ಬಂದಿದೀಯ
ನನ್ನ ಅಕ್ಕಿಯಾಣೆ ಮ್ಯಾಲೆ
ನಿನ್ನ ಉಪ್ಪಿನಾಣೆ
ಬಲಗಾಲು ಮುಂದಾಗಿ ಬಾರೆ
ಮೋಹನಾಂಗಿ............

೬೫೩. ಎನ್ನರಸಿ
ಚೆನ್ನರಸಿ
ಪಟ್ಟದರಸಿ
ಪ್ರಾಣಕಾಂತೆ
ಮುದ್ದು ಮೂಪೊನ್ನೆ
ಗುಣ ಸಂಪನ್ನೆ
ಭಾಗ್ಯೇವು ಸಂಪನ್ನೆ
ಬಳಗ ಸಂಪನ್ನೆ
ನನ್ನ ಚದ್ರ ಬಿಟ್ಟು
ನಿನ್ನ ಚದ್ರುಕ್ಕೋಗು........

೬೫೪. ಕಟ್ಟೆಯ ಮೇಲೆ ಕರ
ಉತ್ತುತ್ತೆ ಸರ
ನನಗೂ ನನ್ನೆಂಡ್ತಿ........ಗೂ ವರ

೬೫೫. ಕತ್ತಿಗಿ ಕಾರ್ತೀಕದ ಕಡ್ಲಿ
ನಮ್ಮ ಗಾಡಿ ಅದ್ಲಿ
ನನ್ ಹೇಣ್ತಿ ಬಲು ತೊದ್ಲಿ........

೬೫೬. ಕರುಂ ಕುರುಂ ಸೌತೇ ಕುಡಿ
ನಾನು ಉಡೋದು ರೇಷ್ಮೆ ಮಡಿ
ಅವಳು ಉಡೋದು ನಾರುಮಡಿ
ನನ್ನ ಕೂಡಿದವಳ ಹೆಸರು........

೬೫೭. ಕರೆಕೋಟು ಹಾಕಿದ್ದೆ
ಕಟ್ಟಿರಿಬೆ ಸಾಲು ಮೆಟ್ಟಿದ್ದೆ

ಸಾಗರ ಸೂಳೆ ಇಟ್ಟಿದ್ದೆ
ಶಿಕಾರಿಪುರದ ಸೂಳೆ ಬಿಟ್ಟಿದ್ದೆ
........ಮ್ಯಾಲೆ ಮನಸ್ಸಿಟ್ಟಿದ್ದೆ

೬೫೮. ಕಾಡೋಳಲ್ಲ ಬೇಡೋಳಲ್ಲ
ಬಿಡಿ ಮಾತ ಕೇಳೋಳಲ್ಲ
ಇದ್ದುದರಲ್ಲಿ ತೃಪ್ತಿ ಪಡ್ತಾಳೆ........

೬೫೯. ಕಾಲೇಜು ಹೋಗ್ಲಿಲ್ಲ
ಇಂಗ್ಲಿಷ್ ಬರಿಲಿಲ್ಲ
ಲೆಕ್ಚರ್ ಆಗ್ಲಿಲ್ಲ
ಗಣಿತ ಲೆಕ್ಕ ಗೊತ್ತಿಲ್ಲ
ಕನ್ನಡ ಇಂಗ್ಲಿಷ್ ಮರ್ತಿಲ್ಲ
ಓದಿ ಬಾರಮ್ಮ ಮಗಳೆ ಅಂದ್ರೆ
ನೋಡಿ ಬರ್ತಿನಿ ಅಂತ ಹೊರಡ್ತಾಳೆ.......

೬೬೦. ಕಾಸಿನ ಕಡ್ಲೆ ತಂದು ರಾಶಿ ಹಾಕಿದಿನಿ
ಕುರಿ ಮೇದಂಗೆ ಮೆಯ್ತಾಳೆ........

೬೬೧. ಕುಲ ಹೇಳ್ಕಂಡು
ಕುಣಿಕತ್ತ ಬತ್ತಾಳೆ........

೬೬೨. ಕುಲಾಯಿ ಕಟ್ಕೊಂಡು
ಕುಣಿತ ಬತ್ತಾಳೆ........

೬೬೩. ಕೈಗೆ ರೊಕ್ಕ ಚಂದ
ಕೋಳಿಗೆ ಪುಚ್ಚ ಚಂದ
ನನ್ನ ಸತಿಗೆ ನಾನೇ ಚಂದ

೬೬೪. ಖಂಡ್ಗ ಮೆಣಸಿನಕಾಯ
ಕುಂಡ್ಯಾಗೆ ರುಬ್ತಾರೆ.......

೬೬೫. ಗಂಗಾ ಸ್ನಾನ ತುಂಗಾ ಪಾನ
........ಳು ಬಲು ಸಮಾಧಾನ



೬೬೬. ಗಾಂಧೀಜಿ ಬಾಳಿದ್ದು ಸ್ವತಂತ್ರಕ್ಕಾಗಿ
ನೆಹರು ಬಾಳಿದ್ದು ದೇಶಕ್ಕಾಗಿ
ನಾನು........ಳ್ನ ಕಟ್ಕಂಡು ಬಾಳೋದು ಧರ್ಮಕ್ಕಾಗಿ

೬೬೭. ಗ್ವಾದ್ಲಗೆ ಕೊತುಗೊಂಡ್
ಮಾಲ್ದಿ ಮುಕ್ತಾಳೆ........

೬೬೮. ಗುಂಗರ ಕೂದ್ಲೋಳು
ಮುಂಗ್ನ ಬುದ್ದೋಳು
ಅಂಗ್ಳದಾಗಿನ ಕಸ*
ಬಂಗಾರದಂಗೆ ಹೊಡಿತಾಳೆ........

೬೬೯. ಗುಲಾಬಿ ಹೂವಿನ ಗುಂಪು
ಮಲ್ಲಿಗೆ ಹೂವಿನ ಕಂಪು
ನನಗಿಂತ ಕೆಂಪು ನನಹೆಣ್ತಿ........

೬೭೦. ಗೆಜ್ಜೆ ಕೊಡ ಹೊತ್ಕೊಂಡು
ಗದ್ದುಲಸ್ತಾ ಬರ್ತಾಳೆ........

೬೭೧. ಚಂದ್ರನ ಪತ್ನಿ ರೋಹಿಣಿ
........ಳು ನನ್ನ ರೋಹಿಣಿ

೬೭೨. ಜಾಜಿ ಮಲ್ಲಿಗೆ ಸೂಜಿ ಮಲ್ಲಿಗೆ
ಇದ್ದಲ್ಲಿಗೆ ಹೋಯ್ತಾಳೆ
ಸದ್ದಿಲ್ಲದೇ ಸರಿತಾಳೆ........

೬೭೩. ಜಾಜಿ ಹೂ ಜರದ ಹೂ
ಕುನ್ನಿ ಹೂ ಕುಸುಬಿ ಹೂ
ನನ್ನ ಮ್ಯಾಲೆ ಬಾಳ ಕುಸಿಂದಿದಾಳೆ........

೬೭೪. ತಂದ್ರೆ ಬಂದ್ರೆ ಹಿಗ್ತಾಳೆ
ತರದೇ ಬಂದ್ರೆ ಕುಗ್ತಾಳೆ
ಮಂದಿ ಇದಿರಿಗೆ ಬಹಳ ಹಗ್ಗು ಮಾಡ್ತಾಳೆ........

---

೬೬೮. *ಬಂಗಾರದ ಕೋಣೆಗೆ ಕೂತ್ಗಂಡು
ಬಾನ ಬಸಿತಾಳೆ........

೬೭೫. ತಡೆ ಮ್ಯಾಲ್ ತಡೆ
ಕೊತ್ತುಂಬ್ರಿ ಮಡೆ
ಸಾರಿಗಾಕೋದು ಉಪ್ಪು
ಕಾಫಿ ಕುಡಿಯೋದು ಕಪ್ಪು
ಎಷ್ಟು ಹೊಡಿತಿ ಹೊಡಿ
ಮಂದಿ ಕರಿತೀನ್ ತಡಿ ಅನ್ತಾಳೆ........

೬೭೬. ತರಕು ತಲೆ ಬಿಟ್ಕೊಂಡು
ಹರಕು ಸ್ಯಾಲೆ ಉಟ್ಕಂಡು
ಇಣಕಿ ಇಣಕಿ ನೋಡ್ತಾಳೆ........

೬೭೭. ತ್ರೀ×ತ್ರೀ =ನೈನ್
ವೈ ವೈಫ್ ಈಸ್ ವೆರಿ ಫೈನ್........

೬೭೮. ತೂತಿನ ಕೊಡ ಹೊತ್ಕೊಂಡು
ತೂಕಡಿಸಿಕೋತಾ ಬತ್ತಾಳೆ........

೬೭೯. ತೂತು ಗಡಿಗೇಲಿ
ತೂಗುಡಿಸಿಕೊಂಡು
ನೀರು ತತ್ತಾಳೆ........

೬೮೦. ತೊಡಿ ಮೇಲೆ ತೊಡಿ
ಎಷ್ಟು ಹೊಡಿತಿ ಹೊಡಿ
ಸಿನಿಮಾಕ್ಕೆ ಕರ್ಕಂಡು ನಡಿ ಅಂತಾಳೆ........

೬೮೧. ದಕ್ಷನ ಮಗಳು ಸತಿ
ಸೌಂದರ್ಯಕ್ಕೆ ರತಿ
........ಳೆ ನನಗೆ ತಕ್ಕ ಜೊತೆ

೬೮೨. ದೊಡ್ಡ ಗುಡ್ಡದಲ್ಲಿ ಆಲದ ಮರ
ಆಲದ ಮರದಲ್ಲಿ ಓಲೆ
ಓಲೆ ಮುಖದ ಹುಡುಗಿ........

೬೮೩. ನಾಲ್ಕು ನಾಲ್ಕು ಎಂಟು
ನನಗೂ........ಳಿಗೂ ಗಂಟು



೬೮೪. ಪಾಂಡವರಿಗೂ ಕೌರವರಿಗೂ ಮೊದಲಿನಿಂದಲೂ ಹಗೆ
ನನಗೆ ಸಂತೋಷ ಕೊಡುವುದು........ಳ ಮುಗುಳು ನಗೆ

೬೮೫. ಬಗ್ಗ್ಯಾಗೆ ಪುಟಾಣಿ
ಮಗ್ಗ್ಯಾಗೆ ಕಟ್ಟ್ಯಾಣಿ
ನನಗಿಂತ ನನ್ನ ಹೆಣ್ತಿ
ಬಲು ಚಟಾಣಿ........

೬೮೬. ಬ್ರಹ್ಮನ ಹೆಂಡತಿ ವಾಣಿ
........ಳು ಮಾತಿನಲ್ಲಿ ಬಲು ಜಾಣೆ

೬೮೭. ಬುಟ್ಟಿನ್ ರೊಟ್ಟಿ ನೆಟ್ಟಿನ್ ಮೆಣಸಿನಕಾಯಿ
ಗುಟುಕು ನುಂಗ್ತಾಳೆ ನನ್ನ ಹೆಣ್ತಿ........

೬೮೮. ಮಕ್ಕಳ ಆಟವು ಚಂದ
ಮೈಸೂರು ನೋಡಲು ಚಂದ
ಎಲ್ಲಕ್ಕು ಮಿಗಿಲು ನನ್ನವಳು........ಳ ಅಂದ

೬೮೯. ಮಲ್ಲಿಗೆಯು ಬಲು ತಂಪು
........ಳು ನನಗಿಂತ ಬಲು ಕೆಂಪು

೬೯೦. ಮಾತು ಮಾತಿಗೆ ಮಾತನಾಡ್ತಾಳೆ ಆಣಿ
ಯಾತಕ್ಕೂ ಸೋಲುವುದಿಲ್ಲ ನಮ್ಮ ರಮಣಿ
ತನ್ನದೇ ನಡೆಸ್ತಾಳೆ ನಮ್ಮ ರಾಣಿ........

೬೯೧. ಮಾವನ ಮಗಳೆ
ಮಲ್ಲಿಗೆ ಹರಳೆ
ನನ್ನ ಅಜಾರ ಬಿಟ್ಟು
ನಿನ್ನ ಅಜಾರಕ್ಕೆ ಹೋಗೆ*........

೬೯೨. ಮುಂಜಾವದಲ್ಲಿ ಸರಸ್ವತಿ
ಮಧ್ಯಾನ ಕಾಲದಲ್ಲಿ ಶ್ರೀಕಾಂತೆ
ಏಕಾಂತದಲ್ಲಿ ಕುಳಿತುಕೊಂಡು
ಸರಸನಾಡ್ತಾಳೆ........

---

೬೯೧ *ನಿನ್ನ ಹಳೇ ಚಾಪೆಗೆ ಎದ್ದೋಗೆ........

೧೯೩. ಮುಖ ನೋಡತಾಳ
ಸುಖ ಬೇಡತಾಳ
ಅಡಗಿ ಮಾಡಂದ್ರ ಅಳತಾಳ........

೧೯೪. ಮುತ್ತಿನಂತವು ಮೂರು ಹಡಿ ಅಂದ್ರೆ
ಅತ್ಗೊಂಡು ಆರು ಹಡಿತಾಳೆ ನನ್ನೇಣ್ತಿ........

೧೯೫. ಮೂರು ಮುದ್ದೆ ಮುರ್ಕ್ಕು
ಮೇಲೊಂದ್ ಗಿರ್ಕ್ಕು
ನನ್ನೇಣ್ತಿ ಹೆಸರು ಕೇಳಿದೋರ್ನ
ಇಡ್ಕೊಂಡ್ ತರ್ಕ್ಕು............

೧೯೬. ಮೂರು ಸೇರು ಸಕ್ಕರೆ
ಆರು ಸೇರು ಕಡ್ಲೆ
ಹದ ಹಿಡಿ ಅಂದ್ರೆ
ಕದ ಹಿಡಿತಾಳೆ........

೧೯೭. ಯಾಲಕ್ಕಿ ಹುಗ್ಗಿ
ಬೆಂಡಿನ್ ಪಚಡಿ
ಬಚ್ಚಲಾಗೆ ಕುಂತಗೊಂದು
ಬಾಯಾಡ್ತಾಳೆ........

೧೯೮. ಶಾಂತ ರೀತಿಯಿಂದ ಇರು ಅಂತ
ಶಾಂತಿ ಹೇಳಿದ್ರೆ ಕ್ರಾಂತಿ ಮಾಡ್ತಾಳೆ........

೧೯೯. ಸವಕರ ಮಗಳೆ
ಅರಗಿಣಿ ಮಗಳೆ
ಮುತ್ತಿನ ಚೆಂಡೆ
ಮುರಾಕಿ ಚೆಂಡೆ
ನನ್ನ ಸದರ ಬಿಟ್ಟು
ನಿನ್ನ ಸದರಕ್ಕೆ ಹೋಗೆ........

೨೦೦. ಸೆರಗಿನ ಸಿಂಬೆ
ಅರಗಿನ ಕೊಡ
ಸೀಲವಂತರ ಮಗಳು
ಸೀತಾದೇವಿ ಹೆಸರು........



೨೦೧. ಸೇರ್ ಬಂಗಾರ್ ಸಟ್ಟಿ ಇಟಗಂದ್ ಓಡಾಡೊಂದ್ರೆ
ಜಟಗಂದ್ ಓಡಾಡ್ತಾಳೆ........

೨೦೨. ಹಂಚಿಗೆ ರೊಟ್ಟಿ ಚಂದ
ಹಂಚಿ ಹಣೆಗೆ ಚಂದ
ಕಂಚಿ ಪೇಟವು ಚಂದ
ನನ್ನ ಸತಿಗೆ ನಾ ಚಂದ........

೨೦೩. ಹಂಚಿ ಸಂದೀಲಿ
ಉಂಚಿ ತಿಂತಾಳೆ........

೨೦೪. ಹಗ್ಗದ ಸೀರೆ
ಬೊಗ್ಗದ ರವಿಕೆ
ಹಗ್ಗದಲ್ಲಿ ಹೊಡುದ್ರೆ
ಮಗ್ಗಲಿಗೆ ಬತ್ತಾಳೆ........

೨೦೫. ಹಟ್ಯಾಳ ಸಗಣಿ
ಗ್ಯಾಣಿ ಮ್ಯಾಗ್ಳ ತಗ್ಣ
ತಿರ್ಗಿ ನೋಡಂದ್ರೆ
ನೆಕ್ಕಿ ನೋಡ್ತಾಳೆ........

೨೦೬. ಹರ್ಕ ಹಗ್ಗ, ಮುರ್ಕ ಕಡಗೋಲು
ಮಧ್ಯಾನದಾಗೆ ಮಸ್ರ ಕಡಿತಾಳೆ........

೨೦೭. ಹಸಿರು ಹಾಗಲಕಾಯಿ
ಕುಸುಲು ಬೆಂಡೆಕಾಯಿ
ಹಸುಮಗನ ಎತ್ತಿಕೊಂಡು
ಬೀಸಿನಲ್ಲಿ ಬತ್ತಾಳೆ........

೨೦೮. ಹಳ್ಳದಲ್ಲಿ ಎರಡು ಆಡು
ಆಡಿಗೆರಡು ಕೋಡು
ನನ್ನ ಹೆಂಡತಿ ಬಲು ರೌಡು........

೨೦೯. ಹಾಸಿನ ಹಗ್ಗದಾಗೆ
ಬೀಸಿ ಬೀಸಿ ಹೊಡೆದ್ರೆ
ಮಗ್ಗಲಿಗೆ ಬರ್ತ್ತಳೆ........

೭೧೦. ಹೊತ್ತು ಮುಳುಗುವುದು ಬಾನಿನಲ್ಲಿ
ಮುತ್ತು ಇರುವುದು ಮಾತಿನ ಕಡಲಲ್ಲಿ
ಸ್ನೇಹ ಸಂಬಂಧ ಇರುವುದು........ಳಲ್ಲಿ

೭೧೧. ಹೊಸ ಹಂಡೇವು
ಬಿಸಿ ನೀರು
ನೀರು ಬೆರಸಂದ್ರೆ
ಸರಿಸರಿದು ಹೋಗ್ತಳೆ........

೭೧೨. ಹೆಸ್ರು ಹೆಸ್ರಕ್ಕಿ, ಹೆಸರ್ಪಲ್ಲಕ್ಕಿ
ತಾವೆರ್ಪಡಕ್ಕಿ, ತತ್ತಿ ಇಕ್ಕಿ
ಹುಚ್ಚಂಗಮ್ನ ಪಚ್ಚೆ ಮ್ಯಾಲೆ
ತೀರ್ಮಲ್ಲಪ್ನ ತೇರುನ್ ಮ್ಯಾಲೆ
ತಡಕಂಬ್ಲಾರ್ದೆ ಹೊಡ್ಕಂಬುಟ್ಳು........

# ಅನುಬಂಧಗಳು-೧

## ಹೆಸರು ಹೇಳಿಸುವ ಮತ್ತು ಹೇಳುವ ಹಾಡುಗಳು

ಹಾಡಿದವರು : ಶ್ರೀಮತಿ ನಾಗರತ್ನ ಸುಬ್ರಹ್ಮಣ್ಯ (೨೬), ದೀವರು, ರಾಮಚಂದ್ರಪುರ, ಹೊಸನಗರ ತಾ॥, ಶಿವಮೊಗ್ಗ ಜಿಲ್ಲೆ. ಸಂಗ್ರಹ : ೧೯೮೫

ಮಾವನ ಮಗಳೆ ಮಾರುದ್ದ ಜಡೆಯೋಳೆ
ಹೆಸರೇಳೆ ನಿನ್ನ ಪುರುಸಾನ

ಹೆಸರನ್ನು ಹೇಳೋಕೆ ಹಸಿ ಮಗು ನಾನಲ್ಲ
ಕರೆಸು ಕಂದಯ್ನ ಮದುವೀಗೆ/ನಾನಾಗ
ಮಗುವಿನ ಹೆಸರ ಹೇಳಿ ಕಳಸ ಹಿಡಿತೀನಿ

ಹೆಸರನ್ನು ಹೇಳೋಕೆ ಹಸಿಮಗು ನಾನಲ್ಲ
ಕರೆಸು ತಮ್ಮಯ್ನ ಮದುವೀಗೆ/ನಾನಾಗ
ಮಂಟಪದಲಿ ಹೆಸರ ಹೇಳಿ ಕಳಸ ಹಿಡಿದೇನಾ

ಹೆಸರನ್ನು ಹೇಳಿದರ ಶಿಸುವೆಲ್ಲ ನಗುತಾವೆ
ಇನ್ನೇನು ಹೇಳಲಿ ಬಿಡಿಸೆರಗ

**ಗೌರಮ್ಮ-ಶಿವರಾಯ**

ಗೌರಮ್ನ ಸೆರಗ ತಡೆದು ಏನು ಹೇಳಯ್ಯರೆ
ನೀವು ಹೇಳಿ ನಿಮ್ಮ ಪುರುಸಾನ ಹೆಸರ

ಉದ್ದಿನ ಹಕಲಾಗೆ ಉದ್ದ ಬಿತ್ತುತ್ತಾರೆ
ಶಿವರಾಯರಲ್ಲದೆ ಪರರಲ್ಲ

**ರುಕ್ಮಿಣಿ-ಕೃಷ್ಣ**

ಅಷ್ಟೆಂಬ ಮಾತು ಹೇಳ್ಯಾರೆ ಗೌರಮ್ಮ
ರುಕ್ಮಿಣಿ ಸೆರಗ ಹಿಡುದಾರೆ/ಏನಂದಾರೆ
ನೀವು ಹೇಳಿ ನಿಮ್ಮ ಪುರುಸಾನ ಹೆಸರ

ಉಡುಪಿಯಲ್ಲಿ ವಾಸವಾದ ಶ್ರೀಕೃಷ್ಣ ಪರಮಾತ್ಮ
ಇನ್ನೇನು ಹೇಳಲಿ ಬಿಡಿ ಸೆರಗ

ಹಾಡಿದವರು : ಶ್ರೀಮತಿ ಸೌಲೇರ ಮಲ್ಲಮ್ಮ (೫೨-೬೦), ಕುರುವ, ಹೊನ್ನಾಳಿ ತಾ॥, ಶಿವಮೊಗ್ಗ ಜಿಲ್ಲೆ. ಸಂ: ಕುರುವ ಬಸವರಾಜ್, ಸಂಗ್ರಹ : ೧೯೮೬

**ಬಸವಣ್ಣ-ನೀಲಮ್ಮ**

ಹೂವೀನ ಗಣಿಮೇಲೆ ಹೂಬುರ್ದ ಗಣಿ ಹೂಡಿ
ಅಲ್ಲಿ ಗಣಂಗಳು ಇಳಿದಾರು/ಬಸವಯ್ಯ
ಹೇಳಯ್ಯ ನಿನ್ನ ಹೆಂಡ್ತಿ ಹೆಸರಾ

ಸುತ್ತಲ ಗಣಂಗಳಿಗೆ ನಿಂತು ಬೋಜನ ಮಾಡಿಸುವಂತ
ನೀಲಾಲೋಚನೆ ನೀಲವ್ವ ಅನ್ನೋದ
ಮತ್ತೇನ್ ಹೇಳಾಲಿ ಬಿಡಿ ಬಿಡಿ

ಬಸವಣ್ಣ ಹೇಳತ್ಗೆ ಜನರೆಲ್ಲ ನಕ್ಕಾರು
ಮತ್ತೆ ನೀಲವ್ನ ಸೆರಗಿಡದ್ರು/ನೀಲವ್ವ
ಹೇಳವ್ವ ನಿನ್ನಾ ಪುರುಷನೆಸರಾ

ಹರಗೀದ ಹೊಲದಾಗೆ ಹರುದಾವೆ ಗುರುಪಾದ
ಗುರುಚನ್ನಲಿಂಗ ಬಸವೇಶ/ಅನ್ನೋದ
ಮತ್ತೇನ್ ಹೇಳಾಲಿ ಬಿಡಿ ಬಿಡಿ

**ಈರಯ್ಯ-ಕಾಳವ್ವ**

ನೀಲವ್ವ ಹೇಳತ್ಗೆ ಜನರೆಲ್ಲ ನಕ್ಕಾರು
ಮತ್ತೆ ಈರಯ್ನ ಸೆರಗಿಡದ್ರು/ಈರಯ್ಯ
ಹೇಳಪ್ಪ ನಿನ್ನಾ ಹೆಂಡ್ತಿ ಹೆಸರಾ

ಹೆಣ್ಣು ಸಣ್ಣಾಕೆಂದು ನಮ್ಮಪ್ಪ ತರ್ಲಿಕ್ಲೋದೊ ಕರ್ದು
ಹೆಣ್ಣೆ ನಾಗೆಣ್ಣೆ ಬಲ ಭದ್ರಕಾಳಿ/ಅವಳು
ಉಡುಗ್ಯಾಗೆ ಬಾಳ ಕಡುಜಾಣೆ/ಅನ್ನೋದ
ಮತ್ತೇನ್ ಹೇಳಾಲಿ ಬಿಡಿಬಿಡಿ

---

ತ್ರಿಪದಿ ಮತ್ತು ದ್ವಿಪದಿಗಳ ಕೊನೆಗೆ 'ಸೋ' ಎಂಬ ಸೊಲ್ಲು ಸೇರಿಸಿ ಹಾಡಬೇಕು



ಈರಯ್ಯ ಹೇಳತ್ಗೆ ಜನರೆಲ್ಲ ನಕ್ಕಾರು
ಮತ್ತೆ ಕಾಳವ್ನ ಸೆರಗಿಡದ್ರು/ಕಾಳವ್ವ
ಹೇಳವ್ವ ನಿನ್ನ ಪುರಷನೆಸರಾ

ಹತ್ತು ಸಾವಿರ ಕತ್ತಿ ಸ್ಫಂಟಕೆ ಧರಿಸವರೆ
ಕತ್ತೀಯು ಈರ ಕುಲಭದ್ರಸ್ವಾಮಿ/ಅನ್ನೋದ
ಮತ್ತೇನ್ ಹೇಳಾಲಿ ಬಿಡಿಬಿಡಿ

**ಮಲ್ಲಯ್ಯ-ಗಂಗೆಗೌರಿ**

ಕಾಳವ್ವ ಹೇಳತ್ಗೆ ಜನರೆಲ್ಲ ನಕ್ಕಾರು
ಮತ್ತೆ ಮಲ್ಲಯ್ನ ಸೆರಗಿಡದ್ರು/ಮಲ್ಲಯ್ಯ
ಹೇಳಪ್ಪ ನಿನ್ನ ಹೆಂಡ್ತಿ ಹೆಸರಾ

ಪಟ್ಟದರಸಿ ಗೌರಿ ಮೆಚ್ಚಿ ಬಂದೋಳು ಗಂಗಾ
ಮತ್ತೇನ್ ಹೇಳಾಲಿ ಬಿಡಿ ಬಿಡಿ

ಮಲ್ಲಯ್ಯ ಹೇಳತ್ಗೆ ಗೌರವ್ನ ಸೆರಗಿಡದ್ರು
ಹೇಳವ್ವ ನಿನ್ನ ಪುರುಷನೆಸರಾ

ಮಲ್ಲುಅಯ್ಯನೌದು ಮಲ್ಲಿಕಾರ್ಜುನ ಸ್ವಾಮಿ ಹೌದು
ನಲ್ಲೆ ಗಂಗಾನ ಪುರುಷನೌದು

ಗೌರವ್ವ ಹೇಳತ್ಗೆ ಜನರೆಲ್ಲ ನಕ್ಕಾರು
ಮತ್ತೆ ಗಂಗಾನ ಸೆರಗಿಡದ್ರು/ಗಂಗವ್ವ
ಹೇಳವ್ವ ನಿನ್ನ ಪುರುಷನೆಸುರಾ

ದ್ರಾಸೆ ಪಿಟ್ಟವ್ನು ಮನೆಗೆ ಹೋಗಿ
ಚೊಟ್ಟ ದ್ರಾಸೆಯ ತಿಂದು
ಹುಟ್ಟೀಲಿ ಕಜ್ಜಾಯ ಬರಸ್ಗೆಂದ್ರು

ಮಲ್ಲಯ್ಯನೌದು ಮಲ್ಲಿಕಾರ್ಜುನನೌದು
ನಲ್ಲೆ ಶ್ರೀಗೌರಿ ಪುರುಷನೌದು

ಈ ಕೆಳಗಿನ ಹಾಡನ್ನು ಶ್ರೀ ಮೈಲಹಳ್ಳಿ ರೇವಣ್ಣ ಅವರು ಸಂಪಾದಿಸಿರುವ 'ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು' ಸಂಕಲನದಲ್ಲಿಯ, ಶ್ರೀಮತಿ ತಿಪ್ಪಮ್ಮ ತಿಪ್ಪೇರುದ್ರಪ್ಪ (೫೦-ಹ), ತುರುವನೂರು, ಚಿತ್ರದುರ್ಗ-ತಾ॥ ಇವರು ಹಾಡಿರುವ 'ಕಾಳಿಂಗರಾಯ' ಕಾವ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

**ಶಿವ-ಗಂಗೆಗೌರಿ**

ಶಿವನನ್ನು ಕರಿಸ್ಯಾರೆ ದೇವತರು
ಹಸೆಯನ್ನಾದರು ಇಡಿಸ್ಯಾರೆ

ಹಸೆಯನ್ನಾದರು ಇಡಿಸ್ಯಾರೆ ದೇವತರು
ನೀವ್ಹೇಳರೆ ನಿಮ್ಮ ಸತಿಯರ ಹೆಸರು

ಮದುವೆ ಆದಳು ಗೌರಿ ಮೆಚ್ಚಿ ಬಂದಳು ಗಂಗಿ
ಗೌರಿ ಗೌರಂದೆ ಬಿಡಿರಮ್ಮ

ಆಗ ಗೌರಮ್ಮನ ಕರುದಾರೆ
ಆಗೇನೆ ಗೌರಮ್ಮನ ಕರುದಾರೆ ದೇವತರು

ಹಸೆಯನ್ನಾದರಿನ್ನು ಇಡಿಸ್ಯಾರೆ
ನಿವ್ಹೇಳಿರಿ ನಿಮ್ಮ ಪುರುಷರ ಹೆಸರು

ಮೂರು ಲೊಕಾಕೆಲ್ಲಾ ಪಡಿಬತ್ತೇವಳಿವಂತ
ಶಿವಶಿವನೆಂದು ಬಿಡಿರಮ್ಮ

ಅಂಗೆಂದ ಮಾತಿಗೆ ಜನರೆಲ್ಲ ನಕ್ಕರು
ಆಗ ಗಂಗಮ್ಮನ ಕರುದಾರು

ಆಗೇನೆ ಗಂಗಮ್ಮನ ಕರದಾರೆ ದೇವತರು
ನಿವ್ಹೇಳಿರಿ ನಿಮ್ಮ ಪುರುಷರ ಹೆಸರು

ಮೂರು ಲೋಕಾಕೆಲ್ಲ ಪಡಿಬತ್ತೇನಳಿವಂತ
ಶಿವಶಿವನೆಂದು ಬಿಡಿರಮ್ಮ

**ನಂದಿ-ನೀಲಮ್ಮ**

ಅಂಗಂದ ಮಾತಿಗೆ ಜನರೆಲ್ಲಾ ನಕ್ಕರು
ಆಗ ನಂದೀನ ಕರುದಾರು

---

ಪ್ರತಿ ಸಾಲಿಗು 'ಸೋವನ್ನಿರೆ ಸೋಬಾನ ಬನ್ನಿರೆ' ಎಂದು ಹಾಡಿಕೊಳ್ಳಬೇಕು.



ಆಗೇನೆ ನಂದೀನ ಕರುದಾರೆ ದೇವತರು
ಹಸೆಯಾದರಿನ್ನ ಇಡಿಸ್ಯಾರೆ
ನೀವ್ಹೇಳಿರಿ ನಿಮ್ಮ ಸತಿ ಹೆಸರು

ಎಳಸೇನೆ ಯಾಲಕ್ಕಿ ತೊಳಸುತ ಪಾಡಾರು
ನೀಲ ನೀಲೆಂದು ಬಿಡಿರೆಮ್ಮ

ಅಂಗಂದ ಮಾತಿಗೆ ಜನರೆಲ್ಲ ನಕ್ಕರು
ಆಗ ನೀಲಮ್ಮನ ಕರುದರೆ

ಆಗೇನೆ ನೀಲಮ್ಮನ ಕರುದಾರೆ ದೇವತರು
ಹಸೆಯಾದರಿನ್ನ ಇಡಿಸ್ಯಾರೆ
ನೀವ್ಹೇಳಿರಿ ನಿಮ್ಮ ಪತಿಯರ ಹೆಸರು

ಮೂರು ಲೋಕಾಕೆಲ್ಲ ದುಡಿವಂತ ಬಸವಯ್ಯ
ನಂದಿ ನಂದೆಂದು ಬಿಡಿರಮ್ಮ

**ನಿಂಗಣ್ಣ-ಕಾಳಮ್ಮ**

ಅಂಗೆಂದ ಮಾತಿಗೆ ಜನರೆಲ್ಲ ನಕ್ಕರು
ಆಗ ನಿಂಗಣ್ಣನ ಕರುದಾರೆ

ಆಗೇನೆ ನಿಂಗಣ್ಣನ ಕರುದಾರೆ ದೇವತರು
ಹಸೆಯಾದರಿನ್ನ ಇಡಿಸ್ಯಾರೆ
ನೀವ್ಹೇಳಿರಿ ನಿಮ್ಮ ಸತಿಯಳ್ಹೆಸರು

ಅಕ್ಸಲ್ಲರ ಮನಿಯಾಗ ಟಂಗ್ಸಂಗನ್ನೋಳೆ
ಕಾಳಿ ಕಾಳೆಂದು ಬಿಡಿರಮ್ಮ

ಅಂಗೆಂದ ಮಾತಿಗೆ ಜನರೆಲ್ಲ ನಕ್ಕರು
ಆಗ ಕಾಳಮ್ಮನ ಕರುದಾರೆ

ಆಗೇನೆ ಕಾಳಮ್ಮನ ಕರುದಾರೆ ದೇವತರು
ನೀವ್ಹೇಳಿರಿ ನಿಮ್ಮ ಪುರಸರ್ಹೇಸರು
ನಿಂಗಣ್ಣನೆಂದು ಬಿಡಿರಮ್ಮ

**ಕಾಳಿಂಗ-ಸೆನ್ನಮ್ಮ**

ಅಂಗೆಂದ ಮಾತಿಗೆ ಜನರೆಲ್ಲ ನಕ್ಕರು
ಆಗ ಕಾಳಿಂಗನ ಕರುದಾರು

ಆಗೇನೆ ಕಾಳಿಂಗನ ಕರುದಾರು ದೇವತರು
ಹಸೆಯಾದರಿನ್ನ ಇಡಿಸ್ಯಾರು

ನೀವ್ಹೇಳರಿ ನಿಮ್ಮ ಸತಿಯಳ್ಹೇಸರು
ಸೆನ್ನಿ ಸೆನ್ನೆಂದು ಬಿಡಿರಮ್ಮ

ಅಂಗೆಂದ ಮಾತಿಗೆ ಜನರೆಲ್ಲ ನಕ್ಕರು
ಆಗ ಸೆನ್ನಮ್ಮನ ಕರುದಾರೆ

ಆಗೇನೆ ಸೆನ್ನಮ್ಮನ ಕರುದಾರೆ ದೇವತರು
ಹಸೆಯಾದರಿನ್ನು ಇಡಿಸ್ಯಾರೆ

ಹಸೆಯಾದರಿನ್ನು ಇಡಿಸ್ಯಾರೆ ದೇವತರು
ನಿವ್ಹೇಳಿರಿ ನಿಮ್ಮ ಪುರುಸರ್ಹೇಸರು

ಶಂಕರನ ಮಲೆಯಗೆ ಮಡಿದಂತ
ಕಾಳಿಂಗನೆಂದು ಬಿಡಿರಮ್ಮ

## ಒಡಪುಗಳ ಪ್ರಾದೇಶಿಕ ವರ್ಗೀಕರಣ

**ನಾಗಮಂಗಲ ಸುತ್ತಿನ ಒಡಪುಗಳು**

ನಾಗಮಂಗಲ, ಕೆ. ಆರ್. ಪೇಟೆ (ಮಂಡ್ಯ ಜಿಲ್ಲೆ), ಕುಣಿಗಲ್, ದಂಡಿನಶಿವರ (ತುಮಕೂರು ಜಿಲ್ಲೆ), ಶ್ರವಣಬೆಳಗೊಳ (ಹಾಸನಜಿಲ್ಲೆ)

೩, ೫, ೨೬, ೨೮, ೩೪,೩೭, ೩೮, ೩೯,೪೧, ೪೨, ೫೯, ೭೬,೮೪,೮೫, ೮೯, ೯೦, ೯೩, ೯೬, ೯೮, ೧೦೧, ೧೦೨, ೧೦೩, ೧೦೬, ೧೦೭, ೧೧೮, ೧೨೬, ೧೨೭, ೧೨೯, ೧೩೦, ೧೩೧, ೧೪೪, ೧೬೧, ೧೭೬, ೧೭೭, ೧೮೪, ೧೮೫, ೧೮೬, ೧೯೦, ೧೯೪, ೧೯೬, ೨೦೩, ೨೦೮, ೨೨೮, ೨೩೭, ೨೪೨, ೨೪೭. ೨೪೮, ೨೫೦· ೨೫೨, ೨೫೩, ೨೫೪, ೨೮೪, ೨೮೫, ೨೮೮, ೨೯೧, ೨೯೨, ೨೯೫, ೩೧೫, ೩೩೮, ೩೪೦, ೩೫೯, ೩೯೦, ೩೯೫, ೪೦೩, ೪೧೩, ೪೧೪, ೪೧೮, ೪೨೭, ೪೩೨, ೪೬೨, ೫೦೦, ೫೦೯, ೫೨೩, ೫೩೮, ೫೫೯, ೫೬೪, ೫೮೫, ೫೯೬, ೬೦೦, ೬೦೭. ೬೨೦, ೬೨೫, ೬೩೦, ೬೩೩, ೬೩೫, ೬೪೧, ೬೪೨, ೬೪೪, ೬೫೨, ೬೫೩, ೬೬೧ ಮತ್ತು ೬೯೯.

**ತರೀಕೆರೆ (ಚಿಕ್ಕಮಗಳೂರು ಜಿಲ್ಲೆ) ಸುತ್ತಿನ ಒಡಪುಗಳು**

೧೬, ೨೦, ೭೭, ೧೨೮, ೧೩೭, ೧೩೮, ೧೪೧, ೧೪೨, ೧೫೧, ೧೫೨, ೧೫೫, ೧೫೮, ೧೫೯, ೧೬೨, ೧೬೭, ೧೬೮, ೧೬೯, ೧೮೦, ೧೮೪, ೧೮೭, ೨೧೪, ೨೧೯, ೨೨೫, ೨೨೯, ೨೩೦, ೨೩೪, ೨೬೯, ೨೮೧, ೩೨೮, ೩೪೬, ೩೪೭, ೩೫೦, ೩೬೨, ೩೭೮, ೪೦೫, ೪೨೩, ೪೨೮, ೪೩೧, ೪೩೨, ೪೩೫, ೪೪೧, ೪೪೩, ೪೮೬, ೫೧೩, ೫೧೪, ೫೧೫, ೫೬೭, ೫೭೪, ೫೭೫, ೫೮೧, ೫೮೮, ೬೧೫, ೬೯೮. ೭೦೩ ಮತ್ತು ೭೦೪.

**ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಮತ್ತು ತುರುವನೂರು ಸುತ್ತಿನ ಒಡಪುಗಳು**

೬ರಿಂದ ೧೫, ೧೭, ೧೮, ೨೩, ೨೪, ೨೬, ೨೯, ೩೩, ೪೦, ೪೩, ೪೪, ೪೬, ೪೭, ೪೮, ೫೦, ೫೨, ೫೩, ೬೦, ೬೫, ೬೮, ೭೩, ೯೧, ೯೪, ೯೫, ೯೮ ರಿಂದ ೧೧೭, ೧೨೦, ೧೨೫, ೧೩೫, ೧೩೬, ೧೪೦, ೧೪೬, ೧೫೭· ೧೬೦, ೧೬೨, ೧೬೪, ೧೬೯. ೧೭೧. ೧೭೪. ೧೭೯, ೧೮೨ ರಿಂದ ೧೮೪, ೧೮೭ ರಿಂದ ೧೮೯, ೧೯೨,

ಅಂಕಿ ಸಂಖ್ಯೆಗಳು ಒಡಪುಗಳ ಕ್ರಮ ಸಂಖ್ಯೆಯನ್ನು ಸೂಚಿಸುತ್ತವೆ.

೧೯೩, ೧೯೭, ೧೯೮, ೨೦೫, ೨೧೩, ೨೧೬ ರಿಂದ ೨೧೮, ೨೨೦, ೨೨೧, ೨೩೧, ೨೩೨, ೨೪೫, ೨೪೬, ೨೬೧, ೨೬೩ ರಿಂದ ೨೬೮, ೨೭೨ ರಿಂದ ೨೭೪, ೨೭೬, ೨೭೮, ೨೯೩, ೨೯೪, ೨೯೯, ೩೦೫, ೩೦೭ ರಿಂದ ೩೦೯, ೩೧೧, ೩೧೩, ೩೧೫, ೩೧೮, ೩೨೬, ೩೨೯, ೩೩೫, ೩೪೧ ರಿಂದ ೩೪೪, ೩೫೬ ರಿಂದ ೩೫೮, ೩೬೧, ೩೬೩, ೩೬೭, ೩೬೮, ೩೭೧, ೩೭೩, ೩೭೬, ೩೭೭, ೩೮೦, ೩೮೧, ೩೯೧, ೩೯೨, ೩೯೯, ೪೩೨, ೪೩೩, ೪೩೮, ೪೪೪, ೪೬೫, ೪೬೬, ೪೮೭, ೫೦೫, ೫೦೬, ೫೧೦, ೫೧೧, ೫೨೧, ೫೨೯, ೫೩೩, ೫೪೦, ೫೫೦, ೫೫೨, ೫೫೩, ೫೫೭, ೫೫೮, ೫೬೦, ೫೬೩, ೫೬೮ ರಿಂದ ೫೭೧, ೫೭೩, ೫೭೭, ೫೭೯, ೫೮೨, ೫೮೪, ೫೮೬, ೫೮೭, ೫೮೯ ರಿಂದ ೫೯೫, ೬೦೯, ೬೧೧, ೬೧೭, ೬೧೯, ೬೨೧, ೬೨೪, ೬೨೬, ೬೩೧, ೬೩೪, ೬೩೮ ರಿಂದ ೬೪೦, ೬೪೬, ೬೫೬, ೬೫೮, ೬೬೦ ರಿಂದ ೬೬೨, ೬೬೭ ರಿಂದ ೬೬೮, ೬೭೦, ೬೭೨, ೬೭೪, ೬೮೫, ೬೮೭, ೬೯೦, ೬೯೪ ರಿಂದ ೬೯೬, ೭೦೯, ೭೧೧ ಮತ್ತು ೭೧೨.

**ಶಿವಮೊಗ್ಗ ಜಿಲ್ಲೆಯ ಹೊಸನಗರ, ಸಾಗರ ಮತ್ತು ಹೊನ್ನಾಳಿ ಸುತ್ತಿನ ಒಡಪುಗಳು**

೧ರಿಂದ ೪, ೭, ೧೨, ೧೫, ೧೮, ೧೯, ೨೧, ೨೨, ೨೫, ೨೬, ೩೦, ೩೧, ೩೨, ೩೫, ೩೬, ೪೦, ೪೩, ೪೫. ೪೬, ೪೯, ೫೧, ೫೪ ರಿಂದ ೫೮, ೬೦ ರಿಂದ ೬೪, ೬೬, ೬೭, ೬೯ರಿಂದ ೭೨, ೭೪, ೭೫, ೭೭ರಿಂದ ೮೩, ೮೬, ೮೭, ೮೮, ೯೧, ೯೨, ೯೭, ೧೦೪, ೧೦೫, ೧೦೮, ೧೦೯, ೧೧೦, ೧೧೯, ೧೨೧, ೧೨೩, ೧೨೪, ೧೩೨, ೨೩೩ ೧೩೪, ೧೩೭, ೧೩೯, ೧೪೨. ೨, ೧೪೩, ೧೪೫, ೧೪೭ ರಿಂದ ೧೫೦, ೧೫೩, ೧೫೪, ೧೫೬, ೧೬೩, ೧೬೫, ೧೬೬, ೧೭೦, ೧೭೨ ರಿಂದ ೧೭೫, ೧೭೮, ೧೭೯, ೧೮೧, ೧೮೯, ೧೯೫, ೧೯೯ ರಿಂದ ೨೦೨, ೨೦೪, ೨೦೬, ೨೦೭, ೨೦೯ ರಿಂದ ೨೧೨, ೨೧೪, ೨೧೫, ೨೨೨, ೨೨೩, ೨೨೪, ೨೨೬, ೨೨೭, ೨೩೦, ೨೩೩ರಿಂದ ೨೩೬, ೨೩೮ ರಿಂದ ೨೪೧, ೨೪೩, ೨೪೪, ೨೪೯, ೨೫೧, ೨೫೫ ರಿಂದ ೨೬೦, ೨೭೦, ೨೭೧, ೨೭೫, ೨೭೭, ೨೭೯, ೨೮೦, ೨೮೨, ೨೮೩, ೨೮೬, ೨೮೭, ೨೮೯, ೨೯೦, ೨೯೬, ೨೯೭, ೩೦೦ರಿಂದ ೩೦೪, ೩೦೬, ೩೧೦, ೩೧೬, ೩೧೯ ರಿಂದ ೩೨೫, ೩೨೭, ೩೨೮, ೩೩೦ ರಿಂದ ೩೩೪, ೩೩೬, ೩೩೭, ೩೩೯, ೩೪೮, ೩೪೯, ೩೫೧ ರಿಂದ ೩೫೫, ೩೬೦, ೩೬೪, ೩೬೫, ೩೬೬, ೩೬೯, ೩೭೦, ೩೭೫, ೩೭೯, ೩೮೨ರಿಂದ ೩೮೯, ೩೯೩, ೩೯೪, ೩೯೬ರಿಂದ ೩೯೮, ೪೦೦, ೪೦೧, ೪೦೨, ೪೦೪, ೪೦೬, ೪೦೭, ೪೦೯, ೪೧೦, ೪೧೧, ೪೧೨, ೪೧೫, ೪೧೬, ೪೧೭, ೪೧೯ ರಿಂದ ೪೨೨, ೪೨೪, ೪೨೫, ೪೨೬, ೪೨೯, ೪೩೦, ೪೩೪, ೪೩೬, ೪೩೭, ೪೩೯, ೪೪೦, ೪೪೨, ೪೪೫ ರಿಂದ ೪೬೧, ೪೬೩. ೪೬೪, ೪೬೭, ೪೬೮, ೪೮೮ ರಿಂದ ೪೯೯,



೫೦೧, ೫೦೨, ೫೦೩, ೫೦೭, ೫೦೮, ೫೧೨, ೫೧೯, ೫೨೦, ೫೨೨, ೫೨೪ರಿಂದ ೫೨೮, ೫೩೦, ೫೩೧, ೫೩೨, ೫೩೪ ರಿಂದ ೫೩೭, ೫೩೯, ೫೪೧ ರಿಂದ ೫೪೯, ೫೫೧, ೫೫೪, ೫೫೫, ೫೫೬, ೫೬೧, ೫೬೨, ೫೬೫, ೫೬೬, ೫೭೨, ೫೭೬, ೫೭೮, ೫೮೦. ೫೮೩, ೫೯೭, ೫೯೮. ೫೯೯, ೬೦೧ ರಿಂದ ೬೦೬, ೬೦೮, ೬೧೦, ೬೧೨. ೬೧೩, ೬೧೪, ೬೧೬, ೬೧೮, ೬೨೨, ೬೨೩, ೬೨೮, ೬೨೯, ೬೩೨, ೬೩೬, ೬೩೭, ೬೪೩, ೬೪೫. ೬೪೭ ರಿಂದ ೬೫೧, ೬೫೪, ೬೫೫, ೬೫೭, ೬೫೯, ೬೬೩ ರಿಂದ ೬೬೬, ೬೬೯, ೬೭೧, ೬೭೩, ೬೭೫ ರಿಂದ ೬೮೪, ೬೮೬, ೬೮೮, ೬೮೯, ೬೯೨, ೬೯೩, ೬೯೭, ೭೦೦, ೭೦೧, ೭೦೨, ೭೦೫ ರಿಂದ ೭೦೮ ಮತ್ತು ೭೧೦.

**ಬೆಂಗಳೂರು ನಗರದ ಒಡಪುಗಳು**

೧೨೨, ೧೯೧, ೨೦೨, ೨೯೮, ೩೧೪, ೩೧೭, ೩೪೫, ೩೭೨. ೩೭೪, ೪೦೮, ೪೮೫ ಮತ್ತು ೬೨೭.

## ವಿಶಿಷ್ಟ ವಿಷಯ, ವಸ್ತು, ಹೆಸರುಗಳ ಪದ ಸೂಚಿ


**ಆಹಾರ ಪಾನೀಯಗಳು**

ಅಂಬ್ರ ೩೨೨
ಅಕ್ಕಿರೊಟ್ಟಿ ೨೬,೨೭,೨೮,೫೯೬
ಅವಲಕ್ಕಿ ೬೭
ಅವಲಕ್ಕಿ ಅನ್ನ ೩೬೩
ಅಪ್ಪೆ ಪಲ್ಯ ೪೮
ಇಂಪ್ಲಿಅನ್ನ ೨೯,೧೧೧
ಉತ್ತುತ್ತೆ ಹುಳಿ ೩೬೩
ಉದ್ದಿನ ಬ್ಯಾಳೆಸಾರು ೫೦೯
ಉದ್ದಿನಹಪ್ಪ ೧೧೮,೧೨೨
ಉಪ್ಪಿಟ್ಟು ೬೫೦
ಉಪ್ಪಿನಕಾಯಿ ೧೨೫,೧೨೬,೧೨೭
೧೨೮,೧೨೯,೨೪೦
ಎಣ್ಗಾಯಿ ೧೭೫
ಒಬ್ಬಟ್ಟು ೧೨೧
ಕಂಪ್ಲಿಸಾರು ೧೧೧,೫೨೯
ಕರ್ಜಿಕಾಯಿ ತಾಳ್ದ ೧೧೮
ಕರ್ಜೂರದ ಹಣ್ಣಿನ ತಾಳ್ದ ೧೧೮
ಕಡಕಲು ರೊಟ್ಟಿ ೧೫೮
ಕಡಬು ೧೫೯,೧೬೨
ಕಡ್ಲೆ ಚಟ್ನಿ ೧೬೩
ಕರ್ಪೂರದ ಚಟ್ನಿ ೩೪೧
ಕಮ್ಮನತುಪ್ಪ ೧೨೨,೫೦೯
ಕಮ್ಮ ಹಿಂಡಿ ೧೭೨
ಕರಿಬೇವಿನ ಎಲೆ ಹಿಂಡಿ ೧೧೮
ಕರಿಬೇವು ಚಟ್ನಿ ೧೨೨
ಕರಿಹಿಂಡಿ ೧೩೩
ಕಲ್ಸಕ್ರೆಸಾರು ೧೩೦
ಕಾಫಿ ೧೮೪, ೧೮೫, ೧೮೬, ೬೭೫
ಕ್ಯಾಸಕ್ಕಿ ಕಿಚಡಿ ೧೯೭
ಕುಚ್ಚು ಮೀನಿನ ಸಾರು ೩೨೨
ಕುದಕಲು ಪಲ್ಯ ೧೫೮
ಕುದಿಯೋ ಮುದ್ದೆ ೨೦೬
ಕುದಕಲಂಬ್ರ ೨೦೬
ಕೊಕ್ಕನ್ ಸಾರು ೨೨೧
ಕೊರ್ಲೆ ಅನ್ನ ೨೨೧
ಗೋದಿಖಾಕ್ರಿ ೨೪೦
ಚಪ್ಪರದ ದ್ರಾಕ್ಷಿಪಲ್ಯ ೨೫೩
ತೆಳ್ಳನ ರೊಟ್ಟಿ ೨೮೯
ದಾಲ್ಚಿನ್ನಿ ಪಲ್ಯ ೪೪೧
ದ್ರಾಕ್ಷಿಪಲ್ಯ ೩೭೮
ನುಚ್ಚುಮುದ್ದೆ ೩೨೨
ಪಲ್ಚಿಗರಿಂಡಿ ೧೩೩
ಬಕ್ರಿ ೬೪೯
ಬಟ್ಟನ್‌ರೊಟ್ಟಿ ೩೪೬
ಬದನೆಕಾಯಿ ಬರ್ತ ೩೪೭
ಬಾದಾಮಿಚಟ್ನಿ ೩೭೮
ಬಾದಾಮಿಸಾರು ೩೪೧
ಬಿಳೀಜೋಳ ಬಿಲ್ಲೆ ೫೧
ಬುಕ್ಕಿ ಹಿಟ್ಟಿನ ರೊಟ್ಟಿ ೪೪೧
ಬೆಂಡಿನ ಪಚಡಿ ೬೯೭
ಮಾಲ್ದಿ ೬೬೭
ಮೂಲಂಗಿ ಪಚಡಿ ೧೯೬
ಮೂಲಂಗಿ ಪಲ್ಯ ೪೩೭
ಮೆಂತ್ಯದ ಹಿಟ್ಟು ೨೮೮,೪೩೨
ಮೆಂತೆಹಿಟ್ಟು ೧೩೪
ಮೊಸರುಪಜ್ಜಿ ೧೪೧
ಮೊಸರುರೊಟ್ಟಿ ೨೬೦


ಅಂಕಿಗಳು ಒಡಪುಗಳ ಕ್ರಮ ಸಂಖ್ಯೆಗಳನ್ನು ಸೂಚಿಸುತ್ತವೆ.




ಯಾಲಕ್ಕಿ ಅನ್ನ ೧೩೦,೨೫೨,೩೪೦,೩೭೮
ಯಾಲಕ್ಕಿ ಬೆಣ್ಣೆ ೪೩೭
ಯಾಲಕ್ಕಿ ಹುಗ್ಗಿ ೬೯೭
ರವೆಹಿಟ್ಟಿನ ದೋಸೆ ೪೪೨
ರಾಗಿರೊಟ್ಟಿ ೫೯೬
ಶ್ಯಾವ್ಗೆ ೧೭೫,೪೫೩,೫೧೪
ಸಕ್ರೆಸಾರು ೨೫೨,೩೪೦
ಸಣ್ಣಕ್ಕಿ ಅನ್ನ ೫೦೯,೫೧೦, ೫೧೧,
ಸಬ್ಬಕ್ಕಿ ಹುಗ್ಗಿ ೩೬೩
ಸಬ್ಬಸ್ಗೆ ಸಾರು ೩೬೩
ಸಾವಕ್ಕಿ ಸರಿ ೫೩೩
ಹುಗ್ಗಿ ೧೦,೧೧೭,೪೫೩
ಹೋಳಿಗೆ ೧೨೮,೨೭೫,೫೨೯

**ಚಿನ್ನ, ಬೆಳ್ಳಿ, ಮುತ್ತು, ರತ್ನ**

ಚಿನ್ನ ೩೯,೧೨೦
ಚಿನ್ನದ ಒಲೆ ೨೫೨
ಚಿನ್ನದ ಕುರ್ಚಿ ೧೯೮
ಚಿನ್ನದ ಕೊಡೆ ೨೨೪
ಚಿನ್ನದ ತಪ್ಲೆ ೨೫೩
ಚಿನ್ನದ ಮಣೆ ೨೯,೩೭
ಬಂಗಾರ ೯೧
ಬಂಗಾರದ ಗಟ್ಟಿ ೨೬೦
ಬಂಗಾರದ ತಟ್ಟೆ ೯೫
ಬಂಗಾರದ ಮಡಿ ೧೧೯
ಬಂಗಾರದ ಲೇಖನಿ ೨೨೪
ಬೆಳ್ಳಿ ಕೊಡ ೫೭೭
ಬೆಳ್ಳಿ ದೌತಿ ೨೨೪
ಬೆಳ್ಳಿ ರೂಪಾಯಿ ೨೯
ಒಂಟ್ಮುತ್ತು ೩೯
ಜೋಡ್ಮುತ್ತು ೪೫
ಮುತ್ತಿನಂತೋರು ೨೬೧
ಮುತ್ತಿನ ಕುದ್ರೆ ೧೦೫.೨೬೨
೨೬೩,೨೬೫
ಮುತ್ತಿನ ಕೋಲು ೫೭೧
ಮುತ್ತಿನ ಚೆಂಡು ೪೭
ಮುತ್ತಿನ ಚಪ್ಪರ ೨೩೪
ಮುತ್ತಿನ ತಡಿ ೨೬೪
ಮುತ್ತಿನ ವ್ಯಾಪಾರ ೫೬೯
ಮುತ್ತು ೨,೨೬೧
ರನ್ನದ ಕೋಣೆ ೧೯೮
ರನ್ನದ ತಟ್ಟೆ ೨೯
ರನ್ನದ ತಪ್ಲೆ ೨೫೨
ರನ್ನದ ರೂಪಾಯಿ ೩೭
ರನ್ನದ ಮಣೆ ೩೯
ರನ್ನದ ಸೌಟು ೨೫೩
ರತ್ನದ ಅಂಗ್ಡಿ ೫೬೯
ವಜ್ರದ ಉಂಗುರ ೨೫೮
ವಜ್ರದ ವಾಲೇಕಾರ ೮೪
ವಜ್ರಾಗಾರ ೧೦೩

**ಉಡುಗೆ ತೊಡುಗೆ**

ಅಚ್ಚೆಸರ ೩೦
ಅಡಿಕೆ ೩೧೩
ಉಂಗ್ರ ೩೦೮,೫೬೭,೫೬೯
ಕಂಟಿಸರ (ಕಂಟೀಸರ, ಕಂಠಿಹಾರ)
೩೯,೩೫೬,೩೫೭, ೫೨೨,೫೨೩
ಕುಪ್ಪೆಬಳೆ ೩೦೯
ಜೋಮಾಲೆಸರ ೩೮,೩೯
ತಾಳಿ (ತಾಲಿ) ೨೧೯,೨೨೦,೩೮೩
ನತ್ತು ೧೯೯,೨೬೫,೨೯೯

ನಾಗರು ೪೩೩
ಪಗ್ಡೆ ಸರ ೩೦
ಪಚ್ಚೆ ಸರ ೩೦
ಪಟ್ಟೆ ೩೩೮,೫೫೫,೫೮೬,೫೮೮
ಪದಕ ೫೬೨
ಪವನ್‌ಸರ ೩೦
ಬಂಗಾರದ ಬಳೆ ೩೦೯
ಬುಗುಡಿ ೩೬೯,೩೭೧
ಮಂಗಳ ಸೂತ್ರ ೬೨,೬೩,೨೫೬,೪೭೬
ಮಾಂಗಲ್ಯ ೪೭೪,೫೨೫,೫೬೦
ಮುತ್ತಿನ ವಾಲೆ ೪೨೫
ಮುತ್ತಿನುಂಗ್ರ ೫೬೭,೫೬೯
ವಂಕಿ ೧೬೪
ವಜ್ರದ ಉಂಗುರ ೨೫೮
ವಾಲಿ ೨೨೦
ಇಳಕಲ್‌ಸೀರೆ ೧೧೪
ಚೀಟಿರವ್ಕೆ ೨೫೦
ಚೀಟಿ ಸೀರೆ ೨೫೪
ತೂತ್ಕಾಲ್‌ಚಪ್ಲಿ ೩೯೮
ನಾಗರಜಡೆ ೩೧೯
ಪಾತುರ್‌ಪಂಚೆ ೩೬೭
ಮಂಜಿನ ಅಂಗಿ ೩೯೨
ಮುದುರೆ ರುಮಾಲು ೩೯೨
ಮರಸ್ಸೈಜ್ ಪಂಚೆ ೩೯೭
ಮಲ್ ಮಲ್ನಂಗಿ ೩೯೮
ಮುತ್ತಿನ ಅಂಗಿ ೫೭೦
ಹತ್ತು ವರದ ಶಾಲು ೫೭೧
ಹಸಿರು ಸೀರೆ ೫೯೧

**ದೇವರು ಹಾಗೂ ಪೌರಾಣಿಕ-ವ್ಯಕ್ತಿ ಸ್ಥಳ, ಪ್ರಾಣಿ, ಪಕ್ಷಿಗಳು ಇತ್ಯಾದಿ**

ಅಂಬಿಕಾದೇವಿ ೧೭
ಅರ್ಜುನ ೩೧,೩೭,೫೪೬
ಅನಸೂಯಾದೇವಿ ೩೫೫
ಅಶ್ವತ್ಥಾಮ ೬೨
ಅಶ್ವಪತಿ ೬೩
ಅಹಲ್ಯೆ ೬೪
ಆದಿಕೇಶವ ೪೯೫
ಆರುಂದತಿ ೩೧೦
ಈಶ್ವರ ೧೧೫,೧೧೬
ಉತ್ತರೆ ೬೨
ಉಮಾಪತಿ ೩೧೦,೪೭೧
ಕಣ್ವ ಋಷಿ ೧೬೫
ಕುಂತಿ ೨೫೨
ಕೈಕೆ ೪೯೬
ಕ್ರೌಂಚಪಕ್ಷಿ ೪೬೪
ಕೌರವರು ೩೩೨,೩೩೪,೬೮೪
ಖಗವಾಹನ ೪೮೯
ಗಂಗಾಧರೇಶ್ವರ ೫೫೬
ಗಂಗೆ ೨೨೬
ಗಂಧರ್ವರು ೪೩೬
ಗಜಾನನ ೫೦೨,೫೦೩
ಗಣಪತಿ ೧೯೨,೪೭೧,೫೪೮
ಗೋಪಾಲ ೨೪೩
ಗೌರಿ ೨೨೬
ಚಂದ್ರಶೇಖರ ೪೮೫
ಚಾಂಗಣಾದೇವಿ ೨೪೯
ಜಟಾಯು ೨೫೭
ಜನಕರಾಜ ೨೫೮
ಜಲದೇವತೆ ೫೮
ತಕ್ಷಕ ೩೩೦
ದಕ್ಷ ೬೮೧
ದೃವಕುಮಾರ ೨೭೭,೩೦೩,೩೦೪
ದುಶ್ಯಂತ ೩೦೨
ದ್ರೌಪತಿ (ದಿ) ೪೮೮, ೫೨೭



ಧುರ್ಯೋಧನ ೪೫೯,೩೦೧
ನಾರಾಯಣ ೨೭೭,೩೦೪,೪೩೯
ಪಂಡರಿರಾಯ ೨೮೭
ಪಂಪಾಪತಿ ೧೯೧
ಪದ್ಮಾವತಿ ೭೮
ಪರ್ವತರಾಜ ೩೩೧
ಪರಮೇಶ್ವರ ೨೬೭,೩೨೮, ೩೩೧, ೩೩೬
ಪರಶುರಾಮ ೨೭೦
ಪರೀಕ್ಷಿತ ೩೩೦
ಪ್ರಹ್ಲಾದ ೪೮೧
ಪಾಂಡವರು ೬೨,೨೫೨,೩೩೨, ೩೩೪,೪೮೪
ಪಾಂಚಾಲಿ ೩೦೧
ಪಾರ್ವತಿ ೨೦,೧೧೬,೩೩೧, ೩೩೫, ೩೩೬,೫೮೩,೫೧೬,೫೨೮
ಬದರಿನಾಥ ೪೦೪
ಬಲರಾಮ ೪೫೬
ಬ್ರಹ್ಮ ೩೫೫,೬೦೮,೬೮೬
ಬ್ರಹಾಸ್ತ್ರ ೬೨
ಬೃಂಗಮುನಿ ೪೯೫
ಭಾರತಿ ೩೧
ಭೀಮ ೩೧,೫೧೫
ಭೀಮಸೇನ ೩೮೮
ಯಮ ೩೬
ರತಿ (ದೇವಿ) ೪೮೯,೬೮೧
ರಾಘವೇಂದ್ರ ೩೯೩,೪೩೫
ರಾಜಶೇಖರ ೪೮೫
ರಾಮ ಮುದ್ರಿಕೆ ೪೯೭
ರಾವಣ ೨೫೭
ರುಕ್ಮಿಣಿ ೧೭,೨೦
ರೋಹಿಣಿ ೬೭೧
ಲಕ್ಷ್ಮಣ ೪೯೮
ಲಕ್ಷ್ಮಿ ೧೧೬, ೨೦೧,೨೨೨,೪೧೯,೪೫೪, ೪೫೬, ೪೫೭.೪೮೩,೫೨೫
ವಶಿಷ್ಟ ೪೬೮
ವಸುದೇವ ೪೬೯
ವಾಣಿ ೬೮೬
ವಿಘ್ನೇಶ್ವರ ೪೭೨
ವಿಶ್ವಾಮಿತ್ರ ೪೬೮,೪೭೭,೫೭೮
ವಿಶ್ವೇಶ್ವರ ೫೫೬
ವಿಷ್ಣು ೩೫೫,೬೯೫
ವೆಂಕಟಪತಿ ೫೪೮
ವೈಕುಂಠಪತಿ ೭೮
ಶಂಕರ ೪೮೫,೪೯೯
ಶಕುಂತಲೆ ೧೬೫.೩೦೨,೪೮೦
ಶಿವ ೨೭೬, ೩೩೧,೪೮೩ ೪೮೪,೪೮೫,೪೮೬,೬೮೭
ಶ್ರೀಕಾಂತ ೩೩೫,೫೨೮
ಶ್ರೀಕೃಷ್ಣ ೩೧,೯೭೨,೪೬೯,೪೮೭, ೪೯೪,೫೪೬
ಶ್ರೀರಾಮ ೬೪,೨೫೭,೩೮೯,೪೪೮, ೪೯೬,೪೯೮,೫೧೫,೫೪೨
ಶ್ರೀರಾಮದೂತ ೪೯೭
ಸಂಗಮೇಶ್ವರ ೫೫೬
ಸತ್ಯವಾಹನ ೬೩
ಸತಿ ೬೮೧
ಸರಸ್ವತಿ ೧೧೬,೨೦೧,೩೨೮,೩೩೫ ೪೫೬,೪೭೧,೪೮೩,೫೨೫.೫೨೭, ೫೨೮,೫೪೮
ಸಾವಿತ್ರಿ ೧೮,೩೬,೬೩,೫೧೬,೫೩೪
ಸಿದ್ಧರಾಮೇಶ್ವರ ೫೫೬
ಸಿದ್ಧಲಿಂಗೇಶ್ವರ ೫೫೬

ಸೀತಾದೇವಿ (ಸೀತೆ) ೫೫,೫೭,೭೧,೨೫೮, ೩೮೯,೪೦೫,೪೯೭, ೫೪೧,೫೪೨
ಸುಧಾಮ ೪೯೦
ಸುದೇಷ್ಣೆ ೫೪೪
ಸುಭದ್ರೆ ೪೯೩, ೫೪೬
ಸೈರಂಧ್ರಿ ೫೪೪
ಸೋಮೇಶ್ವರ ೫೫೬
ಹನುಮ ೫೪೧
ಹರಿ ೪೮೩
ಹರಿಶ್ಚಂದ್ರ ೪೬೮, ೫೭೮, ೫೭೯
ಹಿರಣ್ಯಕಶಪ ೬೦೮
ಹಿರಣ್ಯಾಕ್ಷ ೬೦೮

**ಪೌರಾಣಿಕ, ಐತಿಹಾಸಿಕ ಹಾಗೂ ಯಾತ್ರಾ ಸ್ಥಳಗಳು**

ಅಜಂತಾ ೧೪೩
ಅಲಹಾಬಾದ್ ೪೦೫
ಉಡತಡಿ ೧೯
ಉಡುವ ೨೧
ಉಡುಪಿ ೩೭೨
ಎಡೆಯೂರು ೫೫೬
ಐಹೊಳೆ ೧೪೩
ಕಾಶಿ ೧೨೦, ೫೫೬
ಕಿತ್ತೂರು ೨೦೦
ಕೂಡಲ ೫೫೬
ಕೈಲಾಸ ೪೯೯
ಕೊಲ್ಲಾಪುರ ೨೨೨
ಗೋಕರ್ಣ ೫೫೬
ಗೋಕುಲ ೪೩೯, ೪೯೪
ದಂಡಕಾರಣ್ಯ ೪೯೮
ದ್ವಾರಕೆ ೪೯೪
ಪರ್ಣಕುಟೀರ ೫೪೨
ಪೋರ್‌ಬಂದರ್ ೪೦೫
ಬಾಗೇವಾಡಿ ೧೯, ೩೫೩, ೪೦೫
ಬೆಳವಡಿ ೨೦೦
ಮಂತ್ರಾಲಯ ೩೯೩, ೪೪೫
ಮಕ್ಕ ೩೩೯
ಮದುರೆ ೪೯೪
ಲಂಕೆ ೪೯೭
ವಿಜಯನಗರ ೪೭೩, ೪೭೫, ೪೭೮
ಶಿವಗಂಗೆ ೫೫೬
ಸ್ವಾದಿ ೪೭೦
ಸೊಲಗ ೫೫೬
ಸೊಲ್ಲಾಪುರ ೫೫೬
ಹಂಪೆ ೧೯೧

**ನದಿಗಳು**

ಕೃಷ್ಣ ೨೧೨
ಕೂಡಲಸಂಗಮ ೨೧೨
ಗಂಗಾ ೨೧೨
ತ್ರಿವೇಣಿ ಸಂಗಮ ೨೧೨
ಮಲಪ್ರಭಾ ೨೧೨
ಯಮುನಾ ೨೧೨, ೨೪೮, ೪೩೬, ೪೩೯
ಸರಸ್ವತಿ ೨೧೨

**ಚಾರಿತ್ರಿಕ ಮತ್ತು ಧಾರ್ಮಿಕ ವ್ಯಕ್ತಿಗಳು**

ಅಕ್ಕಮಹಾದೇವಿ (ಅಕ್ಕಮ್ಮ) ೧೮, ೧೮.೨ ೧೯, ೨೧
ಅರವಿಂದ ೩೦೯, ೩೮೬



ಕಿತ್ತೂರು ರಾಣಿ ಚನ್ನಮ್ಮ ೧೯೯, ೨೦೦, ೨೦೧,
ಗುತ್ತಿ ಅರಸ ೯೭
ಗಾಂಧಿ ೨೨೯, ೨೩೦, ೨೩೧, ೩೫೧ ೩೫೨, ೩೫೩, ೩೮೬, ೪೦೪, ೪೦೫, ೬೬೬
ತುಕಾರಾಮ ೨೮೭
ನೆಹರು ೨೩೧, ೨೬೦, ೨೫೩, ೩೮೬, ೪೦೫, ೬೬೬
ಪೈಗಂಬರ್ ೩೩೯
ಬಸವಣ್ಣ ೧೯, ೬೮, ೩೨೮, ೩೫೧, ೩೫೨, ೩೫೩, ೪೦೫
ಬೆಳವಡಿ ಮಲ್ಲಮ್ಮ ೨೦೦
ಮಲ್ಲಮ್ಮ ೩೯೯, ೪೦೦
ಲೋಕಮಾನ್ಯ ತಿಲಕ ೫೨೬
ವಾದಿರಾಜ ೪೭೦
ವಿದ್ಯಾರಣ್ಯ ೪೭೩, ೪೭೪, ೪೭೫
ವಿವೇಕಾನಂದ ೩೨೭, ೩೮೬
ಶಾಸ್ತ್ರಿ (ಲಾಲ್‌ಬಹುದ್ದೂರ್) ೩೮೬
ಶಿವಾಜಿ ೪೦೦
ಶುಭಾಶ್ಚಂದ್ರ ೩೫೩

**ದೇಶ, ನಗರ, ಪಟ್ಟಣ ಹಾಗೂ ಊರುಗಳು**

ಪಂಜಾಬ್ ೩೨೫
ಭಾರತ ೩೨೭, ೩೮೫, ೩೮೭, ೩೮೯
ಕಾಶ್ಮೀರ ೫೪೭
ಬೆಂಗ್ಳೂರು ೧೪, ೩೭೩, ೩೭೪
ಬೊಂಬಾಯಿ ೧೨, ೧೩; ೧೫, ೩೭೪
ಮದ್ರಾಸು ೧೪, ೩೯೯
ಮೈಸೂರು ೧೧೧, ೩೫೮, ೩೬೪, ೪೩೫, ೫೬೦
ಸೋಲೋರಿಪುರ (ಸೊಲ್ಲಾಪುರ) ೩೫೪
ಇಳಕಲ್ ೧೧೧
ಕಡೂರು ೧೬೨
ಗದಗ ೧೩, ೧೫, ೩೦
ಚನ್ನರಾಯಪಟ್ಟಣ ೧೦೬
ತರೀಕೆರೆ ೫೧೩
ದಾವಣಗೆರೆ ೧೫೫, ೨೯೯, ೩೫೪, ೩೬೭
ದುರ್ಗ (ಚಿತ್ರದುರ್ಗ) ೨೯೯
ಧಾರವಾಡ ೨೫೫, ೩೬೭, ೩೯೮
ಬಳ್ಳಾರಿ ೩೫೬, ೩೫೭, ೩೫೮
ಬೀರೂರು ೪೩೫
ಬೆಟಗೇರಿ ೧೩, ೧೫, ೩೦
ಬೇಲೂರು ೧೦೬
ಭದ್ರಾವತಿ ೨೩೯
ಶಿಕಾರಿಪುರ ೬೧೦, ೬೫೭
ಸಾಗರ ೬೫೭
ಹರಿಹರ ೧೫೫
ಹಾವೇರಿ ೨೩೩
ಹುಬ್ಬಳ್ಳಿ ೨೫೫, ೩೪೧, ೩೬೩, ೩೬೭, ೩೭೮, ೩೬೮
ಹೊನ್ನಾಳಿ ೨೧೦
ಹೊಸಪೇಟೆ ೨೪೦

ಆಲೂರು (ಹಾ) ೧೦೬
ಇಂಪ್ಲಿ (ಧಾ) ೧೧೧
ಈಸೂರು (ಶಿ) ೪೨೩
ಕಂಪ್ಲಿ (ಧಾ) ೧೧೧

ಕತ್ತಿಗೆ (ಹೊ) ೨೧೦
ಕುಂಬೇನಹಳ್ಳಿ (ಚ) ೨೦೩
ಕುಪೆಲೂರು (ಧಾ) ೩೯೮
ಕುರುಗೂರು (ಚಿ) ೧೮೫
ಕುರುವ (ಹೊ) ೨೧೦
ಕೂಡ್ಲಿಗಿ (ಬ) ೧೫೬
ಕೊಟ್ಟೂರು (ಬ) ೧೫೬
ಜೀನಳ್ಳಿ (ಹೊ) ೧೭೦
ತಿಮ್ಮಾಪುರ (ಶಿ) ೧೨೩
ದಂಡಿನಶಿವರ (ತು) ೩೫೯
ನಾಯ್ಕನಟ್ಟಿ (ಚಿ) ೩೧೫
ಪುರುನೂರು (ಚಿ) ೫೬೦, ೬೧೦
ಬಳ್ಳೆಕಟ್ಟೆ (ತು) ೩೫೯
ಬೀಚ್ನಳ್ಳಿ (ನಾ) ೪೬೨
ಮಂಡಗದ್ದಿಗೆ (ತೀ) ೨೩೪
ಮಾಸೂರು (ಧಾ) ೨೩೪
ಮಾಳೂರು (ತೀ) ೨೩೪
ರಾಂಪುರ (ಹೊ) ೩೧೫
ವಡ್ರಳ್ಳಿ (ನಾ) ೪೬೨
ಹುಲ್ಲೇಹಾಳ (ಚಿ) ೩೦೯

**ಆಟ–ಕ್ರೀಡೆ**

ಪಗಡೆ ೭, ೮, ೨೦, ೬೭, ೩೩೪, ೪೨೪, ೪೩೯
ಸರಿಬೆಸ ೩೩೪

**ಆಯುಧಗಳು**

ಕಠಾರಿ ೩೭೧
ಖಡ್ಗ ೩೭೧

**ಕಸುಬುದಾರರು**

ಕುಂಬಾರ ೨೦೨
ಬಡಿಗಾರ ೨೦೨

**ಕಾಯಿ–ಸೊಪ್ಪುಗಳು**

ಅಕ್ಕಿಬೆಕ್ಕಿ ಸೊಪ್ಪು ೨೫
ಉಳ್ಳಾಗಡ್ಡೆ ೧೨೪
ಕಂಚೀಕಾಯಿ ೧೨೮
ಕರಿಹರಿಬೆ ಸೊಪ್ಪು ೧೭೨
ಗಣಿಕೆ ೪೧
ಗೊರ್ಜಿ ಸೊಪ್ಪು ೪೯
ಬೇಣಿಕಾಯಿ ೧೩೨
ಜವಳಿಕಾಯಿ ೫೯೨
ಮಿಣಿಕೆ ೪೧
ಮುಳಗಾಯಿ ೫೯೨
ವಟ್ಟೆ ಮೆಣಸಿನಕಾಯಿ ೧೧೨

**ಕೃತಿ/ಕೃತಿಕಾರರು**

ದಾಸರು ೨೬೯
ಪಂಪ ೩೨೪
ಬಂಕಿಮ ೧೮೨
ಮಹಾಭಾರತ ೨೯೬
ವ್ಯಾಸರು ೨೬೬
ಸುಧಾ ಪರಿಮಳ ಗ್ರಂಥ ೫೪೫

**ಕೃಷಿ ಸಾಧನಗಳು**

ಕಣ್ಣಿ ೪೨೮



ಕೂರಿಗೆ ೧೩೫, ೩೪೨
ಸೂಗ ೫೬, ೩೦೭ ೪೨೮
ಪಟ್ಗಣ್ಣಿ ೩೦೭

**ಇತರೆ**

ಕಂಕಣ ೧೫೨, ೧೫೩, ೧೫೪
ಹಚ್ಚೆ ೧೨೩, ೧೪೨, ೨೧೫, ೨೧೮

---

ಹಾಸನ (ಹಾ), ಧಾರವಾಡ (ಧಾ), ಶಿಕಾರಿಪುರ (ಶಿ), ಹೊನ್ನಾಳಿ (ಹೊ), ಚನ್ನರಾಯ ಪಟ್ಟಣ (ಚ), ಚಿತ್ರದುರ್ಗ (ಚಿ), ಬಳ್ಳಾರಿ (ಬ), ತುರುವೇಕೆರೆ (ತು), ನಾಗಮಂಗಲ (ನಾ), ತೀರ್ಥಹಳ್ಳಿ (ತೀ)

## ಅರ್ಥ, ವಿವರಣೆ, ಟಿಪ್ಪಣಿ

**ಅಂಗಾರು** ೪೬೬. ಕಾಲು ಚೈನುಗಳಿಗೆ ಗೆಜ್ಜೆಗಳ ನಡುವೆ ಅಂದಕ್ಕಾಗಿ ಇಡುವ ಬತ್ತದ ಗಾತ್ರದ ವಿನ್ಯಾಸ. ಹಂಗರು ಎಂಬ ಒಂದು ಜಾತಿಯ ಸಸ್ಯದ ಎಲೆಯನ್ನು ಹೋಲುವುದರಿಂದ ಅದನ್ನೇ ಕುರಿತು ಇಲ್ಲಿ ಹೇಳಿರಬಹುದೆ ?

**ಅಂಡೆ** ೬೪೦. ಅಡುಗೆ ಮನೆಯಲ್ಲಿ ನೀರು ತುಂಬಿಟ್ಟುಕೊಳ್ಳಲು ಬಳಸುವ ದೊಡ್ಡ ತಾಮ್ರ ಅಥವಾ ಪಿತ್ತಾಳೆಯ ಚಿಕ್ಕಬಾಯುಳ್ಳ ಪಾತ್ರೆ.

**ಅಚ್ಚೇರು** ೨೬೪. ಅರ್ಧಸೇರು

**ಅರಲು** ೨. ಸಗಣಿಯ ಬಗ್ಗಡ ಅಥವಾ ಕೆಸರು. ಅಂಗಳವನ್ನು ಸಗಣಿಯಿಂದ ಸಾರಿಸಿ, ರಂಗೋಲೆ ಇಟ್ಟರೆ ಚಂದ ಎಂಬ ಅರ್ಥದಲ್ಲಿ ಈ ಶಬ್ದ ಇಲ್ಲಿ ಬಳಕೆಯಾಗಿದೆ.

**ಅರ್ದುಗರಿ** ೯೩. ಅರ್ಧ ವಯಸ್ಸಿನ ಕುರಿ

**ಅಳ್ಳಿ** ೬೫. ಶ್ವಾಸಕೋಶ, ದೊಮ್ಮ

**ಆನ್ಕಲ್ಲು** ೩. ಮಳೆಯ ಹನಿಗಳೊಡನೆ ಬೀಳುವ ನೀರುಗಲ್ಲು. ಇವುಗಳನ್ನು ಸಂಗ್ರಹಿಸಿಟ್ಟು ಜನಪದ ವೈದ್ಯದಲ್ಲಿ ಬಳಸುತ್ತಾರೆ.

**ಇಳ್ಳೇದೆಲೆ** ೧೨೯. ವಿಳ್ಳೇದೆಲೆ

**ಉಡಿಯಕ್ಕಿ** ೪೫. ಮಡಿಲಕ್ಕಿ

**ಉತ್ತುತ್ತೆಮರ** ೪೩. ಜಮ್ಮುನೇರಳೆ ಹಣ್ಣಿಗಿಂತ ಸ್ವಲ್ಪ ಉದ್ದನೆಯ ಗಾತ್ರದ ಹಣ್ಣು ಬಿಡುವ ಒಂದು ಜಾತಿಯ ಮರ. ಒಣಗಿದ ಈ ಹಣ್ಣನ್ನು ಬಸುರಿ, ಬಾಣಂತಿ ಮತ್ತು ಮಕ್ಕಳಿಗೆ ಪೌಷ್ಠಿಕ ಆಹಾರವಾಗಿ ಕೊಡುತ್ತಾರೆ.

**ಉರುಡು** ೬೪. ಉರುಳು

**ಉಳ್ಳಾಗಡ್ಡೆ** ೧೨೪. ಈರುಳ್ಳಿ

**ಎಣ್ಗಾಯಿ** ೧೬೫. ಮಸಾಲೆ ಹಚ್ಚಿ ಎಣ್ಣೆಯಲ್ಲಿ ಬೇಯಿಸಿದ ದುಂಡನೆಯ ಬದನೆಕಾಯಿ.

**ಎಣ್ಣೆಚಟಿಗೆ** ೧೬೬ ಎಣ್ಣೆ ತುಂಬಿಟ್ಟುಕೊಳ್ಳುವ ಗಡಿಗೆ.

**ಎತ್ತಂಗ** ೨೩೪ (?)



**ಐಗಂಚಿಮರ** ೫೨೩. ಅದೇನು ಐಗಂಚಿ ದೂರವೆ, ಹೊಳೆ ದಾಟಿದ್ರೆ ಸಿಗುತ್ತೆ ಎಂಬ ಮಾತಿನ ಆಧಾರದ ಮೇಲೆ ಬಹಳ ಎತ್ತರವಾದ ಮರ ಎಂದು ಊಹಿಸಬಹುದು—ಮುಗಿಲೆತ್ತರದ ಮರ ಎಂಬರ್ಥದಲ್ಲಿ.

**ಕಂಚಿಮರ** ೫೨೨. ಉಪ್ಪಿನಕಾಯಿಗೆ ಉಪಯೋಗಿಸುವ ಒಂದು ಜಾತಿಯ ಹುಳಿ ಕಾಯಿ ಬಿಡುವ ಮರ.

**ಕಟ್ಟಿರವೆ** ೧೫೫ ಕಚ್ಚಿದರೆ ಹೆಚ್ಚು ಉರಿಯುವ ಒಂದು ಜಾತಿಯ ಇರುವೆ.

**ಕಡುವಿನಸ್ವಾರಿ** ೧೬೨ ಕಡುಬು ಬೇಯಿಸುವ ದೊಡ್ಡ ಮಡಕೆ.

**ಕಡ್ಕು** ೨೫೫. ಜಬರದಸ್ತು.

**ಕರಿಹಿಂಡಿ** ೧೩೩ ಕಪ್ಪು ಚಟ್ನಿ ಅಂದರೆ ಹುಚ್ಚೆಳ್ಳು ಅಥವಾ ಕುರೇಸಾಣಿಚಟ್ನಿ.

**ಕಲ್ಲಿಬೇರು** ೧೬೫ (?)

**ಕಳ್ಳು** ೧೬೬ ಹರಳು ; ಚೂರು

**ಕಾಜಗ** ೧೮೦ ಕಾಗದ

**ಕಾರೆಮುಟ್ಟೆ** ೧೮೯. ಕಾರೆಗಿಡಗಳ ಗುತ್ತು. ಗುಡ್ಡ ಬೆಟ್ಟಗಳಲ್ಲಿ ಬೆಳೆಯುವ ಈ ಗಿಡ ಮುಳ್ಳಿನಿಂದ ಕೂಡಿರುತ್ತದೆ. ಕಾರಬ್ಬದೊತ್ತಿಗೆ ಕಾರೆಹಣ್ಣು ಎಂಬಂತೆ ಜೂನ್ ಜುಲೈ ತಿಂಗಳಲ್ಲಿ ಕಾಯಿಗಳು ಚಿನ್ನದ ಬಣ್ಣದ ಹಣ್ಣುಗಳಾಗುತ್ತವೆ. ಕಾರೆಹಣ್ಣು ಜೋರೆ ಹುಡುಗರ ತಿನಿಸುಗಳಲ್ಲಿ ಒಂದು. ಗಂಡುಗಾರೆ ಮುಳ್ಳು ಕಾಂಡಗಳೆಲ್ಲ ಸಾಧಾರಣ ಕಾರೆ ಗಿಡಕ್ಕಿಂತ ದೊಡ್ಡವು. ಇದರ ಕಾಯಿ ಸಣ್ಣ ನಿಂಬೆಗಾತ್ರವಿರುತ್ತದೆ. ಇದನ್ನು ತಿನ್ನುವುದಿಲ್ಲ.

**ಕ್ಯಾದ್ಗೆಗರೆ** ೨೦೬ ಕೇದಿಗೆ ದಳ

**ಕೂರೆ** ೧೮೮ ಕೊಳಕು ಬಟ್ಟೆಯಲ್ಲಿ ಕಾಣಸಿಗುವ ಬಿಳಿಯ ಹೇನು.

**ಕೋರಿ** ೧೮೮ ಕಂಬಳಿ ?

**ಗಣಿಕೆ** ೪೧ ಕಬ್ಬಿನಗದ್ದೆ, ತೋಟತುಡಿಕೆಗಳಲ್ಲಿ ಬೆಳೆಯುವ ಒಂದು ಸಸ್ಯ. ಕಪ್ಪು ಗಣಿಕೆ ಹಾಗೂ ಕೆಂಪುಗಣಿಕೆಗಳೆಂದು ಎರಡು ಬಗೆಗಳಿದ್ದು, ಮೊದಲನೆಯದು ಕಪ್ಪು ಮಿಶ್ರಿತ ಹಸಿರು ಬಣ್ಣದ ಗಿಡವಾಗಿದ್ದು ಹಣ್ಣು ಕಪ್ಪಗಿರುತ್ತದೆ. ಮತ್ತೊಂದು ಹಳದಿ ಮಿಶ್ರಿತ ಹಸಿರಿದ್ದು ಹಣ್ಣು ಕೆಂಪು. ಮೆಣಸಿನಗಾತ್ರದ ಈ ಹಣ್ಣನ್ನು ತಿನ್ನುತ್ತಾರೆ. ಕರಿಗಣಿಕೆ ಸೊಪ್ಪಿನ 'ಪಚ್ಚಿ' ಸಾರು ಬಾಣಂತಿಯರಿಗೆ ಒಳ್ಳೆಯದೆಂದು ಹೇಳುತ್ತಾರೆ.

**ಗ್ಯಾದ್ಲು** ೬೬೭ ಗೋದನೆ ; ಗೌಜಲಿಕೆ ; ಕೊಟ್ಟಿಗೆಯಲ್ಲಿ ಕಟ್ಟಿದ ದನಗಳಿಗೆ ಹಾಕಿದ ಹುಲ್ಲುಸೊಪ್ಪು ಚೆಲ್ಲಾಡದಂತೆ ಕಲ್ಲು, ಮಣ್ಣುಗಳಿಂದ ಕಟ್ಟಿದ ಒಂದೆರಡು ಅಡಿ ಎತ್ತರದ ಗೋಡೆ.

**ಗೀಕಿನಮೊಟ್ಟು** ೨೭೪ ಜೀಕಿನಕೆರ.

**ಗೊಂಚಾಳಶೆನಿ** ೨೬೧ ಗೋವಿನ ಜೋಳ ಅಥವಾ ಮುಸುಕಿನ ಜೋಳದ ತೆನೆ.

**ಗೋದಿಖಾಕ್ರಿ** ೨೪೦ (?)

**ಗೋಟಡಿಕೆ** ೨೩೯ ಒರಟಾದ ಗಟ್ಟಿ ಅಡಿಕೆ.

**ಚಕ್ಕಂದ** ೧೨೯ ಸರಸ ; ಲಲ್ಲೆ

**ಚೀಣಿಕಾಯಿ** ೧೩೨ ಚಿನ್ನಿಕಾಯಿ ; ಒಂದು ಜಾತಿಯ ಕುಂಬಳಕಾಯಿ.

**ಚೂಜಿ** ೨೫೫ ಸೂಜಿ.

**ಜವಳಿಕಾಯಿ** ೫೯೨ ಗೋರಿಕಾಯಿ, ಒಂದು ಕಾಯಿಪಲ್ಲೆ.

**ತಾಟು** ೮೦ ತಟ್ಟೆ

**ತಾಳ್ದ** ೨೫೭ ಪಲ್ಯ

**ತುಡುಗು** ೭೫ ತುಂಟತನ ; ಬಾಯಿ ಚಪಲ ; ಬೇರೆಹೆಣ್ಣಿನ ಸಂಗ

**ದಡಿದೋತ್ರ** ೧೫೫ ದೊಡ್ಡ ಅಂಚಿನ ಪಂಚೆ

**ದಸವಿಕಟ್ಟೆ** ೪೬೬ (?)

**ದಾಡಾಬಂದ್** ೪೭ ತೊಂದರೆ ; ಗೊಂದಲ

**ನಗ** ೩೦೭ ನೊಗ

**ನಾಚು** ೧೧೦ ನೃತ್ಯ

**ನೀರಿನಮಟ್ಟೆ** ೨೩೨ ಕಪಿಲೆ (?)

**ಪಡಕಿನ ಬಾಗಿಲು** ೧೯೮ (?)

**ಪಟ್ಕೆಣ್ಣೆ** ೩೦೭ ಜೊತಿಗೆ. ದನಗಳನ್ನು ಬೇಸಾಯಕ್ಕೆ ಹೂಡುವಾಗ ಹೆಗಲ ಮೇಲಿನ ನೊಗ ಬೀಳದ ಹಾಗೆ ಕೊರಳಿಗೆ ಕಟ್ಟುವ ಹಗ್ಗದ ಜೋಡಿ.

**ಪನ್ನಿಂಗ್ರಾಪು** ೨೩೯ ಒಂದು ಬಗೆಯ ಕ್ರಾಪು.



**ಪಲ್ಲಂಗ** ೬ ತೂಗುಮಂಚ ?

**ಪಲ್ಲಿಗರಿಂಡಿ** ೧೩೩ = ಕರಿಹಿಂಡಿ

**ಪಾನ್‌ಪಟ್ಟಿ** ೨೬೦ ಬೀಡ ; ಎಲ್ಲ ಬಗೆಯ ಮಸಾಲೆ ಸೇರಿಸಿ ಪೊಟ್ಟಣ ಕಟ್ಟಿದ ಎಲೆ ಅಡಿಗೆ

**ಬಕ್ರಿ** ೬೪೯ ಜೋಳದ ರೊಟ್ಟಿ

**ಬರಪೂರು** ೭೭ ಬಿರುಸು

**ಬಳಲ್ಮುಡಿ** ೪೮೪ ಬಲಗಡೆಗೆ ಕಟ್ಟಿದ ಮುಡಿ ?

**ಬುಗುರಿಮರ** ೯೬ ಬುಗುರಿಯ ಹಾಗೆ ತಿರುಗಿಸಬಹುದಾದ ಕಾಯಿ ಬಿಡುವಮರ ; ಉಲುಚಿಮರ

**ಬುತ್ತಿ** ೨೮ ಕಟ್ಟಿಕೊಂಡು ಹೋಗುವ ಅನ್ನ ರೊಟ್ಟಿ ಮೊದಲಾದ ಆಹಾರ ಪದಾರ್ಥ.

**ಮಂಡಕ್ಕಿ** ೧೦೦ ಪುರಿ

**ಮುಚ್ಚೆ** ೫೩ ಕೆರ ; ಎಕ್ಕಡ

**ಮುಬ್ಬು** ೬೧೬ ನಸುಕತ್ತಲೆಯಾಗೆ ಆವರಿಸಿದ ಮೀನಿನ ಹಿಂಡು

**ಮುಸೂತಿ** ೫೭೪ ಮಸೀದಿ

**ಮಾಲಿಂಗ** ೨೭೪ (?)

**ಮಾಲ್ದಿ** ೬೬೭ ನೀರಿನಲ್ಲಿ ನೆನೆಸಿ, ಒಣಗಿಸಿ ಬೀಸಿದ ಅಕ್ಕಿ ಹಿಟ್ಟಿಗೆ ಹುರಿಗಡಲೆ, ಬೆಲ್ಲ, ಏಲಕ್ಕಿ, ಶುಂಠಿ ಸೇರಿಸಿ ಅರೆದು ಮಾಡಿದ ಒಂದು ಸಿಹಿ ಪದಾರ್ಥ. ಇದಕ್ಕೆ 'ಕಾಯ್ಹಾಲು'* ಅಥವಾ ಹಾಲು ಹಾಕಿಕೊಂಡು ಕಲೆಸಿಊಟ ಮಾಡುತ್ತಾರೆ. ದಾವಣಗೆರೆ, ಹೊನ್ನಾಳಿ ಸುತ್ತಿನ ಲಿಂಗಾಯತರ ಮದುವೆಗಳಲ್ಲಿ ಇದೊಂದು ಅಡುಗೆ ವಿಶೇಷ.

**ಮಾಳ್ಗಿಮನೆ** ೪೧೭ ಮಣ್ಣಿನ ಮೇಲ್ಛಾವಣಿ ಇರುವ ಮನೆ.

**ಮಿಣಕೆ** ೪೧ ಸೌತೆಕಾಯಿ ಗಾತ್ರದ ಕರಬೂಜ ರುಚಿಯ ಒಂದು ಬಗೆಯಹಣ್ಣು. ಹಣ್ಣಿನ ಮೇಲಿನ ತೆಳುವಾದ ಸಿಪ್ಪೆಯನ್ನು ಕೈಯಿಂದಲೇ ತೆಗೆದು ತುಂಡು ಮಾಡಿ ಬೆಲ್ಲದ ಪುಡಿ ಬೆರೆಸಿ ಸ್ವಲ್ಪ ಹೊತ್ತು ಹಾಗೆ ಬಿಟ್ಟು ತಿಂದರೆ ಬಲು ರುಚಿ.

---

* ತೆಂಗಿನಕಾಯಿ, ಬೆಲ್ಲ, ಏಲಕ್ಕಿ, ಶುಂಠಿ ರುಬ್ಬಿ ನೀರಿನಲ್ಲಿ ಕದಡಿ ಕುದಿಸಿದ ದ್ರವ ಪದಾರ್ಥ

**ಮುಗುಳು** ೪೬೭ ಚಿಗುರು

**ಮುಸುಣಿ** ೨೯೯ ಮುಸುಡಿ ; ಮೂತಿ ; ಮುಖ.

**ಮುಳಗಾಯಿ** ೫೯೨ ಬದನೆಕಾಯಿ

**ರಂಟೆ** ೧೩೩ ನೇಗಿಲು

**ಲಾಂದ್ರ ಸೋಪು** ೨೭೯ ಲಾಂದ್ರ ಅಂದರೆ ಲಾಟೀನು ಮಾರ್ಕಿನ ಸಾಬೂನಿರಬಹುದೆ?

**ಲೋಬಾನ** ೬೦೪ ಧೂಪದಪುಡಿ

**ವಟ್ಟೆ ಮೆಣಸಿನಕಾಯಿ** ೧೧೨. ದೊಣ್ಣೆ ಮೆಣಸಿನಕಾಯಿ

**ಸಂಕರ್ಪಣ** ೫೦೪ (?)

**ಸದರ** ೪೧೩ ಸದರಿ ; ಜಾಗ ; ಸಲಿಗೆ ಎಂಬ ಮತ್ತೊಂದು ಅರ್ಥವಿದೆ.

**ಸರಗಿ** ೫೩೫ ಹೆಂಗಸರ ಒಂದು ಕೊರಳ ಚಿನ್ನಾಭರಣ

**ಸರಿಗೆ** ೧೨ = ಸರಗಿ

**ಸರೀಕ್ರು** ೧೫ ಓರಗೆಯವರು ; ಸಮ ವಯಸ್ಸಿನವರು ; ಜೊತೆಗಾರರು ; ಸಂಗಡಿಗರು.

**ಸಾವಕ್ಕಿ ಸರಿ** ೫೩೩ ಸಾವೆ ಅಥವಾ ಸಾಮೆ ಅಕ್ಕಿಯ ಹಿಟ್ಟಿನೊಡನೆ ತುಪ್ಪ, ಸಕ್ಕರೆ ಸೇರಿಸಿ ಮಾಡಿದ ಗಟ್ಟಿ ಪಾಯಸದಂತಹ ಮಕ್ಕಳ ತಿನಿಸು.

**ಸ್ವಾಟೆ** ೫೮೭ ಕಟಬಾಯಿ ; ಬಾಯಿಯ ಅಂಚು.

**ಸಿಗ್ಗು** ೧೧೭ (?)

**ಹಾವಿನೋರಿ** ೪ (?)

**ಹುಗ್ಗಿ** ೧೦ ಪಾಯಸ

## ಒಡಪುಗಳನ್ನು ಹೇಳಿದವರು

**ಮಂಡ್ಯ ಜಿಲ್ಲೆ**

**ನಾಗಮಂಗಲ** ತಾ॥ **ಬಿಂಡಿಗನವಿಲೆ**—ಹೋ॥ ವಡ್ಡರಹಳ್ಳಿ

ಶ್ರೀಮತಿಯರಾದ ಜಯಮ್ಮ ಕಾಳೇಗೌಡ (೩೬), ಗೌರಮ್ಮ ಚುಂಚೇಗೌಡ (೪೨), ಸರೋಜಮ್ಮ ಕೆಂಪೇಗೌಡ (೩೨) ಹಾಗೂ ಕುಮಾರಿಯರಾದ ಶಾಂತ (೧೯) ಮತ್ತು ದಿನಮಣಿ (೧೭) ಎಲ್ಲರೂ ಒಕ್ಕಲಿಗರು.

**ಬೀಚನಹಳ್ಳಿ**

ಶ್ರೀಮತಿಯರಾದ ನಂಜಮ್ಮ ಬೋರೆಗೌಡ (೪೮), ನಿಂಗಮ್ಮ ನಂಜೇಗೌಡ (೪೬), ಪಾರ್ವತಮ್ಮ ಅಂದಾನಿಗೌಡ (೪೬) ಮತ್ತು ಜಯಮ್ಮ ನಾಗರಾಜೇಗೌಡ (೩೯).

**ಕೃಷ್ಣರಾಜಪೇಟೆ**—ತಾ॥ ಸಂತೇಬಾಚಹಳ್ಳಿ—ಹೋ॥ ಹಡವನಹಳ್ಳಿ

ಶ್ರೀಮತಿಯರಾದ ನಂಜಮ್ಮ ಗೌಡೇಗೌಡ (೫೫), ಯಶೋದಮ್ಮ ಗೌಡೇಗೌಡ (೪೮), ಗಿರಿಯಮ್ಮ ಕೆಂಪೇಗೌಡ (೬೫), ಹನುಮಮ್ಮ ರಂಗೇಗೌಡ (೪೦), ಯಶೋದಮ್ಮ ಮಂಜೇಗೌಡ (೨೧) ಮತ್ತು ಅಕ್ಕಮ್ಮ ಶಿವನಂಜೇಗೌಡ (೧೯) (ಎಲ್ಲರೂ ಒಕ್ಕಲಿಗರು) ಸಂಗ್ರಹ : ೧೯೮೦

**ಹಾಸನ ಜಿಲ್ಲೆ, ಶ್ರವಣಬೆಳಗೊಳ**—ಹೋ॥ **ಕುಂಬೇನಹಳ್ಳಿ**

ಶ್ರೀಮತಿಯರಾದ ಜವರಮ್ಮ ದಾಸೇಗೌಡ (೬೦ಹ), ತಿಮ್ಮಯ್ಯ ಮೂಡ್ಲಯ್ಯ (೬೦–ಹ) ಸಂಗ್ರಹ ೧೯೮೮.

**ತುಮಕೂರು**–ಜಿಲ್ಲೆ, **ತುರುವೇಕೆರೆ**–ತಾ॥, **ದಂಡಿನಶಿವರ**

ಶ್ರೀಮತಿಯರಾದ ಹೊನ್ನಮ್ಮ (೬೦–ಒ) ಮತ್ತು ಚನ್ನವೀರಮ್ಮ (೫೦–ಒ) ಸಂಗ್ರಹ : ೧೯೮೩.

**ಕುಣಿಗಲ್**–ತಾ॥, **ಅಮೃತೂರು**–ಹೋ॥

ಶ್ರೀಮತಿ ಲಕ್ಷ್ಮಮ್ಮ (೭೦), ಹೊಸಪಾಳ್ಯ

ಶ್ರೀ ಸೋಬಾನೆ ರಾಮಯ್ಯ (೨೮), ಮಾಗಡಿಪಾಳ್ಯ, ಸಂಗ್ರಹ ೧೯೮೭.

**ಚಿಕ್ಕಮಗಳೂರು**–ಜಿಲ್ಲೆ, **ತರೀಕೆರೆ**

ಶ್ರೀಮತಿಯರಾದ ಮಹದೇವಮ್ಮ ಸಣ್ಣನಿಂಗಪ್ಪ, ಯಲ್ಲಮ್ಮ ಚಿನ್ನಪ್ಪ

(೩೮), ಪಾರ್ವತಮ್ಮ, ತುಳಸಮ್ಮ ಮಹದೇವಪ್ಪ (ಎಲ್ಲರೂ ಹರಿಜನರು), ನಿಂಗಮ್ಮ (೬೦–ಹಾಲುಮತ) ಎಲ್ಲುರೂ ತುದೇಪೇಟೆ, ಗುಳ್ಳವನ ಬೀದಿಯವರು. ಶಾಂತಮ್ಮ (೫೮) ತುಗ್ಗಲಹಳ್ಳಿ, ಸಂಗ್ರಹ : ೧೯೮೩

**ಚಿತ್ರದುರ್ಗ–ಜಿ॥. ಬೀರಾವರ**

ಶ್ರೀಮತಿಯರಾದ ಶಿವಲಿಂಗಮ್ಮ ತಿಪ್ಪೇಸ್ವಾಮಿ (೪೨), ಭಾಗ್ಯಮ್ಮ ಚಂದ್ರಪ್ಪ (೩೦), ಬಸಮ್ಮ ಈಶ್ವರಪ್ಪ (೭೨) ಹುಲ್ಲೇಹಾಳದ ಪ್ರಭಾವತಿ ತಿಪ್ಪೇರುದ್ರ ಮತ್ತು ಹೊಳಲ್ಕೆರೆ ತಾ॥, ಗುಂಜಗನೂರಿನ ರಂಗಮ್ಮ ಕಲ್ಲಪ್ಪ (೩೬) ಎಲ್ಲರೂ ಲಿಂಗಾಯತರು.

ಶ್ರೀಮತಿಯರಾದ ತುರುವನೂರು ಶಾಂತಮ್ಮ, ಜ್ಯೋತಿ, ಉಮಾದೇವಿ, ಕೊಲ್ಲಮ್ಮ ಹಾಗೂ ಮಾಡನಾಯ್ಕನ ಹಳ್ಳಿಯ ಮಾರಮ್ಮ. ಎಲ್ಲರೂ ಹರಿಜನರು. ದಾವಣಗೆರೆ–ತಾ॥, ಮಾಯಕೊಂಡದ ಪರಶುರಾಮ (೩೧–ಹ) ಸಂಗ್ರಹ ೧೯೮೪.

**ಶಿವನೊಗ್ಗ ಜಿಲ್ಲೆ, ಹೊಸನಗರ**–ತಾ॥

ಶ್ರೀಮತಿಯರಾದ ರಾಮಚಂದ್ರಪುರದ ನಾಗರತ್ನ ಸುಬ್ರಹ್ಮಣ್ಯ (೩೬-ದೀವರು) ವಿದ್ಯಾರ್ಥಿನಿಯರಾದ ನೆಲ್ಲುಂಡೆಯ ನೆ. ಪೆಂ. ರಾಜೇಶ್ವರಿ (೨೦–ಬ್ರಾ) ಮತ್ತು ಎಸ್.ಸಿ. ಪೂರ್ಣಿಮಾ, (೨೦–ಚನ್ನಗಿರಿ–ಹೊಸನಗರ ವಾಸ) ಹುಂಚದ ಹೇಮಲತಾ (೨೭–ಹ) ಶಿಕ್ಷಕಿ ಜೆ.ವಿ. ನಾಗರತ್ನಮ್ಮ. ಸಂಗ್ರಹ ೧೯೮೫–೯೨.

**ಸಾಗರ**–ತಾ॥ ಆನಂದಪುರ–ಹೋ॥, ತಂಗಳವಾಡಿ

ಶ್ರೀಮತಿಯರಾದ ನಾಗಮ್ಮ ಮತ್ತು ದೇವಮ್ಮ (ದೀವರು), ವಿದ್ಯಾರ್ಥಿ ಟಿ.ಎಲ್. ನಾಗರಾಜ, ಸಂಗ್ರಹ: ೧೯೮೫.

**ಭದ್ರಾವತಿ**–ತಾ, ದಾನವಾಡಿ

ಶ್ರೀಮತಿಯರಾದ ಸೀತಮ್ಮ, ತುಂಗಮ್ಮ ಮತ್ತು ಗಂಗಮ್ಮ, ಹರಿಜನರು ಸಂಗ್ರಹ : ೧೯೮೪.

**ಹೊನ್ನಾಳಿ**–ತಾ॥

ಕುರುವ ಗ್ರಾಮದ ಶ್ರೀಮತಿಯರಾದ ಶಿವಜ್ಜಿ (೬೭), ಹಾಲೇಶಕ್ಕ (೩೦), ಪುಟ್ಟಮ್ಮ (೪೫), ಲಲಿತಮ್ಮ (೨೯) ಮತ್ತು ಮಲ್ಲಮ್ಮ (೬೦), ಲಿಂಗಾಯತರು **ಸುವರ್ಣಮ್ಮ** (೪೦–ಬ್ರಾ), **ಬೆಳಗುತ್ತಿಯ** ಕಮಲಮ್ಮ (೪೦), ಜಯಮ್ಮ (೫೫) ರಾಂಪುರದ ಪ್ರೇಮಕ್ಕ (೪೫), ವಡೇರಹತ್ತೂರಿನ ಶ್ರೀ ಚನ್ನಯ್ಯ (೪೦), ಜೀನ**ಗಳ್ಳಿಯ ಪ್ರ**ಮೀಳಪ್ರೇಮಾನಂದಪ್ಪ (೨೮) ಎಲ್ಲರೂ ಲಿಂಗಾಯತರು. ಸಂ. ೧೯೯೦.

**ಬೆಂಗಳೂರು** ನಗರ, ಶೇಷಾದ್ರಿಪುರ, ೨ನೇ ಮುಖ್ಯರಸ್ತೆ ಶ್ರೀಮತಿ ಅಶ್ವತ್ಥಮ್ಮ (ಅಯ್ಯರ್) ಸಂಗ್ರಹ : ೧೯೮೪.

## ಅನುಬಂಧಗಳು–೨

**ಕುಂಬಳಕಾಯಿ ಆಟ**

ಗ್ರಾಮೀಣ ಆಟಗಳಲ್ಲಿ ಕುಂಬಳಕಾಯಿ ಆಟವೂ ಒಂದು. ಇದು ಹುಡುಗಿಯರ ಆಟವಾದರೂ ಹುಡುಗರೂ ಸೇರಿಕೊಳ್ಳುತ್ತಾರೆ. ಇಬ್ಬರು ಎದುರು ಬದುರು ನಿಂತು ಪರಸ್ಪರ ಕೈಬೆರಳುಗಳನ್ನು ಸೇರಿಸಿ ಹಿಡಿದು ಗೋಪುರಾಕೃತಿಯಲ್ಲಿ ಕೈಗಳನ್ನೆತ್ತಿ ಕಂಬಗಳಂತೆ ನಿಲ್ಲುತ್ತಾರೆ. ಉಳಿದವರು ಸಾಲಾಗಿ ನಿಂತು ಒಬ್ಬರ ಭುಜದಮೇಲೆ ಒಬ್ಬರು ತಮ್ಮ ಎರಡೂ ಕೈಗಳನ್ನಿಟ್ಟು ಈ ಇಬ್ಬರ ಮಧ್ಯೆ ಪ್ರವೇಶಿಸುತ್ತ ಒಮ್ಮೆ ಎಡಗಡೆ ಕಂಬವನ್ನು ಮತ್ತೊಮ್ಮೆ ಬಲಗಡೆ ಕಂಬವನ್ನು ಸುತ್ತು ಹಾಕುತ್ತಿರುತ್ತಾರೆ. ಈ ಇಬ್ಬರು ಕೊನೆಯಲ್ಲಿ ಬರುವವಳ(ನ)ನ್ನು ತಮ್ಮ ತೋಳ ತೆಕ್ಕೆಯಲ್ಲಿ ಸಿಕ್ಕಿಹಾಕಿಸಿಕೊಳ್ಳುತ್ತಾರೆ. ಕೊನೆಯಲ್ಲಿ ಬರುವವಳು ಇವರ ಗಮನವನ್ನು ಬೇರೆಡೆ ಸೆಳೆದು ಅಥವಾ ಬಗ್ಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಇವರೂ ಹಿಡಿಯಲು ಅಷ್ಟೇ ಪ್ರಯತ್ನಿಸುತ್ತಾರೆ. ಹಿಡಿಯುವಾಗ ಕೈ ಬಿಡುವಂತಿಲ್ಲ. ಹಾಗೆಯೇ ಬಂದಿಸಬೇಕು. ಹೀಗಾಗಿ ಕೆಲವು ಸಲ ಹಿಡಿತಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುತ್ತಾಳೆ. ಹೀಗೆ ತಪ್ಪಿಸಿಕೊಂಡವಳು ಇತರರೊಡನೆ ಸುತ್ತುತ್ತಲೇ ಇರುತ್ತಾಳೆ. ಈ ಕುಂಬಳಕಾಯಿ ಇನ್ನೂ ಬಲಿತಿಲ್ಲ ಎಂದು ಹಾಸ್ಯ ಮಾಡಿಕೊಳ್ಳುತ್ತ ಆಟ ಮುಂದುವರಿಸುತ್ತಾರೆ. ತೋಳ ತೆಕ್ಕೆಗೆ ಸಿಕ್ಕಿಹಾಕಿಕೊಂಡರೆ ಕುಂಬಳಕಾಯಿ ಮುರಿದಂತೆ.

ಕುಂಬಳಕಾಯಿ ಹುಡುಗಿಯಾಗಿದ್ದರೆ ಗಂಡನ ಹೆಸರೇಳು ಎಂದೂ ಹುಡುಗನಾಗಿದ್ದರೆ ಹೆಂಡತಿಯ ಹೆಸರೇಳು ಎಂದೂ ಪೀಡಿಸುತ್ತಾರೆ. ಹೆಸರು ಹೇಳದೆ ಇವರಿಂದ ಬಿಡಿಸಿಕೊಳ್ಳುವ ಹಾಗಿಲ್ಲ. ಆಗ ತಮಗೆ ಇಷ್ಟವಾದ ಹುಡುಗಿ ಹುಡುಗರ ಹೆಸರು ಹೇಳಿ ಇವರಿಂದ ಬಿಡಿಸಿಕೊಳ್ಳುತ್ತಾರೆ. ಹೆಸರು ಹೇಳುವಾಗ ಸಾಮಾನ್ಯವಾಗಿ ಸಾಲಾವಳಿ ಇರುವ ಅಂದರೆ ಸೋದರತ್ತೆ ಸೋದರಮಾವ ಅಥವಾ ಇವರ ಮಕ್ಕಳ ಹೆಸರು ಹೇಳುತ್ತಾರೆ. ಅಪ್ಪ–ಅಮ್ಮ, ಅಣ್ಣ ತಂಗಿ ಈ ರೀತಿಯ ಸೋದರ ಸಂಬಂಧ ಬಾರದ ಬೇರೆ ಯಾರದಾದರೂ ಹೆಸರು ಹೇಳುತ್ತಾರೆ. ಇವರು ಹೇಳುವ ಹೆಸರುಗಳು ಅವರವರ ಊರಿನವರಾಗಿರಬಹುದು, ಆದೇ ಗುಂಪಿನಲ್ಲಿರಬಹುದು ಅಥವಾ ದೂರದ ನೆಂಟರ ಮನೆಯ ಮಕ್ಕಳಾಗಬಹುದು. ಕೆಲವು ಸಾರಿ ಯಾವುದೋ ಒಂದು ಬಾಯಿಗೆ ಬಂದ ಹೆಸರು ಹೇಳಿ ತಪ್ಪಿಸಿಕೊಳ್ಳುವ ಪ್ರಯತ್ನವೂ ನಡೆಯುತ್ತದೆ. ಆದರೆ ಆ ಹೆಸರಿನವರು ಇದ್ದಾರೋ ಇಲ್ಲವೋ ಎಂದು ಆಟದ ಗುಂಪಿನವರಲ್ಲಿ ಕೆಲವರಾದರೂ ಒಪ್ಪಬೇಕು.

ಆಟಕ್ಕೆ ಆಯ್ಕೆ ನಡೆಯುವುದು ಹೀಗೆ; ಇಬ್ಬರು ಎದುರುಬದುರು ನಿಂತು ತಮ್ಮ ಎರಡು ಕೈಗಳನ್ನೆತ್ತಿ ಬೆರಳುಗಳನ್ನು ಸೇರಿಸಿ ತೆಗೆದು ತಮ್ಮ ಎಡಗೈ ಅಂಗೈ ಮೇಲೆ ಬಲಗೈಯನ್ನು ಹಾಕಬೇಕು. ಅಂಗೈ ಮೇಲಾಗುವಂತೆ ಇಟ್ಟರೆ ಗೆದ್ದಂತೆ, ಮುಂಗೈ ಮೇಲಾದರೆ ಸೋತಂತೆ. ಆದರೆ ಇಬ್ಬರೂ ಅಂಗೈ ಮೇಲಾಗುವಂತೆ ಹಾಕಿದರೆ ಯಾರ ಆಯ್ಕೆಯೂ ಆಗುವುದಿಲ್ಲ. ಹಾಗಾಗಿ ಪರಸ್ಪರ ಕೈಹಾಕುವುದನ್ನು ಬದಲಾಯಿಸುತ್ತಿರುತ್ತಾರೆ. ಗೆದ್ದವರು ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ನಿಲ್ಲುತ್ತಾರೆ. ಕೊನೆಯಲ್ಲಿ ಮುಂಗೈ ಮೇಲಕ್ಕೆ ಮಾಡಿ ಹಾಕಿದವಳು ಸಾಲಿನ ಕೊನೆಯಲ್ಲಿ ನಿಂತು ಬೇಗ ಬಲಿತ ಕುಂಬಳಕಾಯಿ ಎನಿಸುತ್ತಾಳೆ. ಗುಂಪಿನಲ್ಲಿ ದೊಡ್ಡವರೆನಿಸಿದ ಹುಡುಗರಿಬ್ಬರು ಆಟದ ನಾಯಕತ್ವವನ್ನು ವಹಿಸಿಕೊಂಡು ಕೊನೆಯವರೆಗೂ ಕುಂಬಳಕಾಯಿ ಮುರಿಯುವವರಾಗಿಯೇ ಉಳಿಯುವುದುಂಟು. ಹುಡುಗಿಯರನ್ನು ಕುಂಬಳಕಾಯಿ ಮುರಿಯುವ ನೆವದಲ್ಲಿ ತಮ್ಮ ತೋಳ ತೆಕ್ಕೆಯಲ್ಲಿ ಬಂಧಿಸಿಡಿದುಕೊಳ್ಳುವುದು ಇವರ ಉದ್ದೇಶ,

### ತಿಂಗಳು ಮಾವನಿಗೆ ಮದುವೆ

ಮಳೆಗಾಗಿ ಪ್ರಾರ್ಥಿಸುವ ತಿಂಗಳು ಮಾವನ ಪೂಜೆ ಪ್ರತಿವರ್ಷ ಮುಂಗಾರು ಮಳೆ ಸಂದರ್ಭದಲ್ಲಿ, ಗೌರಿ ಹಬ್ಬಕ್ಕೆ ಮುಂಚಿತವಾಗಿ ಬೆಳದಿಂಗಳ ರಾತ್ರಿಗಳಲ್ಲಿ ನಡೆಯುತ್ತಿದ್ದ ಕಾಲವೊಂದಿತ್ತು. ಬೋರೆಯಿಂದ ಎಮ್ಮೆ ದನ ಕುರಿ ಮೇಕೆಗಳನ್ನು ಹೊಡೆದುಕೊಂಡು ಬಂದ ಮಕ್ಕಳು ಅವನ್ನು ಕೊಟ್ಟಿಗೆ ಸೇರಿಸಿ ಕೈಕಾಲು ಮುಖ ತೊಳೆದು ಕೈಗಳಲ್ಲಿ ಬೆಣಚುಕಲ್ಲುಗಳನ್ನಿಡಿದು ಕುಟ್ಟುತ್ತಾ,

ಉಯ್ಯೋ ಉಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ

ಎಂದು ಹಾಡುತ್ತ ಮನೆ ಮನೆಗೆ ಹೋಗಿ ರಾಗಿ ಹಿಟ್ಟನ್ನು ಸಂಗ್ರಹ ಮಾಡಿ ಯಾರ ಮನೆಯಲ್ಲಾದರೂ ಉಪ್ಪಿಲ್ಲದ ಸಪ್ಪೆ ರೊಟ್ಟಿ ಮಾಡಿಸುತ್ತಾರೆ.

ರಾತ್ರಿ ಊಟದ ನಂತರ ತಿಂಗಳು ಮಾವನ ಪದ ಹಾಡುವವರು ಹೆಂಗಸರು ಗಂಡಸರು ದೊಡ್ಡವರು ಚಿಕ್ಕವರೆಲ್ಲ ರಂಗದ ಬೀದಿಯಲ್ಲಿ ಸೇರುತ್ತಾರೆ. ಹೆಂಗಳೆಯರು ಬೀದಿಯ ಮಧ್ಯದಲ್ಲಿ ನೆಲವನ್ನು ಸೆಗಣಿಯಿಂದ ಸಾರಿಸಿ ರಂಗೋಲಿ ಇಟ್ಟಿರುತ್ತಾರೆ. ರಂಗೋಲೆ ಪುಡಿಯಿಂದಲೇ ಆಯಾದಿನ ಕಾಣುವ ಚಂದ್ರನ ಆಕೃತಿಯನ್ನು ಬಿಡಿಸಿ ಅದರ ಮೇಲೆ ನೀರು ತುಂಬಿದ ಚೆಂಬನ್ನಿಟ್ಟು ಅದರ ಮೇಲೆ ರೊಟ್ಟಿಗಳನ್ನಿಡುತ್ತಾರೆ. ತಿಂಗಳು ಮಾವನ ಪದ, ಕೋಲಾಟ, ಕಥೆ, ಒಗಟ್ಟಿನ ಆಟ ಮೊದಲಾದ



ಜನಪದ ಸಾಹಿತ್ಯ ಕಲೆ ಕ್ರೀಡೆಗಳನ್ನು ಯಾರು ಯಾರಿಗೆ ಯಾವುದು ಒಪ್ಪುತ್ತೋ ಅಂಥವುಗಳನ್ನು ಹಾಡಿ ಕುಣಿದು ತಿಂಗಳು ಮಾವನ ಪೂಜೆ ಮಾಡಿ ಸಪ್ಪೆರೊಟ್ಟಿಯನ್ನು ಎಲ್ಲರೂ ವಿಶೇಷವಾಗಿ ಮಕ್ಕಳು ಹಂಚಿಕೊಂಡು ತಿಂದು ಅವರವರ ಮನೆಗೆ ಹಿಂತಿರುಗುತ್ತಾರೆ. ದೂರದಲ್ಲೆಲ್ಲೋ ಮಳೆ ಮೋಡ ದಟ್ಟವಾಗಿದ್ದು ಗುಡುಗು ಮಿಂಚು ಕಂಡರೆ ತಮಟೆ, ಹಳೆಯ ಡಬ್ಬ ಇತ್ಯಾದಿಗಳನ್ನು ಬಡಿದುಕೊಂಡು ಕೂಗುತ್ತಾ ಮಳೆ ಮೋಡವಿರುವ ಕಡೆಗೆ ಗಂಡಸರು ಹುಡುಗರು ಓಡುತ್ತಾರೆ. ಈ ಕರೆಗೆ ಓಗೊಟ್ಟಂತೆ ಕೆಲವು ಸಲ ಮಳೆ ಬರುವುದೂ ಉಂಟು. ಮಳೆಬೀಳುವುದು ಗ್ಯಾರಂಟಿಯಾದ ಮೇಲೆ 'ತಿಂಗಳು ಮಾವನನ್ನು ಕಳಿಸಿಬಿಡುತ್ತಾರೆ.'

ಸಾಮಾನ್ಯವಾಗಿ ಹುಣ್ಣಿಮೆ ಅಥವಾ ಅದರ ಹಿಂದು ಮುಂದಿನ ದಿನ ತಿಂಗಳು ಮಾವನನ್ನು ಕಳಿಸುವ ದಿನ. ಮನೆಗೊಂದು ತೆಂಗಿನಕಾಯಿ ಮತ್ತು ಕಾಣಿಕೆ ಎತ್ತಿಕೊಂಡು (ಈಗ ದೊಡ್ಡವರೇ ಮುಂದೆ ನಿಲ್ಲುತ್ತಾರೆ) ಹುರಿಗಡಲೆ, ಬೆಲ್ಲ, ಪುರಿ. ಮಿಠಾಯಿ, ಬತಾಸು ಮೊದಲಾದುವುಗಳನ್ನು ಕೊಂಡುತರುವುದಲ್ಲದೆ ಕಡಲೆ ಉಂಡೆ ಪುರಿಉಂಡೆ, ತಂಬಿಟ್ಟು, ಚಿಗಳಿ ಇತ್ಯಾದಿಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಹುಡುಗರು ಜಮ್ಮು ನೇರಳೆಹಣ್ಣು ತರುತ್ತಾರೆ. ಇವನ್ನೆಲ್ಲ ತಟ್ಟೆಗೆ ತುಂಬಿಡುತ್ತಾರೆ. ಸಾಲಾವಳಿ ಇರುವ ಚಿಕ್ಕ ಹುಡುಗರು ಅಥವಾ ಯುವಕ ಯುವತಿಯರಿಗೇ ಮದುವೆ ಮಾಡುವ ಆಟ ನಡೆಸುತ್ತಾರೆ. ತಿಂಗಳು ಮಾವನ ಮದುವೆಗೆಂದೇ ರಚಿತವಾದ ಹಾಡುಗಳನ್ನು* —ಹೆಣ್ಣು ಕೇಳುವುದರಿಂದ ಮದುವೆ ಮಾಡಿ ಕಳಿಸುವವರೆಗೆ—ಹಾಡಿ ಶಾಸ್ತ್ರೋಕ್ತವಾಗಿ ಮದುವೆ ಮಾಡುತ್ತಾರೆ. ವಾದ್ಯ ಸಮೇತ ಊರೊಳಗೆ ಮೆರವಣಿಗೆಯನ್ನೂ ಮಾಡುತ್ತಾರೆ.

ಇಲ್ಲೂ ಮುತ್ತೈದೆಶಾಸ್ತ್ರ ನಡೆಯುತ್ತದೆ. ಹೆಣ್ಣು ಗಂಡು ಜಾಗ ಬದಲಾಯಿಸುತ್ತಾರೆ. ಪ್ರಸ್ತಾವನೆಯಲ್ಲಿ ಹೇಳಿದಂತೆ ಈ ಸಂದರ್ಭಗಳಲ್ಲೆಲ್ಲ ಮದುವೆ ಆಟದ ಹುಡುಗ ಹುಡುಗಿ ಹೆಸರೇಳಬೇಕು. ಊರೊಳಗೆ ಮೆರವಣಿಗೆ ಹೋದಾಗಲೂ ಮನೆ ಮನೆ ಮುಂದೆ ಅರಿಶಿಣ ಕುಂಕುಮ ಅಕ್ಕಿ ಇಕ್ಕಿಸಿಕೊಂಡು ಅಕ್ಕಿ ಇಕ್ಕಿದವರಿಗೆ ಹೆಸರೇಳಬೇಕು.

ಗ್ರಾಮೀಣ ಮಕ್ಕಳಿಗೆ ಮದುವೆಯೂ ಒಂದು ಆಟ. ಮದುವೆಯ ಎಲ್ಲ ವಿಧಿ ವಿಧಾನಗಳನ್ನು ಅನುಕರಿಸುತ್ತಾರೆ. ಗಂಡ ಹೆಂಡಿರ ಹಾಗೆ ನಟಿಸುತ್ತಾರೆ. ಹೆಣ್ಣು ಮಗು ಅಡಿಗೆ ಮಾಡುತ್ತದೆ, ಗಂಡು ಮಗು ಹೊಲದ ಕೆಲಸಕ್ಕೆ ಹೋಗುತ್ತದೆ. ಇವಳು ಹಿಟ್ಟು ರೊಟ್ಟಿ ಹೊತ್ತುಕೊಂಡು ಹೊಲಕ್ಕೆ ಹೋಗುತ್ತಾಳೆ. ತಡವಾಯಿತೆಂದು ಹೊಡೆಯುತ್ತಾನೆ. ಇಲ್ಲೆಲ್ಲ ತಮ್ಮ ಅಪ್ಪ–ಅಮ್ಮರನ್ನು ಅನುಕರಿಸುತ್ತವೆ ಮಕ್ಕಳು.

*ನೋಡಿ : ಎಚ್.ಎಲ್. ನಾಗೇಗೌಡರ 'ಸೋಬಾನೆ ಚಿಕ್ಕಮ್ಮನ ಪದಗಳು' ಪುಟ–೧೧೩

## ಗಡ್ಡ ಮೀಸೆ ಬಂದಿದ್ದೊ

ಚೊಚ್ಚಲು ಬಸರಿ, ತಾಯಿ ಮನೆಗೆ ಹೆರಿಗೆಗೆ ಒಂದ್ಲು. ಉಗಾದಿ ಕಾಲ ಸೆಖೆ ತಡೆಯಕ್ಕಾಗ್ಲಿಲ್ಲ. ತಂಪೊತ್ ಮಾಡ್ಕೊಂಡು ಹಾಗೇ ತಿರ್ಗಾಡ್ಕೊಂಡು ಬರೊಣಾಂತ ಕೊನೇ ತಮ್ಮುನ್ ಜೊತೇಲಿ ತೋಟುದ್ ಕಡೆ ಹೋದ್ಲು. ಹೋಗೋ ದಾರೀಲಿ ಒಂದು ಮಾವಿನ ಮರ, ಬೇಕಾದಂಗೆ ಕಾಯ್ ಬುಟ್ಟುಟ್ಟದೆ, ಬಸ್ರಿಹೆಂಗ್ಸು ಮಾವಿನಕಾಯಿ ತಿನ್ನಂಗಾಗ್ಬುಡ್ತು. ಕಿತ್ಕೊಳನಾ ಅಂದ್ರೆ ಕೈಗೆ ಎಟಗಾಕಿಲ್ಲ. ಈ ಹುಡ್ಗ ಇನ್ನೂ ಚಿಕ್ದು, ಏನ್ ಮಾಡಾದು ? ಮಾವಿನ ಕಾಯಿ ನೋಡಿದ್ರೆ ಬಾಯ್ಲಿ ನೀರ್ಬತ್ತವೆ. ಒಂದು ಕಲ್ಲು ಉಳ್ಕಿಸ್ಕೊಂಡು ಬಂದ್ಲು, ಗೆಡ್ಡೆಗಾಕಿದ್ಲು, ತಮ್ಮಯ್ಯ, ನಾನೇ ಮೆತ್ಗೆ ಮರಹತ್ತಿ ಮಾವಿನ್‌ಕಾಯಿ ಕೀಳ್ತೀನಿ, ನೀನು ಈ ಕಡೆ ಯಾರಾರ ಬಂದರೆ ನೋಡ್ತಾ ಇರು ಅಂತಹೇಳಿ ನಿದಾನ್ಕೆ ಮರ ಹತ್ತಿದ್ಲು. ಒಂದ್ನಾಲ್ಕು ಮಾವಿನಕಾಯಿ ಕಿತ್ತಾಕಿದ್ಲು, ಕೆಳೀಕೆ ಬಂದು ಅಲ್ಲೇ ಕುಂತ್ಕೊಂಡು ಆಳ್ಗೊಂದೊಂದ್ ಮಾವಿನಕಾಯಿ ತಗೊಂಡು ತಿಂತಾ ಇರ್ಬೇಕಾದ್ರೆ, ಈ ಹುಡಗಿದ್ದುದ್ದು, ಅಕ್ಕಾ ನಿನ್ಗೆ ಗಂಡ್ಮಗ ಹುಟ್ತದೆ ಅನ್ಬೇಕೆ ! ಮಕ್ಳು ಹೇಳಿದ್ದು ನಿಜ ಆಯ್ತದಂತೆ. ಮೊದುಲ್ದೇ ಗಂಡ್ಮಗ ಅಂದ್ರೆ ಯಾವ್ ಹೆಣ್ಣಿಗ್ತಾನೆ ಸಂತೋಷ ಆಗಾಕಿಲ್ಲ. ನಿನ್ಗೆ ಅದೆಂಗಪ್ಪ ಗೊತ್ತು ಅಂದ್ಲು. ಅವನಂದ, ನೀನು ಮರುದ್ಮೇಲೆ ನಿಂತ್ಕೊಂಡು ಮಾವಿನಕಾಯಿ ಕೀಳ್ತಿದ್ದಾಗ ನಾನು ನೋಡ್ದೆ ಕಾಣಕ್ಕ 'ಪಾಪುನ್ಗೆ ಆಗ್ಲೆ ಗಡ್ಡ ಮೀಸೆ ಬಂದಿದ್ದೊ.'

## ಅದೊಂದ್ಕೋಸ್ಕರ ಸುಮ್ನಿದ್ದೀನಿ

ಊರೂರ್ ಮ್ಯಾಲೆ ಬಂದು ತೆಂಗಿನ್ಮರ್ಕೆ ಕತ್ತೆ ಕಟ್ಟರಲ್ಲ ಅವ್ರತ್ರ ಅಗಸೊಂದು ಹೆಂಡ ಮಾರೋನೊಂದು ಕತ್ತೆ ಕೊಂಡ್ಕೊಂಡ್ರು. ಅಗಸ ಬಟ್ಟೆ ಗಂಟೇರನು, ಹೆಂಡ ಮಾರೋನು ಆ ಸಂತೆಗೆ ಈ ಸಂತೆಗೆ ಅಂತ ಹೆಂಡ ಹೇರ್ಕೊಂಡೋಗನು.

ಬಾಳ ದಿನುದ್ಮೇಲೆ ಎರ್ಡು ಕತ್ತೆಗಳೂ ಒಂದ್ಕಡೆ ಸೇರ್ದೊ. ಹೆಂಡ ಮಾರೋನ್ ಕತ್ತೆ ಬಾಳ ಬಡವಾಗಿತ್ತು. ಇದೇನ್ ಮಿತ್ರ ಹಿಂಗಾಗ್ಬುಟ್ಟಿದ್ದೀಯಾ ನಿನ್ನ ನೋಡಿದ್ರೆ ಹೊಟ್ಟೆ ಉರ್ದೋಯ್ತದೆ, ಯಾಕಿಂಗಾಗಿದ್ದೀಯಾ ಅಂತ ಆಗಸುನ್ ಕತ್ತೆ ಕೇಳ್ತು, ಆಯ್ಯೋ ನನ್ ಕಷ್ಟ ಏನೇಳನಪ್ಪ ನಮ್ಮೆಜಮಾನ ಬಿಂಡಿನೂಲೆಸಂತೆ, ಗವಿರಂಗಪ್ಪನ್ ಸಂತೆ, ಬೆಟ್ದಳ್ಳಿ ಸಂತೆ, ಬಾಚಳ್ಳಿ ಸಂತೆ, ಜುಟ್ನಳ್ಳಿ ಸಂತೆ, ಬೋಗಾದಿ ಸಂತೆ ಅಂತ ಸಂತ್ಸಂಗೆಲ್ಲ ನನ್ನ ಮೇಲೆ ಹೆಂಡ ಹೇರ್ಕೊಂಡು ಹೋಯ್ತನೆ.ಹೋದೋನೆ ಅವ್ನ ಯಾಪಾರ ಅವುನ್ಗೆ ನನ್ನ ಒಂದು ಮರ್ಕೆ ಬಿಗುದ್ಬುಡ್ತನೆ. ಹುಲ್ಲೂ ಇಲ್ಲ, ನೀರೂ ಇಲ್ಲ, ಯಾಪಾರನೆಲ್ಲ ಮುಗುಸ್ಕೊಂಡು ಮನೇಗೆ ಬಂದ್‌ಮ್ಯಾಲೆ ಹುಲ್ಲು. ನನ್ಗೊ



ಸಾಕ್ಸಾಕಾಗಿರ್ತದೆ. ರಾಗಿಕಡ್ಡಿ ಬತ್ತುದ್ ಸೆತ್ತೆ ಅಗಿಯಾಕಾದ್ದು ಏನೋ ಒಂದ್ನಾಲ್ಕಡ್ಡಿ ತಿಂದು ಬಿದ್ಕೊತಿನಿ. ಅಂತಾದ್ರಲ್ಲಿ ಇನ್ನೆಂಗಿರ್ಲಿ ಹೇಳು ಅಂತ ಹೆಂಡ್ದೋನ್ ಕತ್ತೆ ಅಂತು. ಅದ್ಕೆ ಅಗಸುನ್ ಕತ್ತೆ, ಮೊದ್ಲೆ ಚೆನ್ನಾಗಿತ್ತಪ್ಪ. ಕೆಲ್ಸಿಲ್ಲ ಗಿಲ್ಸಿಲ್ಲ ಹಗಲೆಲ್ಲ ಮೆಯ್ಕೊಂಡು ಬಂದು ರಾತ್ರಿಯಾವ್ದೊ ಒಂದು ತೆಂಗಿನ್ ಮರುದ್ ಕೆಳ್ಗೆ ನಿಂತ್ಕೊತ್ತಿದ್ದೊ. ಈಗ್ನೋಡು, ಆದ್ರು ನನ್ಗೆ ನಿನ್ನಷ್ಟು ಕಷ್ಟಿಲ್ಲ ಬುಡು. ಏನೊ ಒಂದಿಷ್ಟು ಬಟ್ಟೆ ಜಾಸ್ತಿ ಹೊರ್ಬೇಕು. ಅದೂ ಎಷ್ದೂರ ? ಹಳ್ಳುತ್ತಕ್ಕೆ ಇಕ್ಕಡಿಂದ ಹೊತ್ಗೊಂಡೋಗಿ ಅಕ್ಕಡಿಂದ ಹೊತ್ಕೊಂಡು ಬರೋದು ಅಷ್ಟೆಯ. ನಮ್ಮೆಜಮಾನ ಬಟ್ಟೆ ಒಗೆಯೋಗಂಟ ಅಲ್ಲೇ ಹಳ್ಳುದ್ಪಕ್ದಲ್ಲಿ ಮೇಯ್ಕೊಂಡು ನೀರ್ಕುಡ್ಕೊಂಡು ಮಲ್ಗಿರ್ತೀನಿ. ಹಂಗ್ನೋಡಿದ್ರೆ ಈಗ್ಲೆ ಸುಕ್ವಾಗಿದ್ದೀನಿ. ಮಳೆಗಾಳಿ ಬಿಸ್ಲು ಚಳಿ ಅನ್ನಂಗಿಲ್ಲ. ಬೆಚ್ಗೆ ಕೊಟ್ಗೇಲಿ ಮಲಿಕಂಡು ಸುಕ್ವಾಗಿ ನಿದ್ದೆ ಮಾಡ್ತೀನಿ. ಅಗಸುನ್ ಕತ್ತೆ ಹೆಂಗೊ ನೀನಾರ ಸುಕ್ವಾಗಿರಪ್ಪ ಅಂತು.

ಆಗ ಹೆಂಡ್ದೋನ್ಕತ್ತೆ ಅಗ್ಸನ್ಕತ್ಗೆ : ಮಿತ್ರ ನಾನೊಂದ್ ಮಾತೇಳ್ತೀನಿ ಹಂಗ್ಮಾಡು ಇಬ್ರೂ ಸುಕ್ವಾಗಿರ್ಬೋದು ಅಂತು.

ಅದೇನೇಳಪ್ಪ.

ಏನಿಲ್ಲ, ಸುಮ್ನೆ ನಮ್ಮೆಜಮಾನ್ನತ್ರಕೆ ಬಂದ್ಬುಡು. ಆಳ್ಗೊಷ್ಟಷ್ಟು ಬಟ್ಟೆ ಹೊತ್ಕೊಂಡು ಆರಾಮಾಗಿದ್ಬುಡನ.

ಬಂದ್ಬುಡಿವೆ ಮಿತ್ರ ಒಂದ್ಕೋಸ್ಕರ ಸುಮ್ನಿದ್ದೀನಿ.

ಅದೇನಪ್ಪ ಅಂತಾದ್ದು ?

ಏನಿಲ್ಲ, ಸಂತ್ಸೆಂತೆಲೆಲ್ಲ ನಮ್ಮೆಜ್ಮಾನ ಹೆಂಡ ಮಾರ್ತಾನಲ್ಲ. ಕಂಡ್ಕೊಂಡೋರ್ಗೆಲ್ಲ ಸಾಲ ಕೊಟ್ಬುಡ್ತನೆ. ಅವ್ರೊ ಸಾಲ ಕುಡ್ದೋರು ದುಡ್ಕೊಡ್ದೆ ತಿರಿಕಂಡ್ ಇಲ್ಲೇ ಬತ್ತಾರೆ ಹೆಂಡ ಕುಡ್ಯೋಕೆ. ಸಾಲದ್ದುಡ್ಕೇಳಿದ್ರೆ ಮುಂದಿನವಾರ ಕೊಡ್ತೀನಿ ಆಚೆವಾರ ಕೊಡ್ತೀನಿ ಅಂತ ಹೇಳ್ತಾರೆ. ಇಂತಾವ್ರಿಂದ ನಮ್ಮೆಜ್ಮಾನ್ನಿಗೂ ರೋಸೋಗದೆ ಬುಡು ಮರ್ಯಾದೆ ಇಲ್ಲುದ್ನ ಬೈದ್ರು ಕ್ಯಾಕುರ್ಸಿ ಉಗುದ್ರು ಇಲ್ಲೇ ಬಂದು ಸಾಯ್ತವೆ ಹೆಂಡ್ದಾಸ್ಗೆ. ಹೊಟ್ಗೆ ಹಿಟ್ದಿಲ್ದೆ ಬಿಸ್ಲು ಮಳೆ ಅನ್ದೆ ಶಿವ್ನೆ ನಾರಾಯಣ ಅಂತ ದುಡ್ಯೋನ್ಗೆ ದುಡ್ಕೊಡ್ಬೇಕಾದರೂ ಕೊಡ್ದೆ ತಿರ್ಗ ಸಾಲ ಕೇಳಿದ್ರೆ ಸುಮ್ನಿರಕಾದತ್ತೆ ನೀನೇ ಹೇಳು. ಸಾಲ ಕೇಳಿ ಕೇಳಿ ಸಾಕಾದಾಗ, 'ಥೂ ನಿನ್ಮೊಂಡ್ರು ತುಲ್ಗೆ ನನ್ನ ಕತ್ತೆ ದಡಿ ಮಡ್ಗ' ಅಂತ ಬೈಯ್ತಿರ್ತಾನೆ ನಮ್ಮೆಜ್ಮಾನ. ಅದೊಂದ್ಕೋಸ್ಕರ ಸುಮ್ನಿದ್ದೀನಿ, ಯಾವತ್ತಾರಾ ಅಂತ ಚಾನ್ಸು ಸಿಕ್ಕತ್ತಾಂತ. ಇಲ್ದೇ ಇದ್ರೆ ನಾನು ಇಲ್ಲೀಗಂಟ ಆ ಹೆಂಡ ಹೊತ್ಗೊಂಡು ಹಿಂಗೆ ಮೂಳೊಂದು ಚಕೆಳ್ಳೊಂದು ಅಂತ ಸಾಯ್ತಿದ್ನೆ ?

# ದಕ್ಷಿಣ ಕರ್ನಾಟಕದ ಒಡಪುಗಳು

ಉತ್ತರ ಕರ್ನಾಟಕದ ಕಡೆಯಿಂದ ಈಗಾಗಲೇ ಸಾಕಷ್ಟು ಒಡಪು ಸಂಕಲನಗಳು ಬೆಳಕು ಕಂಡಿವೆ. ದಕ್ಷಿಣ ಕರ್ನಾಟಕದಲ್ಲಿ ಈ ಬಗ್ಗೆ ಜಾನಪದ ವಿದ್ವಾಂಸರು ದೃಷ್ಟಿ ಹರಿಸದೇ ಇದ್ದ ಕಾರಣ ಈ ಭಾಗದಲ್ಲಿ ಒಡಪು ಹೇಳುವ ಸಂಪ್ರದಾಯವೇ ಇಲ್ಲ ಎಂಬ ಭಾವನೆ ಮೂಡಲು ಕಾರಣವಾಯಿತು. ಆದರೆ ಶ್ರೀ ವಿ. ಎನ್. ಶಿವರಾಮು ಈ ಭಾವನೆಯನ್ನು ಈಗ ಸುಳ್ಳಾಗಿಸಿದ್ದಾರೆ. ದಕ್ಷಿಣ ಕರ್ನಾಟಕದ ಅನೇಕ ಭಾಗಗಳಲ್ಲಿ ಅವರು ಸಂಚರಿಸಿ ತಮ್ಮ ಬಹು ವರ್ಷಗಳ ಪರಿಶ್ರಮದ ಫಲವಾಗಿ 700ಕ್ಕೂ ಹೆಚ್ಚು ಒಡಪುಗಳನ್ನು ಸಂಗ್ರಹಿಸಿ 'ದಕ್ಷಿಣ ಕರ್ನಾಟಕದ ಒಡಪುಗಳ' ಸಂಕಲನವನ್ನು ಸಿದ್ದಗೊಳಿಸಿದ್ದಾರೆ. ಅಜ್ಞಾತ ಜಾನಪದ ಶಾಖೆಯೊಂದು ದಕ್ಷಿಣ ಕರ್ನಾಟಕದ ವಿವಿದೆಡೆಗಳಲ್ಲಿ ಗುರುತಿಸಲ್ಪಟ್ಟಿರುವುದು ಜಾನಪದ ಸಂಶೋಧಕರ ದೃಷ್ಟಿಯಿಂದ ಮಹತ್ವದ ವಿಷಯವಾಗಿದೆ. ಈ ಕಾರಣಕ್ಕಾಗಿ ಉತ್ಸಾಹಿ ಜಾನಪದ ವಿದ್ವಾಂಸರಾದ ಶ್ರೀ ಶಿವರಾಮು ಅವರನ್ನು ನಾನು ಮನಸಾರೆ ಅಭಿನಂದಿಸುತ್ತೇನೆ.

ಶ್ರೀ ಶಿವರಾಮು ಅವರು ದಕ್ಷ ಕ್ಷೇತ್ರಕಾರ್ಯಕರ್ತರು. ಜಾನಪದವನ್ನು ತಮ್ಮ ಬದುಕಿನ ಉಸಿರಾಗಿ ಮಾಡಿಕೊಂಡವರು. ಅನೇಕ ಜಾನಪದ ವಿದ್ವಾಂಸರು ಬಹು ಸುಲಭವಾಗಿ ಲಭ್ಯವಾಗುವ ಕಥೆ, ಗೀತೆ, ಕಾವ್ಯ ಇತ್ಯಾದಿಗಳನ್ನು ಸಂಗ್ರಹಿಸಿಕೊಂಡರೆ ಇವರು ವಿರಳವಾಗಿ ಲಭ್ಯವಾಗುವ ಒಡಪು ಪ್ರಕಾರದ ಬೆನ್ನು ಹತ್ತಿ ನೂರಾರು ಸಂಖ್ಯೆಯಲ್ಲಿ ಅವುಗಳನ್ನು ಸಂಗ್ರಹಿಸಿ ತಂದು ದಕ್ಷಿಣ ಕರ್ನಾಟಕದಲ್ಲಿ ಕಂಡುಬರದಿದ್ದ ಒಂದು ಕೊರತೆಯನ್ನು ತುಂಬಿದ್ದಾರೆ. ಶ್ರೀ ಶಿವರಾಮು ಈ ನಿಟ್ಟಿನಲ್ಲಿ ಎಲ್ಲರ ಮೆಚ್ಚುಗೆಗೂ ಪಾತ್ರರಾಗುವಂತಹ ಕೆಲಸವನ್ನು ಮಾಡಿ ಒಳ್ಳೆಯ ದಾಖಲೆಯನ್ನು ಸ್ಥಾಪಿಸಿದ್ದಾರೆ.

**ಡಾ. ಜೀ. ಶಂ. ಪರಮಶಿವಯ್ಯ**
(ಅಧ್ಯಕ್ಷರ ನುಡಿಯಿಂದ)